ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು

ಪ್ರಸಾದ

ಮಾಸಿಕ

ಆಗಸ್ಟ್ 2026 * ಸಂಪುಟ 41 * ಸಂಚಿಕೆ 8



ವಿಶೇಷ ಸಂಚಿಕೆ

ಪರಮಪೂಜ್ಯ ಜಗದ್ಗುರು
ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ

111ನೇ ಜಯಂತಿ ಮಹೋತ್ಸವ



ಬೆಂಗಳೂರಿನಲ್ಲಿ ಬನ್ನಂಜೆ 90ರ ವಿಶ್ವನಮನ ಯಾತ್ರೆಯ ಸಮಾರೋಪ ಸಮಾರಂಭವು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು. ಸೋಸಲೆ, ಪುತ್ತಿಗೆ, ಹರಿಹರಪುರ ಹಾಗೂ ಸಿರಿಗೆರೆ ಶ್ರೀಗಳಿದ್ದಾರೆ (1 ಆಗಸ್ಟ್ 2026)



ಪ್ರಸಾದ

ಸಂಪುಟ 41 : ಸಂಚಿಕೆ 8 ಆಗಸ್ಟ್ 2026

ಪರಮಪೂಜ್ಯ ಜಗದ್ಗುರು
ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ
111ನೇ ಜಯಂತಿ ಮಹೊತ್ಸವ
ವಿಶೇಷ ಸಂಚಿಕೆ

ಡಾ. ಎಂ.ಎನ್. ನಂದೀಶ್ ಹಂಚೆ
ಸಂಪಾದಕರು

ಜೆಎಸ್ಎಸ್ ಮಹಾವಿದ್ಯಾಪೀಠ
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004
ದೂರವಾಣಿ : 0821–2548212, Extn. 49



ಪ್ರಸಾದ ವಿಶೇಷ ಸಂಚಿಕೆ

ಸಂಸ್ಥಾಪಕರು

ಶ್ರೀಮನ್ಮಹಾರಾಜ ರಾಜಗುರುತಿಲಕ

ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು

ಅಧ್ಯಕ್ಷರು

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು

ಸಂಪಾದಕ ಸಲಹಾ ಸಮಿತಿ

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು
ಡಾ. ಸಿ.ಜಿ. ಬೆಟಸೂರಮಠ
ಶ್ರೀ ಎಸ್.ಪಿ. ಮಂಜುನಾಥ್
ಡಾ. ಎನ್.ಎಸ್. ತಾರಾನಾಥ
ಡಾ. ಬಿ.ವಿ. ವಸಂತಕುಮಾರ್
ಡಾ. ವೈ.ಸಿ. ಭಾನುಮತಿ
ಪ್ರೊ. ಮೊರಬದ ಮಲ್ಲಿಕಾರ್ಜುನ

ಸಂಪಾದಕ ಸಮಿತಿ

ಡಾ. ಎಂ.ಎನ್. ನಂದೀಶ್ ಹಂಚೆ (ಸಂಪಾದಕರು)
ಶ್ರೀ ಆರ್.ಎಸ್. ಪೂರ್ಣಾನಂದ
ಶ್ರೀ ಕುಮಾರಸ್ವಾಮಿ ವಿರಕ್ತಮಠ

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ
ವಿಷಯಗಳ ಬಗ್ಗೆ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ.
ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು

ದಶವಾರ್ಷಿಕ ಚಂದಾ : 500/- * ಬಿಡಿ ಪ್ರತಿ : 10/-



ಪರಿವಿಡಿ

ಗುರುವಾಣಿ	5
ಸಂಪಾದಕೀಯ	8
ಪೂರ್ಣದೃಷ್ಟಿ	12
ಸಂತೆಯೊಳಗೊಂದು ಮನೆಯ ಮಾಡಿ....	15
ಹಂಬಲ	19
ಕಾಣಿಕೆ	23
ಸ್ಥಾನ–ಮಾನ	27
ನಾಸ್ತಿಕ...	31
ಹೇಮ ನಿನ್ನದಲ್ಲ	34
ಆಶಯ	38
ಸೈಕಲ್ ಬಾಡಿಗೆ!	41
ಶುಲ್ಕ	44
ತೋರುಂಬ ಲಾಭ	48
ಬೆಳಕಿನ ದಾರಿ ತೋರಿದವರು	51
ಜಾತಿ ವಿಜಾತಿ ಎನ್ನದ ಶ್ರೀಗಳು	54
ಹೊನ್ನು ಹೊರೆ	57
ಬಂಗಾರ ಸ್ವಾಮಿ	60
ಅನ್ನ ದೇವರು	62
ವಾತ್ಸಲ್ಯಮಯಿ	65
ಇವ ನಮ್ಮವ	68
ಶ್ರೀರಾಜೇಂದ್ರಾಷ್ಟಕಮ್	71
ವಾರ್ತಾವಿಹಾರ	73



ಕರುಣಾಸಾಗರ

ಜರಗನಹಳ್ಳಿ ಶಿವಶಂಕರ್

ಸೂರ್ಯನ ನೆನಪಲಿ ನಿಂದ
ಬೆಳದಿಂಗಳ ಚಂದ್ರ
ಜ್ಞಾನದ ಬೆಳಕನು
ನೀಡಲು ಬಂದ ರಾಜೇಂದ್ರ
ಶಿವರಾತ್ರೀಶ್ವರ ಗುರು ರಾಜೇಂದ್ರ.

ಹಣ್ಣು ಹೂ ನೆರಳನು ಚೆಲ್ಲುತ
ನಿಂತ ಮರ
ತಾಯಿಯ ತೆರದಲಿ ಬಂದ
ಕರುಣಾಮಯಿ ರಾಜೇಂದ್ರ
ಶಿವರಾತ್ರೀಶ್ವರ ಗುರು ರಾಜೇಂದ್ರ.

ಶ್ರೀಮಂತರ ಒಡಲಲಿ ಬಂಗಾರ
ಔದಾರ್ಯಕೆ ಕಾಣದ ಸಿಂಗಾರ
ಶಿಕ್ಷಣ ಶಾಶ್ವತ ಭಂಡಾರ
ಎಂದರು ನಮ್ಮ ರಾಜೇಂದ್ರ
ಶಿವರಾತ್ರೀಶ್ವರ ಗುರು ರಾಜೇಂದ್ರ.

ಎತ್ತರ ಗೌರಿಶಂಕರ ಶಿಖರ
ಸತ್ಯ ಶಿವ ಸುಂದರ ಮಂದಾರ
ಹತ್ತಿರ ಸುತ್ತೂರು ಶ್ರೀಕ್ಷೇತ್ರ
ಬಡವರ ಭಕ್ತರ ಆಧಾರ
ಶಿವರಾತ್ರೀಶ್ವರ ಗುರು ರಾಜೇಂದ್ರ
ನಿಮ್ಮ ಕರುಣೆ ಅಪಾರ.



ಗುರುವಾಣಿ

ಕರ್ಮವೆಂಬ ಕತ್ತಲೆಯಲ್ಲಿ ಒಬ್ಬ ಮಾನವನು
ವರ್ಮಗೆಟ್ಟು ಬಿದ್ದಿರುವುದ ಕಂಡೆನಯ್ಯ
ಧರ್ಮವೆಂಬ ಗುರುವು ನಿರ್ಮಳವೆಂಬ ಚಬಕ ಹಾಕಲು
ಕರ್ಮವೆಂಬ ಕತ್ತಲೆ ಹರಿದು, ವರ್ಮವೆಂಬ ದಾರಿಯನೇರಿ
ಧರ್ಮವೆಂಬ ಗುರುವ ಕೂಡಿ
ನಿರವಯವೆಂಬ ಕರಸ್ಥಲದಲ್ಲಿ ನಿಂದಿರುವ ಬೆಡಗ ನೋಡಾ
ಝೇಂಕಾರ ನಿಜಲಿಂಗಪ್ರಭುವೆ

ವಚನಕಾರ ಜಕ್ಕಣಯ್ಯನ "ನಿರಾಳ ಮಂತ್ರಗೋಪ್ಯ"ದ ಈ ವಚನವು, ಶ್ರೀಮಠದ ಕಾಯಕತತ್ತ್ವಕ್ಕೆ ಹೊಸ ಭಾಷ್ಯ ಬರೆದು, ಘನತರ ಚಿತ್ರಣಕ್ಕೆ ಸುವರ್ಣದ ಚೌಕಟ್ಟನ್ನು ನಿರ್ಮಿಸಿದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರನ್ನು ಪ್ರತಿಮೀಕರಿಸುತ್ತದೆ.

ಕರ್ಮದ ವಿಚಾರವನ್ನು ಮೊದಲಿಗೆ ಪ್ರತಿಪಾದಿಸಿದವರು ಮೀಮಾಂಸಕರು. ಭಾರತೀಯ ದರ್ಶನಗಳೆಲ್ಲವೂ ಒಮ್ಮತದಿಂದ ಅಂಗೀಕರಿಸಿರುವ ಸಿದ್ಧಾಂತವಿದು. ದರ್ಶನದಲ್ಲಿ ಮಾತ್ರವಲ್ಲದೆ, ನಿತ್ಯಜೀವನದಲ್ಲೂ ಕರ್ಮದ ಕಲ್ಪನೆಯು ವಿಸ್ತಾರವಾಗಿದೆ. "ಕರ್ಮ" ಎನ್ನುವ ಪದ "ಕೃ" ಧಾತುವಿಂದ ಬಂದಿದೆ. ಕರ್ಮವೆಂದರೆ ಕ್ರಿಯೆ. ಮೀಮಾಂಸಕರ ಪ್ರಕಾರ ಫಲಪ್ರಾಪ್ತಿಗಾಗಿ ಮಾಡುವ ಕ್ರಿಯಾಕಲಾಪವೇ ಕರ್ಮ. "ಕರ್ಮಾಣಿ ಬೋಧನಾರ್ಥ ವಿದ್ಯಾ" ಎಂದರೆ, ವಿದ್ಯೆಯು ಕರ್ಮದಲ್ಲಿ ಪರ್ಯವಸಾನ ಹೊಂದಬೇಕು ಎನ್ನುವುದು ಇಲ್ಲಿನ ಉದ್ದೇಶ. ಮೀಮಾಂಸೆಯನ್ನು ಕುರಿತು ಶಾಬರಸ್ವಾಮಿಯು ಬರೆದ ಭಾಷ್ಯದ ಪ್ರಕಾರ ಮೀಮಾಂಸಕರಲ್ಲಿ ಸತ್ಕ್ರಿಯೆಗೆ ಮಾತ್ರ ಕರ್ಮವೆಂದರ್ಥ. ಈ "ಕರ್ಮ" ಶಬ್ದವನ್ನು "ಧರ್ಮ" ಎಂಬ ಅರ್ಥದಲ್ಲಿ ಅವರು ಉಪಯೋಗಿಸುತ್ತಾರೆ. ಆದರೆ ಎಲ್ಲ ಕಾಲದಲ್ಲೂ, ಎಲ್ಲ ಸಂದರ್ಭಗಳಲ್ಲೂ ಕರ್ಮವೇ ಧರ್ಮವಾಗುವುದಿಲ್ಲ. ಧರ್ಮದಲ್ಲಿ ಅದೂ ಒಂದು ಅಂಶ ಅಷ್ಟೆ. ಮೇಲಿನ ವಚನದಲ್ಲಿ ಕರ್ಮವೆಂಬುದನ್ನು ಕಾರ್ಯ, ಕ್ರಿಯೆ ಎಂದೇ ತಿಳಿಯಬೇಕು. ಆದರೆ ಕ್ರಿಯೆ ಅಥವಾ ಕಾರ್ಯ ಹೇಗೆ ಕತ್ತಲೆಯಾಗುತ್ತದೆ ಎಂದರೆ, ಅದರ ಮರ್ಮವನ್ನು ಅರಿಯದೆ ಆಚರಿಸಿದಾಗ. ಮರ್ಮ ಎಂದರೆ ರಹಸ್ಯ, ಗುಟ್ಟು ಎಂದರ್ಥ. ಪ್ರತಿಯೊಂದು ಕಾರ್ಯದ ಹಿಂದೆಯೂ ಅದರ ಅರಿವಿರಬೇಕು. ಹಾಗಿಲ್ಲದೆ



ಅಜ್ಞಾನದಿಂದ ವೃಥಾಕ್ರಿಯೆಯಲ್ಲಿ ತೊಡಗಿದ ಸಂದರ್ಭದಲ್ಲಿ, ಧರ್ಮವೆಂಬ ಗುರುವು, ಮಲತ್ರಯರಹಿತ ನಿರ್ಮಲಚಿತ್ತದಿಂದ ಚಬಕದಲ್ಲಿ ಅಂದರೆ ಬಾರುಕೋಲಿನಿಂದ ಬಾರಿಸಿದಾಗ ಕರ್ಮದ ಕತ್ತಲೆ–ಅಜ್ಞಾನ ಹರಿಯುತ್ತದೆ.

ಮೇಲಿನ ಜಕ್ಕಣ್ಣನ ವಚನದ ಕಡೆಯ "ಧರ್ಮವೆಂಬ ಗುರು ಕೂಡಿ, ನಿರವಯವೆಂಬ ಕರಸ್ಥಲದಲ್ಲಿ ನಿಂತಿರುವ ಬೆಡಗು" ಎರಡು ಸಾಲುಗಳು ಗಮನಾರ್ಹ, ಇಲ್ಲಿ ಧರ್ಮ, ಗುರು, ನಿರವಯ, ಬೆರಗು ಎಂಬ ನಾಲ್ಕು ಪದಗಳು ಪರಮಪೂಜ್ಯ ರಾಜೇಂದ್ರ ಶ್ರೀಗಳವರಲ್ಲಿ ನೆಲೆಯಾಗಿದ್ದ ಯುಗಯಾತ್ರೀ ಚೈತನ್ಯವನ್ನು ಪ್ರತಿಬಿಂಬಿಸುತ್ತವೆ. ಧರ್ಮವೆಂದರೆ ಮೇಲೆತ್ತುವುದು ಎಂದರ್ಥ. ಇಲ್ಲಿ ಗುರು ಎಂದರೆ ಕತ್ತಲಿನಿಂದ ಬೆಳಕಿಗೆ ಒಯ್ಯುವವನು; ನಿರವಯವೆಂದರೆ ಅವಯವವೇ ಇಲ್ಲದಿರುವುದು, ಬೆಡಗು ಎಂದರೆ ಸೋಜಿಗ.

ಪರಮಪೂಜ್ಯ ರಾಜೇಂದ್ರ ಶ್ರೀಗಳವರ ಇಡೀ ಬದುಕೇ ಈ ನಾಲ್ಕು ವಿಧದ ಗುಣಲಕ್ಷಣಗಳಿಂದ ಕೂಡಿತ್ತು. ಪರಂಪರೆ, ಆಯ್ದುಕೊಂಡ ಮಾರ್ಗ, ಅಲಂಕರಿಸಿದ ಸ್ಥಾನ, ಅಂತರಂಗದ ಆಲೋಚನೆ ಎಲ್ಲವೂ ಅವರ ಪಾಲಿಗೆ ಧರ್ಮವೇ ಆಗಿತ್ತು. ಅವರಿಗೆ ಜನರನ್ನು ಅಜ್ಞಾನದಿಂದ ಮೇಲೆತ್ತಬೇಕೆಂಬ ವಾಂಛೆ ಉಸಿರಾಗಿತ್ತು, ಧ್ಯೇಯವಾಗಿತ್ತು. ಅದು ಇಡೀ ಬದುಕಿನುದ್ದಕ್ಕೂ ಅವರನ್ನು ಆವರಿಸಿಕೊಂಡಿತ್ತು. ಆ ಆಶಯವೇ ಅವರನ್ನೊಂದು ದಿವ್ಯ ಬೆಳಕಾಗಿಸಿತು.

ಜಗತ್ತಿನಲ್ಲಿ ಪ್ರತಿ ವಸ್ತುವೂ ಚೈತನ್ಯವೊಂದರ ಕೃಪೆಯಿಂದ, ಅದು ನೀಡುವ ಬೆಳಕಿನ ಕಾರಣದಿಂದ ಬೆಳಗುತ್ತದೆ. ಅಸೀಮ ಚೈತನ್ಯಕ್ಕೆ ಮಾತ್ರ, ಭಗವದ್ವಿಭೂತಿಗೆ ಮಾತ್ರ ಸ್ವತಃ ಮಾಣಿಕ್ಯದ ದೀಪ್ತಿಯಂತೆ ಪ್ರಕಾಶವಾಗಿರುವುದು ವಿಶೇಷ. ಅದು ಯಾವುದೋ ಕಾಲದ ಪರಿಮಿತಿಯಲ್ಲಿ ಹೊಳೆದು ನಂದುವಂಥದಲ್ಲ. ಸದಾ ಜ್ಯೋತಿರ್ಲಿಂಗವಾಗಿ ತನ್ನ ಸಂಸರ್ಗಕ್ಕೆ ಬರುವ ಎಲ್ಲವನ್ನೂ, ಎಲ್ಲರನ್ನೂ ತನ್ನಂತೆ ಬೆಳಗಿಸಿ ಬಿಡುಗಡೆಯ ಹಾದಿಯನ್ನು ತೋರಿಸುತ್ತದೆ. ಈ ಬೆಳಕಿಗೆ ಜಡ–ಚೈತನ್ಯವೆಂಬ ಯಾವುದೇ ದ್ವಂದ್ವವಾಗಲಿ, ಭೇದವಾಗಲಿ ಇಲ್ಲ. ಅದೊಂದು ಅದ್ವೈತದ ನೆಲೆ, ಹಾಗಾಗಿಯೇ ಪರಮಪೂಜ್ಯ ರಾಜೇಂದ್ರ ಶ್ರೀಗಳಿಗೆ ಕೋಣೆಯೊಂದರಲ್ಲಿ ಸಿಕ್ಕಿಹಾಕಿಕೊಂಡಿದ್ದ ನಾಯಿಮರಿಯು ಇತರರಿಗೆ ಮೇಲ್ನೋಟಕ್ಕೆ ಪ್ರಮುಖವಾದುದಲ್ಲವಾಗಿ ಕಂಡರೂ, ಅದು ತನ್ನೊಳಗೆ ಪರಮಾತ್ಮನನ್ನು ಇಟ್ಟುಕೊಂಡ ಭಗವದಂಶವಾಗಿ ಗೋಚರಿಸುತ್ತದೆ. ಮತ್ತೊಂದು ಸಂದರ್ಭದಲ್ಲಿ ತಾವು



ಉಪಯೋಗಿಸುತ್ತಿದ್ದ ಕಾರು ಅಪಘಾತಕ್ಕೊಳಗಾದಾಗ ಅದಕ್ಕಾಗಿ ಮರುಗಿದ ರೀತಿಯನ್ನು ನೋಡಿದರೆ ಅವರ ಹೃದಯವು ನಿರ್ಜೀವ ವಸ್ತುಗಳಿಗೂ ಎಷ್ಟೊಂದು ಸ್ಪಂದಿಸುತ್ತಿತ್ತೆಂಬುದು ಗೊತ್ತಾಗುತ್ತದೆ. ಆದುದರಿಂದಲೇ ಅವರು ಎಲ್ಲರ ಪಾಲಿನ ಬೆಳಕಾಗಿದ್ದರು, ಗುರುಗಳಾಗಿದ್ದರು. ಇಂದಿಗೂ ಸರ್ವರಿಗೂ ಬೆಳಕಾಗಿ ತೋರುತ್ತಿರುವರು.

ಪೂಜ್ಯ ರಾಜೇಂದ್ರ ಶ್ರೀಗಳು ಭೌತಿಕವಾಗಿ ಇಂದು ನಮ್ಮೊಡನಿಲ್ಲ. ಅವರ ಭೌತಿಕ ಶರೀರ ಕಣ್ಣ ಮುಂದೆ ಇಲ್ಲ. ಕೇವಲ ಶರೀರದಿಂದಲೇ ಜೀವಿಸುವ ಸಾಮಾನ್ಯರ ರೀತಿ ಲೋಕದಲ್ಲಿ ಸರ್ವವಿದಿತ. ಆದರೆ ಈ ಸಹಜ ವಿಚಾರವೇ ನಿರವಯವಾದ ಆತ್ಮತತ್ತ್ವಕ್ಕೆ ವಿರುದ್ಧವಾದುದು. ಹಾಗೆ ನೋಡಿದರೆ ಆತ್ಮದ ಅಸ್ತಿತ್ವದಿಂದಲೇ ಅವಯವಕ್ಕೆ ಗೌರವ. ಅವಯವದ ಸಿದ್ಧಿ, ಸಾಧನೆಗಳಿಗೆಲ್ಲ ಆತ್ಮವೇ ಆಧಾರ. ಆತ್ಮನ ಮೂಲಕವೇ ಪರಮಾತ್ಮ, ಮಹಾತ್ಮ ಎಲ್ಲವೂ ಸಾಧ್ಯವಾಗುವುದು. ಬದುಕಿದ್ದಾಗ ಮಾತ್ರ ವ್ಯಕ್ತಿಗೆ ಸಲ್ಲುವ ಗೌರವ, ತೋರುವ ವಿಧೇಯತೆ ಕ್ಷಣಿಕವಾದದ್ದು, ಕೃತಕವಾದದ್ದು. ಹೌದು, ಅವರ ಅನುಪಸ್ಥಿತಿಯಲ್ಲಿಯೂ ಸದಾ ಬೆಳಗುತ್ತ ಜನರನ್ನು ಧರ್ಮಮಾರ್ಗದಲ್ಲಿ ನಡೆಸುವ ದಾರಿದೀಪವೇ ಗುರು. ಆ ಚೈತನ್ಯವೇ ನಿಜದ ಬೆಳಕು. ಆ ಬೆಳಕನ್ನು ಗುರು, ದೇವರು ಎಂಬ ಯಾವುದೇ ಹೆಸರಿನಿಂದ ಕರೆದರೂ ನಡೆಯುತ್ತದೆ. ಆ ಅಲೌಕಿಕ ಬೆಳಕು ಅಂತರತಮ ಕೇಂದ್ರವನ್ನು ಮುಟ್ಟುವ ಗುರುವಾಗಿರುತ್ತದೆ, ಚೈತನ್ಯವಾಗಿರುತ್ತದೆ.

ಪರಮಪೂಜ್ಯ ರಾಜೇಂದ್ರ ಶ್ರೀಗಳು ಇಹದ ಯಾತ್ರೆಯನ್ನು ಮುಗಿಸಿ, ಬಹಳ ಕಾಲ ಕಳೆದಿದೆ. ಇಂದಿಗೂ ಅವರನ್ನು ನೆನೆದು ಭಾವುಕರಾಗುವ ಭಕ್ತರ ಸಂಖ್ಯೆ ಅಗಣಿತ. ಅವರನ್ನು ಸದಾ ಸ್ಮರಿಸುವ, ಅನುಸರಿಸುವ ಜನಸ್ತೋಮವನ್ನು ಕಂಡಾಗಲೆಲ್ಲ ಅವರದೊಂದು ಭೂಮ ವ್ಯಕ್ತಿತ್ವವೆನಿಸುತ್ತದೆ, ಸೋಜಿಗವೆನಿಸುತ್ತದೆ. ಅವರ ಬಾಳುವೆಯೆ ಒಂದು ಅಚ್ಚರಿಯ ಸರಣಿ. ಇರುವಾಗ ಮಾತ್ರವಲ್ಲ, ಇಲ್ಲದಿರುವಾಗಲೂ ಕೂಡ ಸೋಜಿಗವನ್ನು ಉಂಟುಮಾಡುವುದು ದಿವ್ಯಚೈತನ್ಯಕ್ಕೆ ಮಾತ್ರ ಸಾಧ್ಯ. ಶ್ರೀಗುರುಗಳ ಪಾದಕಮಲದ ಪರಿಮಳವನ್ನುಂಡು ಜೇನು ಒಸರುವ ಜೇನ್ನೊಣಗಳಂತಹ ಬಾಳುವೆ ಅವರದು. ಅವರ ಕೃಪೆಗೆ ಒಳಗಾದ ಎಲ್ಲರಲ್ಲೂ ಇಂಥ ದೈವತ್ವ ಅರಳಲೆಂದು ಹಾರೈಸುತ್ತೇವೆ.

ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು



ಸಂಪಾದಕೀಯ

ಗರ್ವ ಪಡದುಪಕಾರಿ ದರ್ಪ ಬಿಟ್ಟಧಿಕಾರಿ
ನಿರ್ವಿಕಾರದ ನಯನದಿಂ ನೋಳ್ಪುದಾರಿ ।
ಸರ್ವಧರ್ಮಾಧಾರಿ ನಿರ್ವಾಣ ಸಂಚಾರಿ
ಉರ್ವರೆಗೆ ಗುರುವವನು – ಮಂಕುತಿಮ್ಮ ॥

ಕನ್ನಡದಲ್ಲಿ ಉಪನಿಷತ್ತಿನ ಧಾರೆಯನ್ನೆಲ್ಲ ಎರಕಹೊಯ್ದು ಸಹೃದಯರಿಗೆ ಉಣಬಡಿಸಿದ ಡಿ.ವಿ.ಜಿ.ಯವರ ಮಂಕುತಿಮ್ಮನ ಕಗ್ಗದ ಈ ಪದ್ಯ ಗುರುವಿನ ಪರಿಪೂರ್ಣ ಚೈತನ್ಯಕ್ಕೆ ಹಿಡಿದ ಕನ್ನಡಿಯಂತಿದೆ. "ಜಂಬ ಪಡದ ಉಪಕಾರಿ, ದರ್ಪ ತೊರೆದ ಅಧಿಕಾರಿ, ನಿರ್ವಿಕಾರದಿಂದ ಲೋಕವನ್ನು ನೋಡುವ ಉದಾರಿ, ಎಲ್ಲ ಧರ್ಮಗಳಿಗೂ ಆಧಾರಸ್ವರೂಪನಾದವನು, ಮುಕ್ತಿಗಾಗಿ ಸಾಧನೆ ಮಾಡುವವನು ಇಡೀ ಭೂಮಂಡಲಕ್ಕೆ ಗುರುವಾಗುತ್ತಾನೆ".

ಕಗ್ಗದ ಪ್ರತಿ ಸಾಲಿಗೂ ಉದಾಹರಣೆಯಂತೆ ಬದುಕಿದವರು ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು. ಪ್ರತಿ ವರ್ಷದಂತೆ ಈ ವರ್ಷವೂ ಅವರ ಜಯಂತಿ ಮಹೋತ್ಸವ ಬಂದಿದೆ. ಬರುತ್ತಲೇ ಇರುತ್ತದೆ. ಇದೊಂದು ಕಾಲಧರ್ಮ. ಆದರೆ ಈ ಧರ್ಮದಲ್ಲೇ ಮಹತ್ವವಿರುವುದು, ವಿಶೇಷವಿರುವುದು. ಲೋಕದಲ್ಲಿ ಅಂಧಕಾರ ಅಧಿಕವಾದಾಗ ಜಗತ್ತನ್ನು ಬೆಳಗುವ ಉದ್ದೇಶಕ್ಕಾಗಿ ಭಗವಂತನು ಅವತರಿಸುವುದರಲ್ಲಿ ಒಂದು ಕ್ರಮವಿದೆ. ಮತ್ತೆ ಮತ್ತೆ ಈ ಬೆಳಕು ಏಕೆ ಅವತರಿಸಿ ಬರಬೇಕು! ಬಂದಮೇಲೆ ಇಲ್ಲೇ ಇದ್ದರಾಗಿತ್ತಲ್ಲ ಎಂದರೆ ಅದು ಕೂಡ ಕಾಲಗತಿಗೆ ವಿರುದ್ಧವಾದದ್ದು. ಕಾಲಗತಿಯಲ್ಲಿ ಅಂಧಕಾರವೇ ಎಂದೆಂದೂ ಅಪರಿಮಿತವಾದದ್ದು. ಅಲ್ಲಮಪ್ರಭು ಹೇಳುವಂತೆ "ಅಪರಿಮಿತ ಕತ್ತಲೆಯ ಒಳಗೆ ಹೊಳೆಯುವ ಬೆಳಕಿನಂತೆ" ಮಹಾನುಭಾವರು ಜಗತ್ತಿನಲ್ಲಿ ಅವತರಿಸುತ್ತಾರೆ. ಅವರು ಲೋಕದ ಇತರರಂತೆಯೇ ಹುಟ್ಟುತ್ತಾರೆ, ಬದುಕುತ್ತಾರೆ. ಕೊನೆಗೊಂದು ದಿನ ಬಯಲಾಗುತ್ತಾರೆ. ಆದರೆ ಅವರು ಲೋಕದಲ್ಲಿ ಇರುವಷ್ಟು ಕಾಲವೂ ತಮ್ಮ ಸಂಪರ್ಕಕ್ಕೆ ಬಂದ ಎಲ್ಲರನ್ನೂ ಬೆಳಕಾಗಿಸಲು ಯತ್ನಿಸುತ್ತಿರುತ್ತಾರೆ.

ಪರಮಪೂಜ್ಯ ರಾಜೇಂದ್ರ ಶ್ರೀಗಳು 19ನೇ ಶತಮಾನದಲ್ಲಿ ಆವಿರ್ಭವಿಸಿದ ಈ "ಯುಗದ ಬೆಳಕಿನ ಕಿರಣ". ಕಿರಣ ಎನ್ನುವ ಮಾತಿಗೆ ಇರುವ ಸೀಮಿತ ಪರಿಧಿಯ



ಅರಿವಿದ್ದೇ ಈ ಪದವನ್ನು ಬಳಸಲಾಗಿದೆ. ಈ ಯುಗದ ವಿಶೇಷವೆಂದರೆ ಸಮಾಜದ ಎಲ್ಲ ಕ್ಷೇತ್ರಗಳಲ್ಲೂ ಇಂತಹ ಅನೇಕ ದೈವಿಕ ಕಿರಣಗಳು ಬೆಳಗಿವೆ. ಧಾರ್ಮಿಕರಂಗದಲ್ಲಿ ಪರಮಪೂಜ್ಯ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು, ಸಿದ್ಧಗಂಗೆಯ ಶ್ರೀ ಶಿವಕುಮಾರ ಮಹಾಸ್ವಾಮಿಗಳು, ಭಾಲ್ಕಿಯ ಶ್ರೀ ಚನ್ನಬಸವ ಪಟ್ಟದ್ದೇವರು, ಧಾರವಾಡ ಶ್ರೀ ಮುರುಘಾಮಠದ ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳು, ಸಿರಿಗೆರೆಯ ಶ್ರೀ ಶಿವಕುಮಾರ ಮಹಾಸ್ವಾಮಿಗಳು ಹೀಗೆ ಅನೇಕರು ಈ ನಾಡಿನ ಸರ್ವತೋಮುಖ ಪ್ರಗತಿಗೆ ದಾರಿ ತೋರಿದ್ದಾರೆ. ಆ ದಾರಿಯಲ್ಲಿ ನಡೆದವರಿಗೆಲ್ಲ ದಾರಿದೀಪವೂ ಆಗಿದ್ದಾರೆ.

ಜಗತ್ತಿನಲ್ಲಿ ಸಂನ್ಯಾಸಿಯಾಗುವುದು ಸುಲಭ. ಆದರೆ ಗುರುವಾಗುವುದು ತುಂಬ ಕಠಿಣ. ಸಂನ್ಯಾಸಿಯಾಗುವವನಿಗೆ ಲೋಕದ ಯಾವ ಹಂಗೂ ಇರುವುದಿಲ್ಲ. ಅವನು ಎಲ್ಲವನ್ನೂ ತೊರೆದು ನಿರ್ವಿಕಾರವಾಗಿ ನಿಲ್ಲಬಹುದು. ಆದರೆ ಗುರುವಾದವನ ಸ್ಥಿತಿ ಹಾಗಲ್ಲ. ಜನರ ಮಧ್ಯೆಯೇ ಆತ ಇದ್ದುಕೊಂಡೂ "ಪದ್ಮಪತ್ರದ ಮೇಲಿನ ಜಲಬಿಂದುವಿನಂತೆ, ಸಂಗದಲ್ಲಿದ್ದೂ ನಿಸ್ಸಂಗಿಯಾಗಿರಬೇಕು. ಲೋಕದಲ್ಲಿದ್ದೂ ಲೋಕದಂತೆ ನಡೆಯದೆ ಭಿನ್ನವಾಗಿರಬೇಕು. ಬುದ್ಧದೇವ ಹೇಳಿದಂತೆ 'ಮೋಕ್ಷ ಹುಡುಕುವ ಪ್ರೀತಿಯ ಬಂಧನದಲ್ಲಿ ಸಿಲುಕಿದ ಪರಿ' ಅಂಥದ್ದು. ಇದು ಪರಮಪೂಜ್ಯ ರಾಜೇಂದ್ರ ಶ್ರೀಗಳವರು ಈ ಲೋಕವನ್ನು, ಲೋಕದ ಜನರನ್ನು ಉದ್ಧರಿಸಿದ ರೀತಿ. ನಮ್ಮಲ್ಲಿ ಬಹಳ ಜನ "ಉದ್ಧಾರ" ಮಾಡಬೇಕಾದವರು ದೈವಾಂಶಸಂಭೂತರಾಗಿರಬೇಕು, ಅಥವಾ ಪವಾಡಪುರುಷರಾಗಿರಬೇಕು ಎಂದು ಭಾವಿಸುತ್ತಾರೆ. ಜಗತ್ತಿನಲ್ಲಿ ಬಹಳಷ್ಟು ಜನರಿಗೆ ಅವರವರ ತಾಯಂದಿರು ಯಾವ ಪವಾಡವನ್ನೂ ಮಾಡದೆ ಬದುಕಿನ ದಾರಿ ತೋರುತ್ತಾರೆ. ತಾಯಿಯಾದವಳು ಸ್ವತಃ ಉಪದೇಶ ಮಾಡುವುದಿಲ್ಲ. ಪವಾಡವನ್ನಂತೂ ಮಾಡಲು ಆಕೆಗೆ ಬಾರದು. ಸ್ವತಃ ತನ್ನನ್ನು ತಾನೇ ತೇಯ್ದುಕೊಂಡು, ಬಡತನವನ್ನು ಹಾಸಿ ಹೊದ್ದುಕೊಂಡು ಮಕ್ಕಳನ್ನು ಸಾಕಿಸಲಹುತ್ತಾಳೆ. ರೋಗ, ರೋಗರುಜಿನಗಳಿಂದ ಬಳಲುತ್ತಾಳೆ. ಲೋಕದ ಪಾಲಿಗೆ ಶ್ರೀಸಾಮಾನ್ಯಳಾದ ಅವಳು ಯಾರ ಪಾಲಿಗೂ ಅವತಾರದಂತೆ ಕಾಣುವುದಿಲ್ಲ! ಪರಮಪೂಜ್ಯ ರಾಜೇಂದ್ರ ಶ್ರೀಗಳು ತಮ್ಮ ಸಂಪರ್ಕಕ್ಕೆ ಬಂದ ಪ್ರತಿಯೊಬ್ಬರನ್ನೂ ತಾಯಿಯಂತೆ ಪೊರೆದವರು. ತಾಯಿಯೊಬ್ಬಳು ತನ್ನ ಸ್ವಂತ ಮಗುವನ್ನು ಮಾತ್ರ ಪೊರೆಯುತ್ತಾಳೆ; ಆದರೆ ಗುರುವಾದವನು ಲೋಕವನ್ನೆಲ್ಲ ಪೊರೆಯುತ್ತಾನೆ.

ಲೋಕದಲ್ಲಿ ಗುರುವಾಗುವವರಿಗೆ ಕೆಲವು ಅಗತ್ಯವಾದ ಗುಣಗಳಿರಬೇಕಾಗುತ್ತವೆ.



ಮೊದಲನೆಯ ಗುಣವೆಂದರೆ, ಗರ್ವವನ್ನು ಪಡದೆ ಉಪಕಾರ ಮಾಡುವುದು. ಸಾಮಾನ್ಯವಾಗಿ ಉಪಕಾರ ಮಾಡುವವರಿಗೆ ತಾನು ಮಾಡಿದೆನೆಂಬ ಅಹಂಕಾರವಿರುತ್ತದೆ. ಆದರೆ ಗುರುವಾದವರಿಗೆ ತೆರೆದ ಕೈಗಳಿಂದ ನೀಡುವುದೇ ಕರ್ಮವಾಗಿರುತ್ತದೆ. ಬೆಳಕಿಗೆ ಬೆಳಕನ್ನು ನೀಡುವುದೇ ಸಹಜ ಕ್ರಿಯೆ ತಾನೆ! ಇದೊಂದು ಬಗೆಯಲ್ಲಿ ಶರಣರ ದಾಸೋಹ ತತ್ತ್ವದ ಪರಿಕಲ್ಪನೆಗೆ ಸಮೀಪವಾಗಿದೆ. ದಾಸೋಹದ ಪರಿಕಲ್ಪನೆಯಲ್ಲಿ 'ಸೋಹಂ' ಎನ್ನದೆ, ದಾಸೋಹಂ ಎನ್ನಿಸಿಕೊಳ್ಳುವುದೇ ನಿಜವಾದ ಭಾವ. "ನಾನು ನೀಡುವ ಯಜಮಾನ, ಬೇಡುವವನು ಅಶಕ್ತ, ಬಡವ" ಎಂಬ ದ್ವೈತಭಾವಕ್ಕೆ ಅಲ್ಲಿ ಎಡೆ ಇಲ್ಲ. ಲೋಕದಲ್ಲಿರುವುದನ್ನು ಲೋಕಕ್ಕೆ ನೀಡುವುದಷ್ಟೇ ಗುರುವಿನ ಕೆಲಸ. ಗುರು ಹೊಸದೇನನ್ನೂ ತೋರುವುದಿಲ್ಲ. ತನ್ನ ಸುತ್ತಲೂ ಇರುವುದನ್ನು ಕಾಣಲಾರದವನ ಕಣ್ಣಿಗೆ ಬೆಳಕಾಗುತ್ತಾನೆ, ಅಷ್ಟೆ. ಶ್ರೀಗಳವರು ಎಂದೂ ಯಾರಿಗೂ ನೀಡಿದೆನೆಂಬ ಹೆಮ್ಮೆ ಹೊಂದಿದ್ದವರಲ್ಲ. ಝೆನ್ ಸಂತ ತೆತ್ಸುಗೆನ್‌ನಂತೆ ಅವರು ಬದುಕಿದ್ದರು. ಬದುಕಿನುದ್ದಕ್ಕೂ ಸಮಾಜಕ್ಕಾಗಿ ದುಡಿದ ತೆತ್ಸುಗೆನ್ ತನ್ನ ಹೆಸರು ಎಲ್ಲಿಯೂ ಬಾರದಂತೆ ನೋಡಿಕೊಂಡ. ತಾನು ಮಾಡಬೇಕಾದ ಕಾರ್ಯ ಮುಗಿದಿದೆ ಎನಿಸಿದಾಗ ಯಾರಿಗೂ ಹೇಳದೆ ಕಾಡಿನಲ್ಲಿ ಕಣ್ಮರೆಯಾದ. ಆದರೆ ರಾಜೇಂದ್ರ ಶ್ರೀಗಳಿಗೂ ತೆತ್ಸುಗೆನ್‌ಗೂ ಇರುವ ವ್ಯತ್ಯಾಸವೆಂದರೆ ಗುರುಗಳು ನಮ್ಮ ನಡುವೆಯೇ ಇದ್ದುಕೊಂಡು ಮಾರ್ಗದರ್ಶನ ಮಾಡುತ್ತ, ಕೊನೆಯವರೆಗೂ ಸಂತ ಜೀವನವನ್ನು ಬಾಳಿ ಬದುಕಿದರು.

ಗುರುವಾಗುವವರಿಗೆ ಎಂದೂ ಅಧಿಕಾರದ ದರ್ಪವಿರಬಾರದು. ಬಸವಣ್ಣನವರು ಹೇಳಿದಂತೆ 'ಹೊನ್ನಿನೊಳಗೊಂದೊರೆಯ, ಸೀರೆಯೊಳಗೊಂದೆಳೆಯ ಇಂದಿಂಗೆ ನಾಳೆಗೆ ಎಂದು ಬಗೆದನಾದರೆ ಎನ್ನ ತಲೆದಂಡ" ಎಂಬ ಸದುವಿನಯದ ಛಲವಿರಬೇಕು. ಅಧಿಕಾರವಿರುವುದು ಅಹಂಕಾರದ ಪ್ರದರ್ಶನಕ್ಕಲ್ಲ. ಇಲ್ಲದವರಿಗೆ ನಮ್ಮಲ್ಲಿರುವುದನ್ನು ನೀಡಲು, ಲೋಕದಲ್ಲಿ ಸಮಭಾವ, ಸಮಬಾಳ್ವೆ, ನೆಲೆಸುವಂತೆ ಮಾಡಲು ಅದೊಂದು ಉಪಕರಣ. ಮೂರನೆಯದಾಗಿ, ಜಗತ್ತನ್ನು ನಿರ್ವಿಕಾರವಾಗಿ ಕಾಣಬೇಕು. "ಲೋಕದಲ್ಲಿ ಹುಟ್ಟಿದ ಬಳಿಕ ಸ್ತುತಿನಿಂದೆಗಳಿಗಂಜದೆ ಸಮಾಧಾನಿಯಾಗಿರುವ" ಪರಿ ಅದು. ವಿಕಾರಿಯಾಗಿ ನೋಡಿದವನಿಗೆ ಲೋಕದಲ್ಲಿ ಬರಿಯ ಕೆಟ್ಟದೇ ಕಾಣಿಸುತ್ತದೆ. ನಿರ್ವಿಕಾರಿಯಾದವನಿಗೆ ಎಲ್ಲವನ್ನೂ ಸಮಾಧಾನದಿಂದ ನೋಡಲು ಬರುತ್ತದೆ. ಬುದ್ಧದೇವನಿಗೆ ಅವನ ಕಾಲದ ಚಾರ್ವಾಕರೂ ಸೇರಿದಂತೆ ಹಲವಾರು ಜನ ವಿವಿಧ ರೀತಿಯ ಹಿಂಸೆಯನ್ನು ನೀಡಿದರು. ಆದರೆ ಅವನು ಎಲ್ಲಕ್ಕೂ ಒಂದೇ ಬಗೆಯಲ್ಲಿ



ಪ್ರತಿಕ್ರಿಯಿಸುತ್ತಿದ್ದ. ನಾಲ್ಕನೆಯದಾಗಿ, ಈ ಮೂರು ಗುಣಗಳನ್ನು ಹೊಂದಿದವರಿಗೆ ಧರ್ಮಾಧರ್ಮಗಳ ನಡುವಿನ ಯಾವ ವ್ಯತ್ಯಾಸವೂ ಇರುವುದಿಲ್ಲ. ಸೀಮಿತ ದೃಷ್ಟಿಕೋನದಿಂದ ಜನರು ತಮ್ಮನ್ನು ತಾವೇ ಬಂಧಿಸಿಕೊಂಡಿರುವ ಸಂಕೋಲೆ ಅದು. ನಿಜವಾದ ಧರ್ಮವೆಂದರೆ ಈ ಸಂಕೋಲೆಯ ಆಚೆಗಿರುವ ಲೋಕವನ್ನು ತನ್ನಂತೆಯೇ ನೋಡುವುದು. ಯಾವ ಪ್ರತಿಫಲಾಪೇಕ್ಷೆಯನ್ನು ಬಯಸದೆ ಮಾಡುವ ಲೋಕಸೇವೆಯೇ ನಿಜವಾದ ಧರ್ಮ. ಜ್ಞಾನಿಯಾದವನಿಗೆ 'ನಾನು ಬರಿಯ ದೇಹವಲ್ಲ. ಭಗವಂತನ ಅನಂತ ಕಿರಣಗಳ ಒಂದು ಭಾಗ' ಎಂಬ ಅರಿವಿರುತ್ತದೆ. ಪರಮಪೂಜ್ಯ ರಾಜೇಂದ್ರ ಶ್ರೀಗಳವರು ಈ ಎಲ್ಲ ತತ್ತ್ವಗಳನ್ನು ಅನುರಿಸಿಕೊಂಡು ಲೋಕಮಾನ್ಯವಾದವರು. ಲೋಕದ ಕಣ್ಬೆಳಕಾದವರು. ಆದುದರಿಂದಲೇ ಬೆಳಕಿನ ಅಪೇಕ್ಷೆ ನಮ್ಮಲ್ಲಿ ಇರುವವರೆಗೂ ಶ್ರೀಗಳನ್ನು ನೆನೆಯುವ ಕಾರ್ಯ ಹೀಗೆ ನಡೆಯುತ್ತಲೇ ಇರುತ್ತದೆ.

ಡಾ. ಎಂ.ಎನ್. ನಂದೀಶ್ ಹಂಚೆ

ನಾನೇನನೀವೆನಯ್ಯಾ?

ಮರುಳಯ್ಯ ಸಾ.ಶಿ.

"ಶ್ರದ್ಧೆಯೇ ಸಿದ್ಧಿಗೆ ಮೂಲ" ಎಂಬ ಮಹಾಮಂತ್ರವನ್ನು
ಪಠಿಸಿದ ಮಹರ್ಷಿ ನೀನಯ್ಯಾ,
ದುಡಿಮೆಯಲ್ಲಿಯೇ ದೇವರನ್ನು ಕಾಣಿಸಿದ
ಕರ್ಮಯೋಗಿ ನೀನಯ್ಯಾ,
'ನಿಜದರಿವು ಅಜನಿರವು ! ಎಂದುದ್ಘೋಷಿಸಿದ
ಮಹಾಜ್ಞಾನಿ ನೀನಯ್ಯಾ,
ನಿತ್ಯ ದಾಸೋಹದಲಿ ಸತ್ಯ ಶ್ರೀಗಂಧವಾಗಿ ಸವೆದುಕೊಂಡ
ತ್ರಿವಿಧ ದಾಸೋಹಿ ನೀನಯ್ಯಾ,
ಎನ್ನೆದೆಯ ಧರೆಯಲ್ಲಿ ಕಪ್ಪುರದ ಖಂಡವಾಗಿ ಬೆಳಗಿದ
ಚಿಜ್ಯೋತಿ ನೀನಯ್ಯಾ,
ಎನ್ನ ಗುರು ಶಿವರಾತ್ರಿ ರಾಜೇಂದ್ರ ಮಹಾಪ್ರಭುವೆ
ನೀನಿತ್ತ ಬೆಳಕಿಗೆ ನಾನೇನನೀವೆನಯ್ಯಾ?



ಪೂರ್ಣದೃಷ್ಟಿ

ಆಗತಾನೆ ಪೂಜೆ ಮುಗಿಸಿ, ಕಚೇರಿಯ ಕಾಗದಪತ್ರಗಳನ್ನು ಪರಿಶೀಲಿಸುತ್ತಿದ್ದ ಪೂಜ್ಯ ರಾಜೇಂದ್ರ ಶ್ರೀಗಳವರ ಕಣ್ಣಿಗೆ, ಮುದ್ದಾದ ಅಕ್ಷರಗಳಿಂದ ಬರೆಯಲ್ಪಟ್ಟ ಕಾಗದವೊಂದು ಕಾಣಿಸಿತು. ಕಾಗದವನ್ನು ಕೈಗೆತ್ತಿಕೊಂಡ ಶ್ರೀಗಳಿಗೆ ಇದು ಯಾರೋ ಪರಿಚಯಸ್ಥರೇ ಬರೆದ ಪತ್ರದ ಹಾಗೆ ತೋರಿತು. ಆದರೆ ಪತ್ರದ ಕೊನೆಯಲ್ಲಿ ಸಹಿ ಇರದೆ, ಕೇವಲ 'ಶ್ರೀಮಠದ ಭಕ್ತ' ಎಂದಷ್ಟೆ ನಮೂದಿಸಿತ್ತು. ಕಾಗದದ ಒಕ್ಕಣೆ ಶ್ರೀಮಠಕ್ಕೆ ಬಹಳ ಬೇಕಾಗಿದ್ದ ವ್ಯಕ್ತಿಯ ಬಗ್ಗೆ ಬಂದ ದೂರು. ಅದನ್ನು ಸಮಾಧಾನ ಮತ್ತು ಏಕಾಗ್ರತೆಯಿಂದ ಪರಿಶೀಲಿಸಿದ ಶ್ರೀಗಳು ಸ್ವಲ್ಪ ಹೊತ್ತು ಚಿಂತಾಕ್ರಾಂತರಾದರು. ಶ್ರೀಗಳ ಮುಖದಲ್ಲಿ ಕಾಣಿಸಿಕೊಳ್ಳುವ ಸಣ್ಣ ಗೆರೆಯನ್ನೂ ತದೇಕಚಿತ್ತದಿಂದ ಗಮನಿಸುವ, ಶ್ರೀಗಳ ಆಪ್ತರಾಗಿದ್ದ ಕ್ಯಾತನಹಳ್ಳಿ ಪ್ರಭುಸ್ವಾಮಿಗಳು, ಶ್ರೀಗಳನ್ನು ಕುರಿತು "ಏನಾಯ್ತು ಬುದ್ದಿ, ಆ ಪತ್ರದಲ್ಲೇನಿದೆ" ಎಂದರು. ಶ್ರೀಗಳು "ಯಾರೋ ನಮ್ಮ ಶಿವಪ್ಪನ ಬಗ್ಗೆ ಮೂಗರ್ಜಿ ಬರೆದಿದ್ದಾನೆ. ಪತ್ರವನ್ನು ಯಾರೋ ಗೊತ್ತಿರುವವರೇ ಬರೆದಂತಿದೆ. ಆದರೆ ಆತ ತನ್ನ ಹೆಸರನ್ನು ಕಾಗದದಲ್ಲಿ ಬರೆದಿಲ್ಲ, ಶ್ರೀಮಠದ ಭಕ್ತ ಎಂದಷ್ಟೇ ಬರೆದಿದ್ದಾನೆ" ಎಂದರು. ಶ್ರೀ ಪ್ರಭುಸ್ವಾಮಿಗಳು "ಅದರಲ್ಲಿ ಅಂಥದ್ದು ಏನಿದೆ ಬುದ್ಧಿ" ಎಂದರು. ಅದಕ್ಕೆ "ಶಿವಪ್ಪ ಶಾಲೆಯಲ್ಲಿ ಹಣ ದುರುಪಯೋಗಪಡಿಸಿಕೊಂಡಿದ್ದಾನೆ ಅಂತ ಬರೆದಿದೆ. ಯಾರೋ ಹೊಟ್ಟೆಕಿಚ್ಚಿಗೆ ಬರೆದಿರಬೇಕು, ಬಿಡಿ ಅದಕ್ಕೆ ಏಕೆ ತಲೆಕೆಡಿಸಿಕೊಳ್ಳಬೇಕು" ಎಂದ ಶ್ರೀಗಳ ಮಾತಿಗೆ ಪ್ರಭುಸ್ವಾಮಿಗಳು ಅಸಮ್ಮತಿ ವ್ಯಕ್ತಪಡಿಸಿದರು. "ಯಾರೋ ಬರೆದ ಪತ್ರವನ್ನು ನೆಪಮಾಡಿಕೊಂಡು ನಾವು ಬಲ್ಲವರನ್ನು ಅನುಮಾನಿಸುವುದು ಅವಮಾನಿಸಿದಂತೆಯೇ ಅಲ್ಲವೇ" ಎಂದರು. ಆದರೆ ಪ್ರಭುಸ್ವಾಮಿಗಳವರು ಮೊದಲಿನಿಂದಲೂ ಯಾರನ್ನೂ ಯಾವುದನ್ನೂ ಸುಲಭವಾಗಿ ಒಪ್ಪುತ್ತಿರಲಿಲ್ಲ. ಅವರಿಗೆ ಶ್ರೀಗಳು ಹಾಗೂ ಶ್ರೀಮಠಕ್ಕಿಂತ ಬೇರಾವುದೂ ದೊಡ್ಡದಾಗಿ ಕಾಣಿಸುತ್ತಿರಲಿಲ್ಲ. ಅವರು ಶ್ರೀಗಳಿಗೆ ಪರಿಪರಿಯಾಗಿ ವಿನಂತಿಸಿ, "ಯಾರೋ ಸುಮ್ಮನೆ ಬರೆದಿದ್ದಾರೆ ಎಂದು ನಿರ್ಲಕ್ಷಿಸುವುದು ಸರಿಯಲ್ಲ. ಶಿವಪ್ಪ ತಪ್ಪು ಮಾಡಿಲ್ಲದಿದ್ದರೆ ಏನೂ ಆಗುವುದಿಲ್ಲವಲ್ಲ. ನಾವು ಬಂದ ಪತ್ರವನ್ನು ಹೀಗೆ ನಿರ್ಲಕ್ಷ್ಯ ಮಾಡಿದರು ಎನ್ನುವುದು ಹೊರಗಿನವರಿಗೆ ಗೊತ್ತಾದರೆ, ನಾಳೆ ಮುಖ್ಯವಾದ ಅವಘಡ ಸಂಭವಿಸಿದರೂ ಯಾರೂ ಏನನ್ನೂ ಹೇಳುವುದಿಲ್ಲ. ಆದುದರಿಂದ ಪತ್ರದ ವಿವರಗಳ ಬಗ್ಗೆ ಪರಿಶೀಲಿಸಿ ವರದಿ ನೀಡುವಂತೆ ಹೇಳೋಣ" ಎಂದರು. ಒಲ್ಲದ ಮನಸ್ಸಿನಿಂದ ಶ್ರೀಗಳು ಒಪ್ಪಿದರು.



ಶಿವಪ್ಪನವರು ಶ್ರೀಮಠಕ್ಕೆ ಬಹಳ ಬೇಕಾದ ವ್ಯಕ್ತಿ. ಒಳ್ಳೆಯ ಭಾಷಾ ಅಧ್ಯಾಪಕರು. ವ್ಯಾಕರಣದಲ್ಲಿ ನಿಷ್ಣಾತರು. ಶ್ರೀಮಠದಿಂದ ಸರ್ಕಾರಕ್ಕೆ ಪತ್ರ ಬರೆಯಬೇಕಾದಾಗ ಅವರಿಗೇ ವಹಿಸಲಾಗುತ್ತಿತ್ತು. ಒಮ್ಮೆ ಅವರಿಗೆ ವಿಷಯವನ್ನು ಹೇಳಿದರೆ ಅದಕ್ಕೆ ಬೇಕಾದ ಕಾಗದವನ್ನು ಅಚ್ಚುಕಟ್ಟಾಗಿ ಸ್ವಲ್ಪವೂ ತಿದ್ದುಪಡಿಗೆ ಅವಕಾಶವಿಲ್ಲದಂತೆ ಸಿದ್ಧಪಡಿಸುತ್ತಿದ್ದರು. ಅವರ ಬಗ್ಗೆ ಶ್ರೀಗಳಿಗೆ ವಿಶೇಷ ಪ್ರೀತಿ. ಶಿವಪ್ಪನವರಿಗೂ ಶ್ರೀಗಳು ಹಾಗೂ ಶ್ರೀಮಠದ ಬಗ್ಗೆ ವಿಶೇಷ ಭಕ್ತಿ. ಆದರೆ ಅವರಿಗಿದ್ದ ಕೆಲವು ವೈಯಕ್ತಿಕ ಅಭ್ಯಾಸಗಳು ಬೆಳೆಯಬೇಕಾದಷ್ಟು ಎತ್ತರಕ್ಕೆ ಬೆಳೆಯಲು ಅವರಿಗೆ ಅವಕಾಶ ನೀಡಲಿಲ್ಲ. ಶಿವಪ್ಪನವರು ಮೈಸೂರಿನ ಒಂದು ಶಾಲೆಯ ಮುಖ್ಯಸ್ಥರು. ಅಲ್ಲಿಯೇ ಅವ್ಯವಹಾರ ವಾಗಿದೆ ಎಂಬುದು ಪತ್ರದ ಒಕ್ಕಣೆ. ಸಂಸ್ಥೆಯಲ್ಲಿ ಶಿಸ್ತಿಗೆ ಹೆಸರಾಗಿದ್ದ ಚನ್ನಬಸಪ್ಪ ಹಾಗೂ ಮತ್ತಿಬ್ಬರನ್ನು ಸೇರಿಸಿ ಸಮಿತಿಯೊಂದನ್ನು ರಚಿಸಿ ಪತ್ರದ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ ಒಂದು ವಾರದಲ್ಲಿ ವರದಿ ನೀಡುವಂತೆ ಶ್ರೀಗಳು ಸೂಚಿಸಿದರು.

ಚನ್ನಬಸಪ್ಪನವರ ತಂಡ ನಾಲ್ಕು ದಿನಗಳಲ್ಲೇ ವರದಿಯನ್ನು ಸಿದ್ಧಪಡಿಸಿ ಶ್ರೀಗಳಿಗೆ ಸಲ್ಲಿಸಿತು. ಮರುದಿನ ಸಂಜೆ ಚನ್ನಬಸಪ್ಪನವರಿಗೆ ಶ್ರೀಮಠಕ್ಕೆ ಬರಬೇಕೆಂದು ಕರೆ ಬಂತು. ಕೇವಲ ನಾಲ್ಕು ದಿನಗಳಲ್ಲಿ ಸಮಗ್ರ ವರದಿಯನ್ನು ಸಿದ್ಧಪಡಿಸಿರುವ ಬಗ್ಗೆ, ಅದರಲ್ಲೂ ಶ್ರೀಮಠ ವಿಶೇಷವಾಗಿ ನಂಬಿಕೆ ಇಟ್ಟಿದ್ದ ವ್ಯಕ್ತಿಯ ಅಪರಾಧವನ್ನು ಸಮಗ್ರವಾಗಿ ತನಿಖೆ ಮಾಡಿ ದೋಷಿಗಳೆಂದು ಕಂಡುಹಿಡಿದಿರುವ ಬಗ್ಗೆ ಅವರಿಗೆ ಅಭಿಮಾನ. ಶ್ರೀಗಳು ತನ್ನ ವರದಿಯನ್ನು ನೋಡಿ ಸಂತೋಷಪಟ್ಟು ಹೇಳಿಕಳುಹಿಸಿದ್ದಾರೆ ಎಂದು ಅವರ ಭಾವನೆ. ಸಂಜೆಯಾಗುವುದನ್ನೇ ನಿರೀಕ್ಷಿಸುತ್ತಿದ್ದ ಚನ್ನಬಸಪ್ಪನವರು ಶ್ರೀಮಠಕ್ಕೆ ತೆರಳಿದರು. ಶ್ರೀಗಳು ಚನ್ನಬಸಪ್ಪನವರು ಬಂದದ್ದನ್ನು ಅರಿತೂ ತಮ್ಮ ಕಾರ್ಯಕ್ರಮವನ್ನು ವ್ಯತ್ಯಯ ಮಾಡದೆ ಅವರ ಸರದಿ ಬಂದಾಗ ಒಳಕ್ಕೆ ಕರೆದರು. ಎಲ್ಲರನ್ನು ಹೊರಕಳುಹಿಸಿ, ವರದಿಯನ್ನು ಕೈಯಲ್ಲಿ ಹಿಡಿದುಕೊಂಡು ಶ್ರೀಗಳು 'ಇದೇನಿದು' ಎಂದರು. ಅಭಿಮಾನದ ಮಾತನ್ನು ನಿರೀಕ್ಷಿಸಿದ್ದ ಚನ್ನಬಸಪ್ಪನವರಿಗೆ ಶ್ರೀಗಳ ಮಾತು ಸೋಜಿಗವಾಗಿ ಕಂಡಿತು. ಸಾವರಿಸಿಕೊಂಡ ಚನ್ನಬಸಪ್ಪನವರು 'ವರದಿ ಬುದ್ಧಿ' ಎಂದರು. 'ಅದು ಸರಿ. ಆದರೆ ಇದರಲ್ಲಿ ಏನಿದೆ?' ಎಂದರು. ಬಹುಶಃ ಶ್ರೀಗಳು ತಮ್ಮ ಕಾರ್ಯದ ಒತ್ತಡದಲ್ಲಿ ವರದಿಯನ್ನು ಓದಿಲ್ಲವೆಂದು ಭಾವಿಸಿ ಚನ್ನಬಸಪ್ಪನವರು ವರದಿಯ ವಿವರಗಳನ್ನು ತಿಳಿಸಲು ಉದ್ಯುಕ್ತರಾದರು. ಆಗ ಶ್ರೀಗಳು "ನಾವು ವರದಿ ಓದಿದ್ದೇವೆ. ಅವನು ತಪ್ಪು ಮಾಡಿದ್ದಾನೆ ನಿಜ. ಆದರೆ ಅದಕ್ಕೇ ತಾವು ಶಿಕ್ಷೆಗೆ ಏನನ್ನು ಶಿಫಾರಸ್ಸು ಮಾಡಿದ್ದೀರಿ" ಎಂದರು. ಅದಕ್ಕೆ ಚನ್ನಬಸಪ್ಪನವರು "ಬುದ್ಧಿ ದುರುಪಯೋಗದ ಬಾಬ್ತು ಹಣವನ್ನು



ಅವರ ಸಂಬಳ ಹಾಗೂ ಅವರು ನಿವೃತ್ತರಾದ ನಂತರ ಬರುವ ಗ್ರ್ಯಾಚ್ಯುಯಿಟಿ ಎಲ್ಲವನ್ನೂ ಮುಟ್ಟುಗೋಲು ಹಾಕಿಕೊಳ್ಳುವಂತೆ ಶಿಫಾರಸ್ಸು ಮಾಡಿದ್ದೇವೆ. ವಾಸ್ತವವಾಗಿ ಈ ಎಲ್ಲವನ್ನು ಮಾಡಿದರೂ ಸಂಸ್ಥೆಯ ಹಣ ಪೂರ್ಣವಾಗಿ ಸಿಗುವುದಿಲ್ಲ. ಆದರೆ ಇದನ್ನು ಬಿಟ್ಟು ಬೇರೆ ದಾರಿ ಕಾಣಲಿಲ್ಲ" ಎಂದು ಅಭಿಮಾನದಿಂದ ಹೇಳಿದರು. ಎಲ್ಲವನ್ನೂ ತಾಳ್ಮೆಯಿಂದ ಕೇಳಿಸಿಕೊಂಡ ಶ್ರೀಗಳು "ಅಲ್ಲಪ್ಪಾ, ನೀನು ವಿದ್ಯಾವಂತ ಬುದ್ಧಿವಂತ. ಹೀಗಾ ವರದಿ ಕೊಡೋದು. ಅಲ್ಲಯ್ಯ, ಶಿವಪ್ಪ ತಪ್ಪು ಮಾಡಿದ್ದಾನೆ, ನಿಜ. ಆದರೆ ಅವನ ಮನೆಯವರು ಏನು ತಪ್ಪು ಮಾಡಿದ್ದಾರೆ, ಹೇಳು" ಎಂದರು. ಗಾಬರಿಗೊಂಡ ಚನ್ನಬಸಪ್ಪನವರು "ನಾನು ವರದಿಯಲ್ಲಿ ಅವರ ಮನೆಯವರ ಬಗ್ಗೆ ಏನೂ ಬರೆದಿಲ್ಲ ಬುದ್ಧಿ" ಎಂದರು. "ದಡ್ಡ ನೀನೇನೂ ಬರೆದಿಲ್ಲ, ನಿಜ. ಆದರೆ ನಿನ್ನ ವರದಿಯ ಪ್ರಕಾರ ಕ್ರಮ ಕೈಗೊಂಡರೆ, ಅವನ ಪೂರ್ತಿ ಸಂಬಳವನ್ನು ಮುಟ್ಟುಗೋಲು ಹಾಕಿಕೊಂಡರೆ ಮನೆಯವರು ಜೀವನಕ್ಕೆ ಏನು ಮಾಡಬೇಕು. ಉಪವಾಸದಿಂದ ಸಾಯಬೇಕ. ಯಾರೋ ಮಾಡಿದ ತಪ್ಪಿಗೆ ಇನ್ನೊಬ್ಬರಿಗೆ ಶಿಕ್ಷೆಯಾಗಬೇಕ. ನೋಡು, ಯಾವಾಗಲೂ ನಾವು ಮಾಡುವ ಕೆಲಸದಿಂದ ಅಥವಾ ಶಿಫಾರಸಿನಿಂದ ಯಾವೆಲ್ಲ ಬಗೆಯಲ್ಲಿ ಯಾರೆಲ್ಲರಿಗೆ ಸಮಸ್ಯೆ ಉಂಟಾಗುತ್ತದೆ ಎಂಬ ಪೂರ್ಣದೃಷ್ಟಿ ಇರಬೇಕು. ಮನಸ್ಸನ್ನು ಬುದ್ಧಿಯ ಕೈಗೆ ನೀಡಬಾರದು. ಹೃದಯದ ಕೈಗೆ ನೀಡಬೇಕು. ಅಲ್ಲವೆ" ಎಂದರು. ಚನ್ನಬಸಪ್ಪನವರು ಮನಸ್ಸಿನಲ್ಲೇ ಕುಸಿದುಹೋದರು. ಮುಖ ಬಾಡಿ ಅವರು ಮೌನಕ್ಕೆ ಜಾರಿದರು. ವರದಿಯನ್ನು ಚನ್ನಬಸಪ್ಪನವರ ಕೈಗಿತ್ತು "ಹೋಗು, ಬೇರೆ ವರದಿ ತಯಾರಿಸಿ ತಾ" ಎಂದರು. ವರದಿ ಪಡೆದು ಹಾಗೆಯೇ ನಿಂತಿದ್ದ ಚನ್ನಬಸಪ್ಪನವರು, "ಏನು ಮಾಡಲಿ ಬುದ್ಧಿ" ಎಂದರು. "ನಿನ್ನ ಮನಸ್ಸು ಏನು ಹೇಳುತ್ತದೋ ಅದನ್ನು ಮಾಡು" ಎಂದರು. "ಆದರೆ ಶಿವಪ್ಪ ಮಾಡಿರುವುದು ತಪ್ಪಲ್ಲವೆ, ಬುದ್ಧಿ" ಎಂದ ಚನ್ನಬಸಪ್ಪನವರಿಗೆ "ನೋಡು, ಅವನು ಮಾಡಿದ ತಪ್ಪನ್ನು ಗುರುತಿಸಿರು ವುದೇ ಅವನಿಗೆ ನಾವು ನೀಡುವ ಶಿಕ್ಷೆ. ಅವನಿಗೆ ಕಠಿಣ ಶಿಕ್ಷೆ ನೀಡಿ ಆಗಬೇಕಾದದ್ದು ಏನೂ ಇಲ್ಲ. ತಾನು ಮಾಡಿರುವ ತಪ್ಪು ಶ್ರೀಗಳಿಗೆ ತಿಳಿಯಿತು ಎಂದರೆ ಆತನ ಮನಸ್ಸಿಗೆ ಎಷ್ಟು ನೋವಾಗಬಹುದು, ಯೋಚಿಸು. ಅದೂ ಅಲ್ಲದೆ ಎಲ್ಲರಿಗೂ ಈ ವಿಷಯ ತಿಳಿದರೆ ಅವನ ಮಾನಮರ್ಯಾದೆ ಏನಾಗಬೇಡ. ಮಾಡಿದ ತಪ್ಪು ಮನಸ್ಸಿಗೆ ಬಂದರೆ ಅದೇ ದೊಡ್ಡ ಶಿಕ್ಷೆ" ಎಂದರು. ಶ್ರೀಗಳವರ ಮಾತು ಚನ್ನಬಸಪ್ಪನವರ ಅಕ್ಷರದ ಅಹಂಕಾರದ ಹಿಂದಿನ ನಿರ್ಮಲ ಮನಸ್ಸಿನ ಕದವನ್ನು ತೆರೆಯುವಂತೆ ಮಾಡಿತು.



ಸಂತೆಯೊಳಗೊಂದು ಮನೆಯ ಮಾಡಿ.....

ಬಹುದಿನಗಳ ಕಾಲ ವಿದೇಶದಲ್ಲಿ ನೆಲೆಸಿದ್ದ ಭಕ್ತರ ಒತ್ತಾಯಕ್ಕೆ ಮಣಿದು ವಿದೇಶಕ್ಕೆ ತೆರಳಲು ಪರಮಪೂಜ್ಯರು ಅಣಿಯಾದರು. ಪೂಜ್ಯರ ಜೊತೆಗೆ ಕ್ಯಾತನಹಳ್ಳಿಯ ಪ್ರಭುಸ್ವಾಮಿಗಳು, ಕುಂದೂರು ಮಠದ ಶ್ರೀ ಇಮ್ಮಡಿ ಶಿವಬಸವಸ್ವಾಮಿಗಳು, ಶ್ರೀಮಠದ ಕಿರಿಯ ಶ್ರೀಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು, ಶ್ರೀಮಠದ ಭಕ್ತರೂ ವಕೀಲರೂ ಆಗಿದ್ದ ಶ್ರೀ ಎಚ್. ಗಂಗಾಧರನ್ ಹೀಗೆ ಶ್ರೀಗಳ ಜೊತೆಯಲ್ಲಿ ತೆರಳುವವರ ಯಾದಿ ಸಿದ್ದವಾಯಿತು. ವಿದೇಶದಲ್ಲಿ ಯಾರೆಲ್ಲರ ಮನೆಗೆ ಹೋಗಬೇಕು ಎನ್ನುವುದರ ಜೊತೆಗೆ ಶರಣ ತತ್ವಗಳನ್ನು ಅಲ್ಲೆಲ್ಲ ಪ್ರಚಾರ ಮಾಡಲು ಸಿದ್ಧತೆ ಪೂರ್ಣಗೊಂಡಿತು.

ಈ ಎಲ್ಲ ಸಿದ್ಧತೆಗಳು ಪೂರ್ಣಗೊಳ್ಳುವುದರೊಳಗಾಗಿ ಪ್ರಯಾಣದ ದಿನ ಬಂದೇ ಬಿಟ್ಟಿತು. ಶ್ರೀಗಳು ಹಾಗೂ ಇನ್ನಿತರರು ಮೈಸೂರಿನಿಂದ ಇಂದಿನ ಚೆನ್ನೈಗೆ (ಅಂದಿನ ಮದ್ರಾಸ್) ಪ್ರಯಾಣ ಬೆಳಸಿ, ಅಲ್ಲಿಂದ ವಿದೇಶಕ್ಕೆ ತೆರಳಬೇಕಾಗಿತ್ತು. ಅಂತೆಯೇ ಪ್ರಯಾಣ ಬೆಳೆಸಿದವರು ಬೆಳಗ್ಗೆಯೇ ಮದ್ರಾಸ್ ನಗರವನ್ನು ಮುಟ್ಟಿದರು. ಆದರೆ ಶ್ರೀಗಳು ಪ್ರಯಾಣಿಸಬೇಕಾಗಿದ್ದ ವಿಮಾನದ ಸಮಯ ಸಂಜೆ ಇತ್ತು. ಬೇಗ ತಲುಪಿದ ಶ್ರೀಗಳು ಮತ್ತು ಇನ್ನಿತರರು, ಸಂಜೆಯವರೆವಿಗೂ ಸುಮ್ಮನೆ ಕಾಲಹರಣ ಮಾಡುವುದರ ಬದಲು ಸಮುದ್ರವನ್ನಾದರೂ ನೋಡಿಬರೋಣವೆಂದು ಇಮ್ಮಡಿ ಶಿವಬಸವ ಸ್ವಾಮಿಗಳು ಹೇಳಿದ ಮಾತಿಗೆ ದನಿಗೂಡಿಸಿದರು.

ಮದ್ರಾಸಿನ ಪಶ್ಚಿಮದಲ್ಲಿ ವಿಸ್ತಾರವಾಗಿ ಹಬ್ಬಿರುವ ಬಂಗಾಳಕೊಲ್ಲಿಯ ಆ ಸಮುದ್ರ ತೀರವನ್ನು ನೋಡುವುದೇ ಒಂದು ಆಹ್ಲಾದಕರ ಸಂಗತಿ. ಸಮುದ್ರಕ್ಕೆ ಅಭಿಮುಖವಾಗಿ ನಿರ್ಮಾಣಗೊಂಡಿರುವ ಪೂರ್ವ ಪಶ್ಚಿಮ ರಸ್ತೆ ವಾಯುವಿಹಾರಕ್ಕೆ ಹೆಸರುವಾಸಿಯಾದ ತಾಣ. ಎಲ್ಲಕ್ಕೂ ಮಿಕ್ಕು ಸಮುದ್ರವನ್ನು ನೋಡುವುದೇ ಒಂದು ಆನಂದ. ಬಿಳಿಯ ನೊರೆಗಳನ್ನು ಹೊತ್ತು ಗಂಭೀರ ಧ್ವನಿಯಲ್ಲಿ ಭೋರ್ಗರೆಯುತ್ತಾ ಒಂದರ ನಂತರ ಒಂದರಂತೆ ಕಡಲ ತಡಿಗೆ ಅಪ್ಪಳಿಸುವ ಅದರ ಲೀಲೆಗಳ ಸೊಗಸು ನೋಡಿಯೇ ಅನುಭವಿಸಬೇಕು. ಕಾರಿನಿಂದ ಇಳಿದು ಶ್ರೀಗಳು ಇನ್ನಿತರ ಎಲ್ಲರ ಜೊತೆಗೂಡಿ ಕಾದ ಮರಳ ಮೇಲೆ ತಮ್ಮ ಹಾವುಗೆಯನ್ನು ನಿಧಾನವಾಗಿ ಇಡುತ್ತಾ ಗಂಭೀರವಾಗಿ ಸಮುದ್ರವನ್ನೇ ನೋಡುತ್ತ ಅದರ ಬಳಿ ಬಂದರು. ಕಣ್ಣು ಹಾಯಿಸಿದಷ್ಟು ವಿಸ್ತಾರವಾದ ಆ ಕಡಲನ್ನು ನೋಡುತ್ತಾ, ಶ್ರೀಗಳ ಸ್ಮೃತಿಪಟಲದಲ್ಲಿ ಈ ಸಾಗರಕ್ಕೆ ಕೊನೆಯೇ



ಇಲ್ಲವೇ ಎನ್ನುವ ಶೈಶವಾವಸ್ಥೆಯ ಮನಸ್ಸು ಕುತೂಹಲದಿಂದ ಕೇಳುವಂತೆ ಭಾಸವಾಯಿತು. ಶ್ರೀಗಳಿಗೆ ಆ ವಿವರವೆಲ್ಲ ತಿಳಿದಿಲ್ಲವೆಂದಲ್ಲ. ನಮ್ಮ ಮನಸ್ಸಿಗೆ ಅಂಥ ಅನುಭವ ಅಪ್ಪಳಿಸಿದಾಗ ನಾವು ಬಾಲ್ಯವನ್ನು ಹೊಂದುತ್ತೇವೆ. ಆ ಭವ್ಯತೆಯನ್ನು ನೋಡಿದಾಗ ನಾವೆಷ್ಟರವರು ಎಂದು ನಮ್ಮ ಮನಸ್ಸು ನಮ್ಮನ್ನೇ ಪ್ರಶ್ನಿಸುತ್ತದೆ. ಹಿಮಾಲಯವನ್ನು ನೋಡಿದಾಗ, ದಟ್ಟ ಕಾನನವನ್ನು ವೀಕ್ಷಿಸಿದಾಗ ಆಗುವ ಅನುಭವ ನಮ್ಮ ಮನಸ್ಸನ್ನು ಹಾದು ಹೋಗುವುದುಂಟು.

ತಮ್ಮ ಎಳೆಯ ವಯಸ್ಸಿನಲ್ಲಿ ಶ್ರೀಮಠದ ಎದುರು ಹರಿಯುತ್ತಿದ್ದ ಕಪಿಲಾ ನದಿಯ ದಡದಲ್ಲಿ ನೀರಿಗೆ ಕಾಲು ಇಳಿಬಿಟ್ಟು ಮುಳುಗುವ ಸೂರ್ಯನನ್ನು ನೋಡುತ್ತಾ ಏಕಾಂತದಲ್ಲಿ ತನ್ಮಯರಾಗುತ್ತಿದ್ದ ಬಾಲ್ಯದ ದಿನಗಳು ಸ್ಮೃತಿಪಟಲದಲ್ಲಿ ಹಾದುಹೋದವು. ಸಮುದ್ರದ ದೂರದಲ್ಲಿ ಮೀನು ಹಿಡಿಯಲು ಮುಂಜಾನೆ ತೆರಳಿದ್ದ ಅನೇಕ ಮೀನುಗಾರರ ದೋಣಿಗಳು ನೀರಿನಲ್ಲಿ ಮುಳುಗುತ್ತೇಳುತ್ತಾ ದಡದ ಬಳಿಗೆ ಧಾವಿಸುತ್ತಿದ್ದವು. ಒಂದು ಅಲೆ ದೋಣಿಯನ್ನು ಮುಂದಕ್ಕೆ ತಳ್ಳಿದರೆ ಮತ್ತೊಂದು ಹಿಂದಕ್ಕೆ ಎಳೆಯುತ್ತಿತ್ತು. ನಾವಿಕ ಮುಂದೆ ಸಾಗಿ ದಡ ಸೇರಲು ಸತತವಾಗಿ ಹುಟ್ಟುಹಾಕುತ್ತಿದ್ದ ದೃಶ್ಯ ಶ್ರೀಗಳಿಗೆ ಮನುಷ್ಯನ ಬದುಕಿನ ಜಂಜಡವನ್ನು ಅನಾವರಣ ಮಾಡಿಸಿದಂತೆ ತೋರಿತು. ಈ ಲೋಕದಲ್ಲಿ ಸಂಸಾರಿಗಳು ಮತ್ತು ಸನ್ಯಾಸಿಗಳಿಬ್ಬರದ್ದು ಒಂದೇ ಬಗೆಯ ಜೀವನ ಎನ್ನಿಸತೊಡಗಿತ್ತು ಶ್ರೀಗಳಿಗೆ. ಸಂಸಾರಿ ತಾನೇ ಕಟ್ಟಿಕೊಂಡ ಲೌಕಿಕ ಬಾಂಧವ್ಯದ ಸುಳಿಯಲ್ಲಿ ಸಿಕ್ಕು ಪರಿತಪಿಸಿದರೆ ಸನ್ಯಾಸಿ ಇಡೀ ಲೋಕವನ್ನೇ ಸಂಸಾರವನ್ನಾಗಿ ಮಾಡಿಕೊಂಡು ಚಿಂತಿಸುತ್ತಾನೆ. ಹೀಗೆಯೇ ನೂರೆಂಟು ವಿಚಾರಗಳು ಶ್ರೀಗಳ ಮನಸ್ಸಿನಲ್ಲಿ ಮೂಡಿ ಮುಳುಗುತ್ತಿದ್ದವು.

ಕಾವಿ ತೊಟ್ಟು ನಿಂತ ಈ ಸನ್ಯಾಸಿಗಳನ್ನು ಸಮುದ್ರ ವೀಕ್ಷಿಸಲು ಬಂದ ಎಲ್ಲರೂ ನೋಡಿ ನಮ್ರತೆಯ ಭಾವ ಹೊಂದಿ ಸಾಗುತ್ತಿದ್ದರೆ ಶ್ರೀಗಳು ಮಾತ್ರ ಆ ಜನರ ಬದುಕಿನ ವಿವರಗಳು ಹೇಗಿರಬಹುದು ಎಂದು ಯೋಚಿಸುತ್ತಾ ಮತ್ತೊಮ್ಮೆ ಸಮುದ್ರವನ್ನು ನೋಡುತ್ತಾ ನಿಂತರು. ಹೀಗೆ ಬಹಳ ಹೊತ್ತು ಕಳೆದ ನಂತರ ಇಮ್ಮಡಿ ಶಿವಬಸವಸ್ವಾಮಿಗಳವರು 'ತುಂಬ ಬಿಸಿಲು. ನೆರಳಿಗಾಗಿ ಇಲ್ಲಿ ಯಾವ ಮರವೂ ಇಲ್ಲ. ನೋಡಿದ್ದಾಯಿತಲ್ಲ, ಹೋಗೋಣವೇ' ಎಂದರು.

ಅಷ್ಟರಲ್ಲಿ ಶ್ರೀಗಳ ಬಳಿ ಬಂದ ಒಬ್ಬ ವ್ಯಕ್ತಿ ಅವರ ಪಾದಕ್ಕೆ ನಮಸ್ಕರಿಸಿ, ಮದ್ರಾಸಿಗೆ ಯಾವಾಗ ಬಂದಿರಿ ಎಂದು ಕನ್ನಡದಲ್ಲಿ ಕೇಳಿದನ್ನು ನೋಡು ಶ್ರೀಗಳು ಚಕಿತರಾದರು.



ನೀನೇನು ಕನ್ನಡದವನೇ ಎಂದರು. ಆತ ಹೌದು ಬುದ್ಧಿ, ನಾನು ಮೈಸೂರಿನವನು. ಇಲ್ಲಿಯೇ ಬಹಳ ವರ್ಷದಿಂದ ಇದ್ದೇನೆ. ಇಲ್ಲೆ ನುಂಗಂಬಾಕಂನಲ್ಲಿ ಒಂದು ಸಣ್ಣ ಮನೆ ಕಟ್ಟಿಕೊಂಡು ಜೀವನ ನಡೆಸುತ್ತಿದ್ದೇನೆ. 'ಏನು ಕೆಲಸ ಮಾಡುತ್ತೀಯಾಪ್ಪ ನೀನು' ಎಂದರು ಶ್ರೀಗಳು. ಅದಕ್ಕೆ ಅವನು 'ಬುದ್ಧಿ ನಾನು ಗೈಡ್ ಆಗಿದ್ದೇನೆ. ಪ್ರತಿನಿತ್ಯ ಸಾವಿರಾರು ಸಂಖ್ಯೆಯಲ್ಲಿ ಬರುವ ಜನರಿಗೆ ಸಮುದ್ರದ ಇತಿಹಾಸ ಹೇಳಿ ಜೀವನ ಸಾಗಿಸುತ್ತೇನೆ. ಜೀವನಕ್ಕೆ ಏನೂ ತೊಂದರೆ ಇಲ್ಲ. ಸಾಕಷ್ಟು ಸಂಪಾದನೆ ಇದೆ' ಎಂದನು. ಕ್ಯಾತನಹಳ್ಳಿಯ ಶ್ರೀಗಳು ಆತನಿಗೆ 'ಈ ಸಮುದ್ರಕ್ಕೆ ಏನು ಇತಿಹಾಸವಿದೆಯಪ್ಪ? ಇದೇನು ರಾಜ್ಯವೇ ಕೋಟೆಯೆ, ಕೊತ್ತಳವೆ' ಎಂದರು. ಅದಕ್ಕೆ ಆ ಗೈಡ್ ಹೌದು ಬುದ್ದಿ ಇದಕ್ಕೆ ಅಂತಹ ಇತಿಹಾಸವಿದೆ. ಕೇವಲ ಕೋಟೆ, ರಾಜ್ಯಗಳಿಗೆ ಮಾತ್ರವಲ್ಲ, ಪತ್ರಿಯೊಂದು ಸ್ಥಳಕ್ಕೂ ಇತಿಹಾಸವಿರುತ್ತದೆ ಎಂದನು.

ಸಹಜಕುತೂಹಲಿಗಳಾದ ಇಮ್ಮಡಿ ಶಿವಬಸವಸ್ವಾಮಿಗಳು 'ಅಷ್ಟೊಂದು ಇತಿಹಾಸವಿದೆಯೇ ಇದನ್ನು ಸ್ವಲ್ಪ ವಿವರಿಸಬಹುದೇ' ಎಂದರು. ಪರಮಪೂಜ್ಯರು ಮಾತ್ರ ಮ್ಲಾನವದನರಾಗಿ ಎಲ್ಲವನ್ನು ಮೌನದಿಂದ ವೀಕ್ಷಿಸುತ್ತಿದ್ದರು.

ಆ ಗೈಡ್ ಇದರಿಂದ ಉತ್ಸುಕನಾಗಿ, ನೋಡಿ ಸ್ವಾಮೀಜಿ. ಈ ಸಮುದ್ರ 16ನೇ ಶತಮಾನಕ್ಕೆ ಮೊದಲು ಸಮುದ್ರದ ಏರಿಳಿಕೆಯಿಂದ ಇಲ್ಲಿನ ಕರಾವಳಿಯ ಬಳಿ ಭೂಮಿ ಮುಳುಗುವ ಹಾಗೂ ಹಿಂದೆಗೆಯುವ ಚಟುವಟಿಕೆಗಳು ನಡೆಯುತ್ತಿದ್ದವು. 1640ರಲ್ಲಿ ಸೇಂಟ್ ಜಾನ್ ಕೋಟೆಯನ್ನು ಇಲ್ಲಿ ನಿರ್ಮಿಸಿದಾಗ ಸಮುದ್ರವು ಕೋಟೆಯ ಪಕ್ಕದಲ್ಲಿಯೇ ಇತ್ತು. ಕೋಟೆಯ ಸಮೀಪ ಬಂದರಿನ ಕಟ್ಟಡವು ಕೋಟೆಯ ದಕ್ಷಿಣಕ್ಕೆ ಮರಳಿನ ರಾಶಿ ಸಂಗ್ರಹ ಆಗುವ ಹಾಗೆ ಮಾಡಿತು. ಮುಂದೆ ಕಾರಣಾಂತರಗಳಿಂದ ಸಮುದ್ರ ಹಿಂದೆ ಸರಿದಿದ್ದರಿಂದ ಇಲ್ಲಿ ವಿಶಾಲವಾದ ಕಡಲತೀರ ನಿರ್ಮಾಣವಾಯಿತು. ಬಂದರು ನಿರ್ಮಿಸುವ ಮೊದಲು ಕಡಲಿನ ಮೆಕ್ಕಲು ಮಣ್ಣಿನಿಂದ ಕೂಡಿತ್ತು. 1881ರಲ್ಲಿ ಬ್ರಿಟಿಷ್ ಗೌರ್ನರ್ ಆಗಿದ್ದ ಮೌಂಟ್ ಸ್ಟುವರ್ಟ್ ಎಲ್ಫಿನ್ಸ್ಟೋನ್ ಗ್ರಾಂಟ್ ಡಫ್ ಈ ಬಂದರನ್ನು ನಿರ್ಮಿಸಿದನು.

1884ರಲ್ಲಿ ವಾಯುವಿಹಾರಕ್ಕಾಗಿ ಮೃದುವಾದ ಮರಳಿನಿಂದ ಪದರನ್ನು ನಿರ್ಮಿಸಲಾಯಿತು. ಅದೇ ವರ್ಷ ಇದಕ್ಕೆ ಮದ್ರಾಸ್ ಮರೀನಾ ಎಂದು ಹೆಸರು ನೀಡಲಾಯಿತು. ದೇಶದ ಮೊದಲ ಅಕ್ವೇರಿಯಂ ಅನ್ನು 1909ರಲ್ಲಿ ಸ್ಥಾಪಿಸಲಾಯಿತು. ಎಂದು ಮರೀನಾ ಬೀಚ್‌ನ ವಿವರಗಳನ್ನು ಸೋದಾಹರಣವಾಗಿ ನೀಡತೊಡಗಿದ.



ಹೀಗೆ ಮಾತನಾಡುತ್ತಲೆ ಶ್ರೀಗಳು ಹಾಗೂ ಇನ್ನಿತರರು ರಸ್ತೆಯ ಇಕ್ಕಲೆಕ್ಕೆ ಬಂದರು. ಅಲ್ಲಿ ಅಣ್ಣಾ ಸಮಾಧಿಯ ಬಳಿ ರಸ್ತೆಯ ಪಕ್ಕದಲ್ಲಿ ಬಿರುಬಿಸಿಲಿನ ನಡುವೆಯೂ ನಿರುಮ್ಮಳನಾಗಿ ವ್ಯಕ್ತಿಯೊಬ್ಬ ಮಲಗಿದ್ದ.

ಅಷ್ಟರಲ್ಲಿ ಆ ಗೈಡ್‌ಗೆ ಶಿವಬಸವ ಸ್ವಾಮಿಗಳು ಆತ ಬೇಡವೆಂದರೂ ಹಣ ನೀಡಿ ಕಳುಹಿಸಿದ್ದರು. ಶ್ರೀಗಳು ತದೇಕದಿಂದ ಆ ವ್ಯಕ್ತಿಯನ್ನೇ ನೋಡುತ್ತಿರುವುದನ್ನು ಗಮನಿಸಿದ ಗಂಗಾಧರನ್ ಅವರು, 'ಆತನನ್ನೇಕೆ ಹಾಗೆ ನೋಡುತ್ತಿರುವಿರಿ' ಎಂದರು. "ನೋಡಿ ಗಂಗಾಧರನ್, ನಿಜವಾದ ಸನ್ಯಾಸಿ ಎಂದರೆ ಇವನೇ" ಎಂದರು. ಅದು ಹೇಗೆ ಎಂದರು ಗಂಗಾಧರನ್. ಅದಕ್ಕೆ ಶ್ರೀಗಳು 'ನೋಡಿ, ಅವನು ಈ ಉರಿಬಿಸಿಲಿನಲ್ಲೂ ಹೇಗೆ ನಿರುಮ್ಮಳವಾಗಿ ನಿದ್ರಿಸುತ್ತಿದ್ದಾನೆ ಈ ಭಾವ ಎಂಥದ್ದು' ಎಂದರು. ಅದಕ್ಕೆ ಕ್ಯಾತನಹಳ್ಳಿ ಶ್ರೀಗಳು 'ಎಲ್ಲೋ ಆತ ಕುಡಿದಿರಬೇಕು' ಎಂದರು. ಆತನ ಮುಖ ನೋಡಿ "ಕುಡಿತದ ಯಾವ ಲಕ್ಷಣವೂ ಇಲ್ಲ, ಹೆಚ್ಚೆಂದರೆ ಊಟಮಾಡಲು ತೊಂದರೆ ಇರಬಹುದು. ಬಡವನಂತೆ ಕಾಣುತ್ತಾನೆ ಅಷ್ಟೆ ; ಈತ ಕುಡುಕನಲ್ಲ" ಅಂದರು.

"ಅಯ್ಯೋ ಬಿಡಿ ಬುದ್ಧಿ, ಇಂತವರು ಬೇಕಾದಷ್ಟು ಜನ ಸಿಗುತ್ತಾರೆ ಲೋಕದಲ್ಲಿ" ಎಂದರು ಗಂಗಾಧರನ್. ಹಾಗಲ್ಲ ಅದು ಅಲ್ಲಿ ಸಮುದ್ರದಲ್ಲಿ ಮೀನು ಹಿಡಿಯಲು ಹೋಗಿದ್ದ ಅಂಬಿಗರು ಅಲೆಗಳ ಏರಿಳಿತಗಳಿಗೆ ವಿರುದ್ಧವಾಗಿ ಸಾಗಿ ಬದುಕಲು ಹವಣಿಸುವ ಅವರು ಹಾಗೂ ಉರಿಬಿಸಿಲಿನಲ್ಲಿ ಮಲಗಿರುವ ಈತ ಇಬ್ಬರೂ ಜೀವನದ ಎರಡು ಸಂಕೇತಗಳಂತಿದ್ದಾರೆ. ಮೀನುಗಾರರು ಸಂಸಾರದ ಬಂಧನದಲ್ಲಿ ಸಿಕ್ಕು ಒದ್ದಾಡುತ್ತಿರುವ ಜನರಂತೆಯೂ, ಈತ ಸಂತೆಯೊಳಗೊಂದು ಮನೆಯ ಮಾಡಿ ಶಬ್ದಕ್ಕೆ ನಾಚದೆ, 'ನಾವು ಕುಡುಕನಿರಬಹುದು, ಬಡವನಿರಬಹುದು' ಎಂದ ಯಾವ ಮಾತಿಗೂ ಗಮನಕೊಡದೆ ಏಕಾಗ್ರತೆಯಿಂದ ಯಾವ ಜಂಜಡವೂ ಇಲ್ಲದೆ ಇರುವ ಈತ ಅನಂತವನ್ನು ಮಾತ್ರ ಧ್ಯಾನಿಸುವ ಸನ್ಯಾಸಿಯಾಗಿ ಕಾಣುತ್ತಾನೆ ಎಂದರು. ಎಲ್ಲರೂ ಒಂದು ಕ್ಷಣ ಮೌನಕ್ಕೆ ಜಾರಿದರು. ಎಲ್ಲರ ಹೃದಯದ ಕವಾಟ ತೆರೆದಂತೆ ಭಾಸವಾಗತೊಡಗಿತು ಎಂದರು ಗಂಗಾಧರನ್. ಆ ಮಾತಿಗೆ ಯಾವುದೇ ಪ್ರತಿಕ್ರಿಯೆಯನ್ನು ನೀಡದೆ ಇಳಿಜಾರಿಗೆ ಜಾರುತ್ತಿದ್ದ ಸೂರ್ಯನನ್ನೊಮ್ಮೆ ದೃಷ್ಟಿಸಿ ಕಾರಿನ ಸಮೀಪಕ್ಕೆ ಬಂದರು ಶ್ರೀಗಳು.

□



ಹಂಬಲ

ಗಾಢ ಕತ್ತಲು. ಆಗಸದಲ್ಲಿ ಯಾವೊಂದು ನಕ್ಷತ್ರಗಳೂ ಕಾಣುತ್ತಿಲ್ಲ. ದಾರಿ ಹುಡುಕುತ್ತ ಬಂದ ನನಗೆ ಎದುರು ವಿಶಾಲ ಕಡಲ ತೀರ, ದೃಷ್ಟಿ ಹಾಯಿಸಿದಷ್ಟೂ ನೀರೇ ನೀರು. ದಡದಲ್ಲಿ ನಿಂತು ತದೇಕಚಿತ್ತದಿಂದ ಕಡಲನ್ನೇ ನೋಡುತ್ತಿದ್ದೇನೆ. ಅಲೆಗಳು ಒಂದೇ ಸಮನೆ ದಡದ ಕಡೆಗೇ ಧಾವಿಸುತ್ತಿವೆ. ಆದರೆ ಅದರಲ್ಲಿ ನೊರೆಗಳಿಲ್ಲ ಭೋರ್ಗರತೆಗಳಿಲ್ಲ. ಅವುಗಳ ಮಂಜುಳ ನಿನಾದ ಮಾತ್ರ ಕಿವಿಗೆ ಕೇಳಿಸುತ್ತಿದೆ. ಕಡಲು ದಾಟುವ ಅನಿವಾರ್ಯತೆ ನನ್ನದು. ಆದರೆ ದಾಟುವುದೆಂತು? ನನ್ನ ಹಾಗೆ ಯಾರಾದರೂ ಕಡಲ ದಾಟುವವರಿದ್ದಾರೆಯೇ ಎಂದು ನೋಡಿದೆ. ಯಾರೊಬ್ಬರೂ ಕಾಣಲಿಲ್ಲ. ಕಡಲ ದಾಟಲು ನಾವೆಯೊಂದಾದರೂ ಇದ್ದಿದ್ದರೆ ಎನಿಸಿತು. ಅದರೆ ಅದೂ ಇಲ್ಲ. ಚಿಂತೆ ತುಂಬಿ ನಿಂತ ಯಾರೋ 'ಹೇ ಶಿವಯೋಗಿ ಕಡಲು ದಾಟಲೇಕೆ ಅಂಜಿಕೆ? ನಾನಿದ್ದೇನೆ. ನನ್ನ ಕೈಹಿಡಿದು ಹಿಂಬಾಲಿಸಿ ಬಾ ದಾಟಿಸುತ್ತೇನೆ' ಎಂಬ ಮಾತು ಕೇಳಿಸಿತು. ತಿರುಗಿ ನೋಡಿದೆ. ಅದೇ ಅದೇ ಮುಖ. ನನ್ನ ಹರಸಿ ಹಾರೈಸಿದ ಮುಖ. ಆದರೆ ತಟ್ಟನೆ ಗುರುತು ಹತ್ತುತ್ತಿಲ್ಲ. ಆದರೆ ಯಾವುದೋ ಬಂಧ ಮಾತ್ರ ಅವರೆಡೆಗೆ ನನ್ನನ್ನು ಸೆಳೆಯುತ್ತಿದೆ. ಪ್ರಶಾಂತವೂ ಗಂಭೀರವೂ ಆದ ಚಂದ್ರ ವದನ, ಹೊಳೆವ ಕಂಗಳು, ತಾಯ ಸ್ಪರ್ಶ, ಮಾತೆಲ್ಲ ಸಿಹಿಜೇನು, ಕೆಂಡದುಡುಗೆ, ಎಲ್ಲೋ ನೋಡಿದ ನೆನಪು; ಗುರುತು ಕಂಡ ಭಾವ, ಆದರೆ ಗುರುತು ಹತ್ತುತ್ತಿಲ್ಲ. ಕಣ್ಣು ಮಿಟುಕಿಸುತ್ತಾ ಅವರನ್ನೇ ನೋಡುತ್ತಿದ್ದ ನನಗೆ 'ಏ, ಶಿವಯೋಗಿ ನಾನಾರೆಂದು ಹುಡುಕುತ್ತಿರುವೆಯಾ' ಎಂದು ಕೈಹಿಡಿದಾಗ, ಅವರ ಸ್ಪರ್ಶದಿಂದ ಎಚ್ಚರವಾಯಿತು. ಕಣ್ಣನ್ನು ಆವರಿಸಿದ್ದ ಮಬ್ಬು ಹರಿಯಿತು. ನೋಡಿದರೆ ನನ್ನ ಅಸ್ಮಿತೆಗೆ ಕಾರಣರಾದ ಪರಮಪೂಜ್ಯ ರಾಜೇಂದ್ರ ಸ್ವಾಮಿಗಳವರು! ತಕ್ಷಣ ಕಾಲಿಗೆರಗಿದೆ. ಅಡಿಗೆರಗಿದ ನನ್ನ ಭುಜ ಹಿಡಿದು ಮೇಲೆತ್ತಿ, ಕೈಹಿಡಿದು ಕಡಲ ನಡುವೆ ಕರೆದೊಯ್ದರು. ಕಡಲ ಅನಂತತೆಯ ದರ್ಶನವನ್ನು ಮಾಡಿಸಿದರು. ಕಡಲ ದಾಟಿ ಬಂದು ನನ್ನನ್ನು ನೆಲೆ ನಿಲಿಸಿ, ಒಳಿತಾಗಲೆಂದು ಹರಸಿ ಅಂತರ್ಧಾನವಾದರು. 'ಮತ್ತೆ ಯಾವಾಗ ತಮ್ಮ ದರ್ಶನ' ಎಂದೆ. 'ನೀನು ಬಯಸಿದಾಗ' ಎಂದರು. ರೂಪ ಕಾಣದೆ ಮಾತು ಕೇಳಿದ ನಾನು ಅಲ್ಲಿಯೇ ಬೆಟ್ಟದಂತೆ ಬೆಳೆದೆ, ಬೆಟ್ಟದ ಮೇಲೆಲ್ಲ ಗಿಡ ಮರ ಬಳ್ಳಿ, ಅವುಗಳನ್ನು ಆಶ್ರಯಿಸಿದ ಖಗಮೃಗ ಹೀಗೆ. ನೋಡುತ್ತಿದ್ದಂತೆ ನನ್ನ ಮೇಲೆ ಬಿದ್ದ ಭಾರದಿಂದ ಕುಸಿದುಹೋಗುತ್ತಿದ್ದೇನೆ. ಎಷ್ಟೆಂದರೆ



ಮತ್ತೇ ಅದೇ ಕಡಲ ಅಡಿ ಸಿಲುಕುತ್ತಿದ್ದೇನೆ. ನೀರಿನಲ್ಲಿ ಮುಳುಗುತ್ತಿದ್ದ ನಾನು ದಾರಿ ಕಾಣದೆ ಬಾಯ್ತೆರೆದು ಕೂಗಲು ನೋಡಿದೆ. ಯಾರೋ ಬಾಯಿ ಕಟ್ಟಿದ್ದರು. ಕಣ್ಣು ಬಿಡಲು ನೋಡಿದೆ. ಅದನ್ನೂ ಮುಚ್ಚಿ ಹಿಡಿದಿದ್ದರು. ಏನೊಂದೂ ತೋರದೆ ಕನವರಿಸುತ್ತಿದ್ದೆ. ಆಗ ಮತ್ತೆ ಅದೇ ಶ್ರೀಗುರುವಿನ ರೂಪ ನನ್ನ ಮುಂದೆ ಬಂದು ನಿಂತಿತು. ಅವರು ಕೈ ಚಾಚಿದರೂ ನನಗೆ ಕೈನೀಡಲು ಆಗುತ್ತಿಲ್ಲ. ಇನ್ನೇನು ಕಡಲಲ್ಲಿ ಮುಳುಗಿದೆ ಎನ್ನುವಾಗ 'ಕಾಪಾಡಿ ಗುರುವೇ' ಎಂದು ಚೀರಿದೆ. ತಟ್ಟನೆ ಯಾರೋ ಬಡಿದು ಎಚ್ಚರಿಸಿದಂತೆ ಆಯಿತು. ನೋಡಿದರೆ ನನ್ನ ಹೆಂಡತಿ, ನನ್ನ ಪಕ್ಕದಲ್ಲಿ ಕುಳಿತು ಎಚ್ಚರಿಸುತ್ತಿದ್ದಳು. ಆಕೆ "ಎಂದೂ ನೀವು ಈ ರೀತಿ ಚೀರಿದ್ದಿಲ್ಲ. ಯಾಕೆ, ಏನಾಯಿತು" ಎಂದಳು. ಅಮೆರಿಕದ ಹವಾನಿಯಂತ್ರಿತ ಕೊಠಡಿಯಲ್ಲಿ ಮಲಗಿದ್ದರೂ ನಾನು ಬೆವರಿದ್ದೆ. ನನ್ನ ಮುಖವನ್ನೇ ನೋಡುತ್ತಿದ್ದ ಅವಳ ಕಣ್ಣಲ್ಲಿ ಭಯ, ಗಾಬರಿ. ನಾನು ಇಂದೇಕೋ ಕನಸಿನಲ್ಲಿ ನಮ್ಮ ಗುರುಗಳನ್ನು ಕಂಡೆ ಎಂದೆ. ಗುರುಗಳನ್ನು ಕಂಡರೆ ಏಕೆ ಹೀಗೆ ಬೆವರುತ್ತಿದ್ದೀರಿ ಎಂದಳು. ಏನೂ ಇಲ್ಲ ಎಂದು ಕನಸಿನ ವಿವರವನ್ನು ಹೇಳದೆ ಸ್ನಾನಗೃಹದತ್ತ ತೆರಳಿದೆ.

ಹಜಾರದ ಗಡಿಯಾರದಲ್ಲಿ ರಾತ್ರಿ 10.00 ಗಂಟೆ. ಅದರ ಪ್ರಕಾರ ಭಾರತದಲ್ಲಿ ಈಗ ಬೆಳಗಿನ ಹತ್ತು ಗಂಟೆ. ಸರಿ, ಈಗಲೇ ಮಠಕ್ಕೆ ಫೋನ್ ಮಾಡಿ ಶ್ರೀಗಳು ದೂರವಾಣಿಯಲ್ಲಿ ಲಭ್ಯವಾದರೆ ಮಾತನಾಡಿಸೋಣವೆಂದು ಶಿವಯೋಗಿ ಫೋನ್ ಮಾಡಿದ. ಆಶ್ಚರ್ಯವೆಂದರೆ ಸ್ವತಃ ಸ್ವಾಮಿಗಳೇ ಫೋನ್ ತೆಗೆದುಕೊಂಡು 'ಯಾರು' ಎಂದರು. ಸ್ವಾಮಿಗಳವರ ಸ್ವರ ಕೇಳುತ್ತಲೇ ಗಂಟಲು ಉಬ್ಬಿ ಬಂದು ಶಿವಯೋಗಿಗೆ ಮುಂದೆ ಮಾತೇ ಹೊರಡಲಿಲ್ಲ. ಮತ್ತೆ ಶ್ರೀಗಳು 'ಯಾರು, ಯಾರಪ್ಪ ಮಾತನಾಡು' ಎಂದರು. ನಿಧಾನವಾಗಿ ಸಾವರಿಸಿಕೊಂಡ ಶಿವಯೋಗಿ "ಬುದ್ಧಿ, ನಾನು ಶಿವು", ಹಾಗೆಂದೊಡನೇ "ಶಿವಯೋಗಿಯೇ, ಅಮೆರಿಕದಿಂದಲೇ?" ಎಂದು ಉತ್ಸಾಹದಿಂದ ಕೇಳಿದರು, ಶ್ರೀಗಳು. "ಹೌದು ಬುದ್ಧಿ, ನಾನೇ ಶಿವಯೋಗಿ" ಎಂದನು. "ನಿನಗೆ ನೂರು ವರ್ಷ ಆಯಸ್ಸು ಕಣೋ. "ಇನ್ನು ಸ್ವಲ್ಪ ಹೊತ್ತು ಕಳೆದ ಮೇಲೆ ನಾವೇ ನಿನಗೆ ಫೋನ್ ಮಾಡಬೇಕು ಅಂದುಕೊಂಡಿದ್ದೆವು". "ಯಾಕೆ ಬುದ್ಧಿ". ಅಯ್ಯೋ, ನಾವು ಎರಡು ವರ್ಷಗಳ ಹಿಂದೆ ಶಿಕಾರಿಪುರದಲ್ಲಿ ಗುರುಶಾಂತಪ್ಪನವರ ಮನೆಗೆ ಪೂಜೆಗೆ ಬಂದಿದ್ದಾಗ ನೀನು ಕೂಡ ಅಮೆರಿಕದಿಂದ ಬಂದಿದ್ದೆ. ಪೂಜೆಗೆ ಬಂದಿದ್ದ ನಮ್ಮನ್ನು ಕಂಡು "ತಾವು ಅಮೆರಿಕಕ್ಕೆ ಬಂದು ಆತಿಥ್ಯವನ್ನು ಸ್ವೀಕರಿಸಬೇಕು. ತಮ್ಮ



ಆಚರಣೆಗೆ ಯಾವುದೇ ಅಡ್ಡಿಯಾಗದಂತೆ ನೋಡಿಕೊಳ್ಳುತ್ತೇನೆ" ಎಂದು ಹೇಳಿದ್ದೆ. ಅದು ನೆನಪಿಗೆ ಬಂತು. ಮುಂಜಾನೆ ನಾವು ಅಲ್ಲಿಗೆ ಬರಲು ನಿಶ್ಚಯ ಮಾಡಿದ್ದೆವು. ಆ ವಿಷಯವನ್ನು ನಿನಗೆ ತಿಳಿಸಲು ಫೋನ್ ಮಾಡುವವರಿದ್ದೆವು" ಎಂದರು. ಈ ಮಾತು ಕೇಳುತ್ತಲೇ ಶಿವಯೋಗಿಗೆ ಕಣ್ಣೀರು ಧಾರಾಕಾರವಾಗಿ ಹರಿಯಲಾರಂಭಿಸಿತು. ಅವನು ಗದ್ಗದಿತನಾಗಿದ್ದಾನೆಂದು ಅರಿತ ಶ್ರೀಗಳು "ಯಾಕೋ, ಏನಾಯಿತು" ಎಂದರು. "ಏನೂ ಇಲ್ಲ ಬುದ್ಧಿ. ತಾವು ದಯಮಾಡಿ ಬರಲೇಬೇಕು" ಎಂದು ವಿನಂತಿಸಿದನು. 'ನಿಮಗಾಗಿ ಕಾಯುತ್ತಿರುತ್ತೇನೆ' ಎಂದು ಫೋನ್ ಇಟ್ಟವನೆ ಬಿಕ್ಕಿ ಬಿಕ್ಕಿ ಅಳಲಾರಂಭಿಸಿದನು.

ಏನೊಂದೂ ತೋಚದ ಅವನ ಹೆಂಡತಿ 'ಏನೆಂದು ಹೇಳಿ' ಎಂದು ಅವನಿಗೆ ಸಂತೈಸಿದಳು. ಸಾವರಿಸಿಕೊಂಡು ಕನಸಿನ ಎಲ್ಲ ವಿವರವನ್ನೂ ಹೇಳಿದ ಶಿವಯೋಗಿ "ಕಾಕತಾಳೀಯವೆಂದರೆ ನಾನು ಗುರುಗಳ ಕನಸು ಕಂಡ ಕ್ಷಣವೇ ಅವರು ನನ್ನ ಬಗ್ಗೆ ನೆನಸಿಕೊಂಡರಂತೆ" ಎಂದು ಭಾವುಕನಾದನು. ಗಂಡನ ಮಾತು ಕೇಳಿ ಆಕೆಗೂ ಆಶ್ಚರ್ಯವಾಯಿತು. ಈ ಕನಸಿನ ಸಂಗತಿಯನ್ನು ಕೇಳಿ ಕುತೂಹಲವಾಯಿತು. "ಅಂತಹ ಸಂಬಂಧ ಏನಿದೆ ನಿಮ್ಮಿಬ್ಬರ ನಡುವೆ" ಎಂದಳು. ಆಗ ಶಿವಯೋಗಿ ತನ್ನ ಹಳೆಯ ನೆನಪನ್ನು ವಿವರಿಸಲು ಉದ್ಯುಕ್ತನಾದನು:

ಮಠದ ಹೊರಗೆ ಕಾಯುತ್ತಾ ನಿಂತಿದ್ದ ಕಚ್ಚೆ ಧೋತ್ರ ಉಟ್ಟಿದ್ದ ವ್ಯಕ್ತಿಯನ್ನು ದಿಟ್ಟಿಸಿದ ಶ್ರೀಗಳು "ಏನಪ್ಪ, ಏನು ಬಂದೆ" ಎಂದರು. ನಾವು "ಶಿವಮೊಗ್ಗದ ಶಿಕಾರಿಪುರದಿಂದ ಬಂದಿದ್ದೇವೆ ಬುದ್ಧಿ. ಈತ ನನ್ನ ಮಗ. ತಮ್ಮ ಕಾಲೇಜಿನಲ್ಲಿ ಓದಬೇಕು ಎಂದು ಕರೆದುಕೊಂಡು ಬಂದಿದ್ದೇನೆ" ಎಂದನು. ಅಪ್ಪನ ಪಕ್ಕದಲ್ಲಿ ನಿಂತ ಆ ಹುಡುಗನನ್ನು ನೋಡಿದ ಶ್ರೀಗಳು "ಅಲ್ಲಿಯೇ ಓದಬಹುದಲ್ಲಪ್ಪ, ಇಲ್ಲಿಗೇಕೆ ಬಂದೆ" ಎಂದರು. ಆ ಹುಡುಗ ಶ್ರೀಗಳನ್ನೇ ದೃಷ್ಟಿಸುತ್ತಾ "ನಾನು ತಮ್ಮ ಬಳಿಯೇ ಓದಬೇಕು ಎಂದು ಬಂದಿದ್ದೇನೆ" ಎಂದನು. ಆ ಮಾತು ಕೇಳಿ ನಕ್ಕ ಶ್ರೀಗಳು "ನಮ್ಮ ಬಳಿ ಇರಲು ಆಗುವುದಿಲ್ಲವಲ್ಲಪ್ಪ" ಎಂದರು. "ಆಯಿತು, ಊಟಕ್ಕೆ ಏನು ಮಾಡ್ತೀಯಾ" ಎಂದರು. ಆ ಹುಡುಗನ ತಂದೆ "ತಮ್ಮ ಹಾಸ್ಟೆಲ್‌ನಲ್ಲಿ ಒಂದು ಸೀಟು ಕೊಡಿ ಬುದ್ಧಿ" ಎಂದು ಬೇಡಿದನು. "ಸೀಟು ಖಾಲಿ ಇಲ್ಲಪ್ಪ. ನೀವು ಬಂದಿರುವುದೇ ತಡವಾಗಿದೆ" ಎಂದರು. ಹುಡುಗ "ಹಾಗಿದ್ದರೆ ಇಲ್ಲೇ ಮಠದಲ್ಲಿಯೇ ಇರುತ್ತೇನೆ ಬುದ್ಧಿ" ಎಂದನು. ಆ ಮಾತು ಕೇಳಿ ವಿಸ್ಮಯಗೊಂಡ ಶ್ರೀಗಳು 'ಆಯಿತು' ಎಂದು



ಎರಡು ಸಣ್ಣ ಚೀಟಿಗಳಲ್ಲಿ ಏನನ್ನೋ ಬರೆದು ಅವರ ಕೈಗಿತ್ತು "ಒಂದನ್ನು ಕಾಲೇಜಿನಲ್ಲಿ ಕೊಡಿ ಮತ್ತೊಂದನ್ನು ಹಾಸ್ಟೆಲ್‌ನಲ್ಲಿ ಕೊಡಿ" ಎಂದು ಹುಡುಗನ ತಲೆಯನ್ನು ನೇವರಿಸಿದರು. ಚೀಟಿ ತೆಗೆದುಕೊಂಡು ಹೋದ ತಂದೆ ಮಗನಿಗೆ ಆಶ್ಚರ್ಯ ಕಾದಿತ್ತು. ಕಾಲೇಜಿನಲ್ಲಿ ಅಡ್ಮಿಷನ್ ಆಯಿತು; ಹಾಸ್ಟೆಲ್‌ನಲ್ಲಿ ಫುಲ್ ಫ್ರೀ ಎಂದು ಶ್ರೀಗಳು ಬರೆದಿದ್ದಾರೆಂದು ವಾರ್ಡನ್ ತಿಳಿಸಿದಾಗ ಆ ತಂದೆ ಮತ್ತು ಮಗನಿಗೆ ದುಃಖ ಉಮ್ಮಳಿಸಿ ಬಂದಿತು. "ಆ ಹುಡುಗನೇ ನಾನು, ಕಣೆ. ನನ್ನನ್ನು ನೋಡಿದ ಮೊದಲ ನೋಟದಲ್ಲಿಯೇ ಅವರು ತೋರಿದ ಪ್ರೀತಿಯನ್ನು ಹೇಗೆ ತಾನೆ ಮರೆಯಲಿ! ಬಡತನದಲ್ಲಿ ಇದ್ದ ನಮಗೆ ಏನೋ ಒಂದು ಪದವಿ ಪಡೆದು ಉದ್ಯೋಗ ಸಿಕ್ಕಿ ಸಂಸಾರವನ್ನು ಸಾಗಿಸುವಂತೆ ಆದರೆ ಸಾಕು ಎಂದುಕೊಂಡಿದ್ದೆವು. ಆದರೆ ಶ್ರೀಗಳ ಕೃಪಾಕಟಾಕ್ಷದಿಂದ ಆದದ್ದೇ ಬೇರೆ. ನಾನು ಮುಂದೆ ಅವರೇ ನೀಡಿದ ಫ್ರೀ ಮೆಡಿಕಲ್ ಸೀಟಿನಿಂದ ಇಂದು ವೈದ್ಯನಾಗಿದ್ದೇನೆ. ನನ್ನನ್ನು ಎಲ್ಲರೂ 'ಶ್ರೀಗಳ ಮಾನಸಪುತ್ರ' ಎಂದು ಕರೆಯುತ್ತಿದ್ದರು. ನನ್ನ ತಂದೆಯ ಜವಾಬ್ದಾರಿ ಹಾಗೂ ತಾಯಿಯ ಅಕ್ಕರೆ ಎರಡನ್ನೂ ನೀಡಿದವರು ಅವರು. ನಾನು ದೇವರನ್ನು ಕಂಡಿಲ್ಲ. ಆದರೆ ನನ್ನ ಪಾಲಿಗೆ ಅವರೇ ದೇವರು. ಯಾಕೋ ಅವರನ್ನು ಬೇಗ ನೋಡಬೇಕೆಂಬ ಹಂಬಲ ಕಾಡುತ್ತಿತ್ತು" ಎಂದು ಗದ್ಗದಿತನಾದ ಶಿವಯೋಗಿ. ಮುಂದೆ ಆತನ ಹಂಬಲದಂತೆ ಶ್ರೀಗಳು ವಿದೇಶಕ್ಕೆ ತೆರಳಿ ಅವನ ಆತಿಥ್ಯವನ್ನು ಸ್ವೀಕರಿಸಿದುದು ಹೃದ್ಯವಾದ ಸಂಗತಿ.

□

- ಧರ್ಮಯುಕ್ತವಾದ ಕರ್ತವ್ಯವನ್ನು ಮಾಡಲೇಬೇಕು. ಅದು ಯಾವ ಕಾರಣದಿಂದಲೂ ತಪ್ಪಬಾರದು. ಆತ್ಮಸಾಕ್ಷಾತ್ಕಾರಕ್ಕೆ ಇದೂ ಒಂದು ಸಾಧನ.
- ಎಲ್ಲರೂ ದುಡಿಯಬೇಕು, ಎಲ್ಲರೂ ಉಣ್ಣಬೇಕು: ಸರ್ವರಿಗೆ ಸಮಪಾಲು, ಸರ್ವರಿಗೆ ಸಮಬಾಳು.
- ಸಮಾಜಕ್ಕೆ ಒಳಿತನ್ನು ಮಾಡಿಯೂ, ಮಾಡದಂತಿರುವ ಶ್ರೇಷ್ಠ ಮನಃಸ್ಥಿತಿಯನ್ನು ಬೆಳೆಸಿಕೊಳ್ಳಬೇಕು

– ಪರಮಪೂಜ್ಯ ಜಗದ್ಗುರು
ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು



ಕಾಣಿಕೆ

ನಿತ್ಯದ ಮುಂಜಾನೆಯ ಪೂಜೆಯನ್ನು ಮುಗಿಸಿ ಶ್ರೀಮಠದ ಉಪ್ಪರಿಗೆಯ ಮೇಲೆ ಶತಪಥ ಹಾಕುತ್ತಿದ್ದ ರಾಜೇಂದ್ರ ಶ್ರೀಗಳಿಗೆ, ಶ್ರೀಮಠಕ್ಕೆ ಅಭಿಮುಖವಾಗಿ ಗಂಭೀರ ನಿನಾದದಿಂದ ಹರಿಯುತ್ತಿದ್ದ ಕಪಿಲೆಯ ನದಿಯನ್ನು ದಾಟಿಕೊಂಡು ಶ್ರೀಮಠಕ್ಕೆ ಬರುತ್ತಿದ್ದ ಯಾರೋ ಒಬ್ಬರು ಕಂಡರು. ಶ್ರೀಗಳಿಗೆ ಸುತ್ತಲಿನ ಹತ್ತೆಂಟು ಗ್ರಾಮಗಳ ಬಹುತೇಕ ಜನರೆಲ್ಲ ಸುಪರಿಚಿತರು. ಹಾಗೆ ನದಿ ದಾಟಿ ಬರುವವರೆಲ್ಲ ಶ್ರೀಮಠಕ್ಕೆ ಹತ್ತಿರದ ಹೊಸಕೋಟೆ ಗ್ರಾಮದವರು. ಅವರುಗಳು ಶ್ರೀಮಠದ ಮುಂಭಾಗದ ಬರುವಷ್ಟರಲ್ಲಿ ಶ್ರೀಗಳು ಉಪ್ಪರಿಗೆಯಿಂದಿಳಿದು ಶ್ರೀಮಠದ ಹಜಾರಕ್ಕೆ ದಯಮಾಡಿಸಿದ್ದರು. ಬಂದ ಭಕ್ತರೆಲ್ಲ ಉದ್ದಂಡವೆರಗಿ ನಮಿಸಿ, ಶ್ರೀಗಳ ಅಪ್ಪಣೆ ಪಡೆದು, ಕರ್ತೃ ಉತ್ಸವಮೂರ್ತಿಯ ದರ್ಶನ ಪಡೆದರು. ಬಂದವರನ್ನು ಕುಳಿತುಕೊಳ್ಳಲು ಸನ್ನೆ ಮಾಡಿ, ಪೂರ್ವಾಭಿಮುಖವಾಗಿ ಹಾಕಿದ್ದ ಬೆತ್ತದ ಕುರ್ಚಿಯ ಮೇಲೆ ಕುಳಿತ ಶ್ರೀಗಳು "ಇಷ್ಟು ಬೆಳ್ಳಂಬೆಳಗ್ಗೆ ಮಠಕ್ಕೆ ಬರುವ ಕಾರಣವೇನಪ್ಪ, ಮಾದಪ್ಪ" ಎಂದರು. ಮಾದಪ್ಪನವರಿಗೆ ಅವರ ಹೆಸರಿನ ಹಿಂದೆ ಮೈಸೂರು ಎನ್ನುವ ವಿಶೇಷಣವಿತ್ತು. ಹೆಚ್ಚಿನ ಜನರು ಅವರನ್ನು 'ಮೈಸೂರು ಮಾದಪ್ಪ' ಎಂದು ಕರೆಯುತ್ತಿದ್ದುದು ವಾಡಿಕೆ. ಶ್ರೀಮಠಕ್ಕೆ ಬಹಳ ಭಕ್ತರಾಗಿದ್ದ ಅವರು ಶ್ರೀಗಳ ಬಗ್ಗೆ ಅಪಾರ ಗೌರವಾದರಗಳನ್ನು ಹೊಂದಿದ್ದರು.

ಶ್ರೀಗಳ ಮಾತು ಕೇಳಿ ಒಬ್ಬರೊಬ್ಬರ ಮುಖ ನೋಡಿಕೊಂಡ ಹೊಸಕೋಟೆ ಗ್ರಾಮಸ್ಥರು, 'ನೀನು ಹೇಳು, ನೀನು ಹೇಳು' ಎಂದು ಕಣ್ಸನ್ನೆ, ಕೈಸನ್ನೆ ಮಾಡತೊಡಗಿದರು. ಅದನ್ನು ಗಮನಿಸಿದ ಶ್ರೀಗಳು 'ಯಾರಾದರೂ ಒಬ್ಬರು ಹೇಳಿ, ಸುಮ್ಮನೆ ಸನ್ನೆ ಮಾಡಿದರೇನು ಬಂತು' ಎಂದರು. ಆಗ ಮಾದಪ್ಪನವರೇ 'ಏನೂ ಇಲ್ಲ ಬುದ್ಧಿ. ಪ್ರತಿ ವರ್ಷ ನಮ್ಮ ಗ್ರಾಮದಲ್ಲಿ ಭತ್ತದ ಭಿಕ್ಷೆಗೆ ಬರುತ್ತಿದ್ದಿರಿ. ಆದರೆ ಹೋದ ವರ್ಷದಿಂದ ತಾವು ಬರುತ್ತಿಲ್ಲ, ಶ್ರೀಮಠದಿಂದಲೂ ಯಾರೂ ಬರುತ್ತಿಲ್ಲ. ನಾವೇ ಭತ್ತ ಸಂಗ್ರಹಿಸಿ ತಂದರೂ ಸ್ವೀಕರಿಸುತ್ತಿಲ್ಲ. ಯಾಕೆ ಎಂದು ತಿಳಿಯುತ್ತಿಲ್ಲ. ಅದಕ್ಕೆ ತಮ್ಮನ್ನು ಕಂಡು ನಮ್ಮ ತಪ್ಪು ನೆಪ್ಪುಗಳನ್ನು ತಿಳಿದುಕೊಂಡು ಹೋಗೋಣವೆಂದು ಬಂದಿದ್ದೇವೆ ಬುದ್ಧಿ' ಎಂದರು. ಮಾದಪ್ಪನವರ ಮಾತನ್ನು ಆಲಿಸಿದ ಶ್ರೀಗಳು ಗಂಭೀರವದನರಾಗಿಯೇ 'ತಮಗೆ ಕಾರಣ ತಿಳಿದಿದೆ, ಅದನ್ನು ಮತ್ತೆ ನಾವೇನು ಹೇಳುವುದು' ಎಂದರು. 'ಅಲ್ಲ ಬುದ್ಧಿ, ನಮಗೂ ಪರಿವಾರದವರಿಗೂ ಆದ ಜಗಳ, ಯಾವ ದೊಡ್ಡಮಟ್ಟದ



ಅನಾಹುತವೂ ಆಗದೆ ನಿಂತದ್ದು, ಊರಿನಲ್ಲಿ ಎಲ್ಲರೂ ಶಾಂತಿಯಿಂದ ಇರುವುದು ತಮ್ಮಿಂದಲೇ ಅಲ್ವ ಬುದ್ಧಿ. ನೀವೂ ಅಂದು ಮಧ್ಯ ಪ್ರವೇಶಿಸದೆ ಇದ್ದರೆ ಲಿಂಗಾಯತರು ಹಾಗೂ ಪರಿವಾರದವರ ಎಷ್ಟು ಹೆಣ ಬೀಳುತ್ತಿದ್ದವೋ ಗೊತ್ತಿಲ್ಲ ಬುದ್ಧಿ, ಇಂತಹ ನಿಮ್ಮ ಋಣ ನಮ್ಮ ಮೇಲೆ ಇದೆ. ಅದರೆ ಅದನ್ನು ತೀರಿಸುವುದಿರಲಿ, ನಮ್ಮ ಕಾಣಿಕೆಯನ್ನೂ ಸ್ವೀಕರಿಸುತ್ತಿಲ್ಲವಲ್ಲ ಯಾಕೆ ಬುದ್ಧಿ' ಎಂದ ಕಾಳಪ್ಪನವರ ಮಾತಿಗೆ, ಶ್ರೀಗಳು ಆತನನ್ನು ದೃಷ್ಟಿಸಿ, 'ಏನೋ ಕಾಳಪ್ಪ' ನಮ್ಮಿಂದ ಶಾಂತಿ ನೆಲೆಸಿದೆ ಅಂತ ಹೇಳ್ತೀಯ. ಆದರೆ ಯಾರೂ ಸಹಬಾಳ್ವೆಯಿಂದ ಇಲ್ಲವಲ್ಲಪ್ಪ, ಸಹಬಾಳ್ವೆ ಇದ್ದು, ಇಲ್ಲದೆ ಮೇಲ್ನೋಟಕ್ಕೆ ಶಾಂತಿ ನೆಲೆಸಿ, ಒಳಗೊಳಗೆ ಕುದಿಯುತ್ತಿರುವ ಜನರ ಕಾಣಿಕೆ ತಂದು ಭಕ್ತರಿಗೆ ಬಡಿಸಿದರೆ, ಆ ಕುದಿತವನ್ನೇ ಬಡಿಸಿದ ಹಂಗಲ್ವ? ಸ್ವಾಮಿಗಳಾದವರು ಶಾಂತಿ ಬಡಿಸಬೇಕೋ, ಕುದಿತವನ್ನು ನೀಡಬೇಕೋ ಹೇಳು' ಎಂದರು.

'ಅದರಲ್ಲಿ ನಮ್ಮದೇನೂ ತಪ್ಪಿಲ್ವಲ್ಲ, ಬುದ್ಧಿ. ಹದಿನಾರಿನಲ್ಲಿ ಟೆಂಟ್‌ಗೆ ಸಿನಿಮಾ ನೋಡಲು ಹೋಗಿ ಶುರುವಾದ ಜಗಳ ಅದು. ಜಗಳವಾಡಿದವರು ಹದಿನಾರು ಮೋಳೆಯವರು ಹಾಗೂ ನಮ್ಮೂರಿನ ಪರಿವಾರದವರು. ಆದರೆ ಅದು ಮರಂಕನಿಂದ ನಮ್ಮೂರಿಗೆ ಹಬ್ಬಿ ಇಷ್ಟೆಲ್ಲ ಅನಾಹುತ ಆಯ್ತು ಅನ್ನೋದು ತಮಗೆ ತಿಳಿದೇ ಇದೆ. ಅಂತಹದ್ದರಲ್ಲಿ ನೀವು ನಮ್ಮನ್ನು ಹೀಗೆ ದೂರ ತಳ್ಳೋದು ನ್ಯಾಯವ ಬುದ್ಧಿ' ಎಂದನು ಶಿವಪ್ಪ. ಶ್ರೀಗಳ ಬಳಿ ಅವರಂಥ ಹಿರಿಯರು ಬಹಳ ನಿಸ್ಸಂಕೋಚವಾಗಿ ಆದರೆ ಗೌರವಕ್ಕೆ ಚ್ಯುತಿಯಾಗದ ರೀತಿ ಮಾತನಾಡಲು ಅವಕಾಶವುಂಟು.

ಶಿವಪ್ಪನ ಮಾತು ಕೇಳಿದ ಶ್ರೀಗಳು 'ಅಲ್ಲ ಕಣೋ ದಡ್ಡ. ನೀವು ಹೇಳೋದು ನಿಜನೇ. ಆದರೆ ಅದರಿಂದ ಊರಿನ ಮುಗ್ಧ ಜನ ಎಷ್ಟು ಹಿಂಸೆಪಟ್ಟರು ಅನ್ನೋದನ್ನು ಯೋಚಿಸಿದ್ದೀಯ. ನೀವೆಲ್ಲ ಆ ಜನರನ್ನು ಕೂಲಿನಾಲಿಗೆ ಕರೀತಾನೇ ಇಲ್ವಂತೆ ಹೌದೇನೋ'. ಆಗ ಒಬ್ಬರು ಸ್ವಲ್ಪ ಬಿರುಸಿನಿಂದಲೇ 'ಅಲ್ಲ ಬುದ್ಧಿ, ನಮ್ಮ ಜೊತೆ ಜಗಳ ಆಡಿ, ರಾತ್ರಿ ಹೊತ್ತು ನಮ್ಮ ಗದ್ದೆಯ ಫಸಲನ್ನೆಲ್ಲ ಕುಯ್ದುಕೊಂಡು, ಮೆದೆಗೆಲ್ಲ ಬೆಂಕಿ ಹಾಕಿ ದನಗಳಿಗೆ ಮೇವು ಇಲ್ಲದಂಗೆ ಮಾಡಿದೋರ್ನ ಹೆಂಗೆ ಕೆಲ್ಸಕ್ಕೆ ಕರಿಯಾಕ್ಕಾಗತ್ತೆ ಹೇಳಿ' ಎಂದರು.

ಶ್ರೀಗಳು 'ನೋಡ್ದ, ಮನಸ್ಸಿನಲ್ಲಿ ಇನ್ನೂ ಬೆಂಕಿ ನಂದಿಸದೆ ಹಾಗೇ ಇಟ್ಕೊಂಡು ನಮ್ಮನ್ನು ಕಾರಣ ಕೇಳೋಕೆ ಬಂದಿದ್ದೀರಿ ಅಲ್ಲ, ಮಾದಪ್ಪ, ಬೆಂಕಿ ತಾನಿದ್ದ ಜಾಗಾನ ಸುಟ್ಟು ಮುಂದಿನದನ್ನು ಆಮೇಲೆ ಸುಡುತ್ತೇ ಕಣೋ. ಸಾಕು, ನಿಮ್ಮ ಮುಂದಿನ



ತಲೆಮಾರಿಗೆ ಈ ವಿಷವನ್ನು ದಾಟಿಸಬೇಡಿ' ಎಂದರು. ಕಾಳಪ್ಪ 'ನಾವು ಬಿಟ್ಟರೂ ಅವರು ಬಿಡಬೇಕಲ್ಲ' ಎಂದರು. "ಅವರೂ ಬಿಡಬೇಕು, ನೀವೂ ಬಿಡಬೇಕು. ಆಗ ಮಾತ್ರ ನಾವು ನಿಮ್ಮ ಭಿಕ್ಷೆಯನ್ನು ಸ್ವೀಕರಿಸುತ್ತೀವಿ. ಇಲ್ಲ ಅಂದರೆ ಇಲ್ಲ ಅಷ್ಟೆ. ಬೆಳಗ್ಗೇನೆ ಬಂದಿದ್ದೀರಿ, ತಿಂಡಿ ತಿಂದಿದೀರೋ ಇಲ್ವೋ. ಹೋಗಿ ಪ್ರಸಾದ ಮಾಡಿ, ಹೊರಡಿ ಎಂದರು. ಆಗ ಕಾಳಪ್ಪನವರೇ 'ಆಯ್ತು ಬುದ್ಧಿ, ನಮಗೆ ನೀವು ಬೇಕು, ನೀವು ಹೇಳಿದಂತೆಯೇ ಕೇಳ್ತೀವಿ. ಆದರೆ ನಾವಾಗಿದ್ದು ನಾವು ಮಾತ್ರ ಅವರನ್ನು ಕರೆಯಲ್ಲ' ಎಂದರು. 'ಆಯ್ತು ನೀವು ನಾಡಿದ್ದು ಬನ್ನಿ, ನಾವೇ ಅವರನ್ನು ಕರೆಸುತ್ತೇವೆ' ಎಂದು ಹೇಳಿ ಕಳುಹಿಸಿದರು.

ಮರುದಿನ ಬೆಳಗ್ಗೆ ಪರಿವಾರದ ಸಮುದಾಯದಿಂದ ಮರಂಕ, ಸುಬ್ಬನಾಯಕ, ಮುದ್ದುಮಾದ ಇವರುಗಳು, ಲಿಂಗಾಯ್ತರಿಂದ ಕಾಳಪ್ಪ, ಮೈಸೂರು ಮಾದಪ್ಪ, ಶಿವಪ್ಪ ಮುಂತಾದವರು ಪ್ರತ್ಯೇಕ ಪ್ರತ್ಯೇಕವಾಗಿ ಶ್ರೀಮಠಕ್ಕೆ ಆಗಮಿಸಿದರು. ಶ್ರೀಗಳು ಎಲ್ಲರಿಗೂ ಮೊದಲು ಪ್ರಸಾದ ಮಾಡಲು ಹೇಳಿದರು. ಅನಂತರ ಎಲ್ಲರನ್ನೂ ಎದುರು ಬದುರಾಗಿ ಕುಳ್ಳಿರಿಸಿ "ನೋಡಪ್ಪ ಮರಂಕ, ಮೊನ್ನೆ ದಿನ ಕಾಳಪ್ಪ, ಮಾದಪ್ಪ ಬಂದು ನಮ್ಮ ಕಾಣಿಕೆ ಯಾಕೆ ಸ್ವೀಕರಿಸುತ್ತಿಲ್ಲ ಎಂದು ಕೇಳಿದರು. ನೀವೆಲ್ಲರೂ ಪರಸ್ಪರ ಸಹಬಾಳ್ವೆಯಿಂದ ಇರೋವರೆಗೆ ನಾವು ಕಾಣಿಕೆ ಸ್ವೀಕರಿಸೋಲ್ಲ ಅಂತ ಹೇಳಿದ್ದೀವಿ. ಸಾಕು ಕಣೋ, ಯಾವುದೋ ಕೆಲಸಕ್ಕೆ ಬಾರದ ಮಾತಿಗೆ ಇಷ್ಟೊಂದು ವೈಷಮ್ಯ, ವೈಮನಸ್ಸು ಬೆಳೆಸಿಕೊಳ್ಳೋದರಲ್ಲಿ ಅರ್ಥವಿಲ್ಲ. ಈಗ ನೀವು ಯಾರೂ ಒಬ್ಬರನ್ನೊಬ್ಬರು ದೂರಬೇಡಿ. ನೀವಿಬ್ಬರೂ ಚೆನ್ನಾಗಿದ್ದರೆ ಮಾತ್ರ ನಾವು ಕಾಣಿಕೆ ಸ್ವೀಕರಿಸುತ್ತೀವಿ. ಇಲ್ಲ ಅಂದರೆ ಇಲ್ಲ. ಎಲ್ಲರೂ ಬಂದಿದ್ದೀರಿ, ಸಂತೋಷ. ನೀವು ಕಾಣಿಕೆ ಕೊಡದಿದ್ದರೂ ಬೇಸರವಿಲ್ಲ. ನಗುತ್ತಲೇ ಇಲ್ಲಿಂದ ತೆರಳಬಹುದು" ಎಂದರು.

ಮರಂಕ ಏನೋ ಮಾತನಾಡಲು ಆರಂಭಿಸಿದ. ಅಷ್ಟರಲ್ಲಿ ಅವರ ಸಮುದಾಯದ ಸುಬ್ಬನಾಯಕ "ಒಂದು ಗಳಿಗೆ ಇರು ಮಗ. ಬುದ್ಧಿಯೋರು ಬಹಳ ದೊಡ್ಡ ಮಾತ ಆಡಿರೋದಾಗ ನಾವು ನಾಲ್ಗೆ ತೆರೆದು ನಾಯಿ ಆಗ್ಬಾರ್ದು. ಏನೋ ಕೆಟ್ಟ ಗಳಿಗೆ. ಆಯ್ತು ಬುದ್ಧಿ, ತಾವು ಏನು ಅಪ್ಪಣೆ ಮಾಡ್ತೀರಿ ಮಾಡಿ, ನಾವು ಒಪ್ಕೋತೀವಿ. ಆದರೆ ನಮ್ದು ಒಂದು ಷರತ್ತಿದೆ. ಅದನ್ನು ನಡೆಸಿಕೊಡಬೇಕು ಎಂದನು.

ಸ್ವಾಮಿಗಳು 'ಏನಪ್ಪ ಅದು' ಎಂದರು.



'ಬುದ್ಧಿ, ನೀವು ಈ ಸಲ ನಮ್ಮೂರಿನಿಂದಲೇ ಭಿಕ್ಷೆ ಶುರು ಮಾಡಬೇಕು. ಹಂಗೇನೇ ನಮ್ಮ ಕೇರಿಗೂ ಬಂದು ನಮ್ಮ ಕಾಣಿಕೆ ಸ್ವೀಕರಿಸಬೇಕು' ಎಂದನು. ಆಗ ಶ್ರೀಗಳ ಮುಖ ಪ್ರಸನ್ನವಾಯಿತು. 'ಅಲ್ಲೋ, ನಾವೆಂದೂ ಬರೀ ಲಿಂಗಾಯ್ತರ ಮನೆ ಭಿಕ್ಷೆ ಮಾತ್ರ ಬೇಕು ಅಂದಿದೀವಾ, ಅಥವಾ, ನಮ್ಮ ಮಠದಲ್ಲಿ ನಮ್ಮವರಿಗೆ ಮಾತ್ರ ಪ್ರಸಾದ ಹಾಕಿದ್ದೀವಾ, ನಮಗೆ ಯಾರು ಕಾಣಿಕೆ ಕೊಟ್ಟರೂ ಸ್ವೀಕರಿಸುತ್ತೇವೆ' ಎಂದರು. ಆಗ 'ಹಂಗಲ್ಲ ಬುದ್ಧಿ, ನಾವು ನಿಮಗೆ ಬತ್ತ ಕೊಡಕೇ ಆಗೋದಿಲ್ಲ. ಬದಲಿಗೆ ನಮ್ಮ ಕೈಲಿ ಆದಷ್ಟು ದುಡ್ಡು ನೀಡ್ತೀವಿ, ತಾವು ಒಪ್ಪಿಸಿಕೊಳ್ಳಬೇಕು' ಎಂದ ಮರಂಕ. ಶ್ರೀಗಳು ಆಯ್ತು ಎಂದರು.

ಆಗ ಮಾದಪ್ಪನವರು 'ಬುದ್ಧಿ, ನಮ್ಮ ಊರಿಗೆ ಬಂದ ಒಂದು ದೊಡ್ಡ ಗಂಡಾಂತರವನ್ನು ತಪ್ಪಿಸಿ ಎಲ್ಲರೂ ಚೆನ್ನಾಗಿ ಬಾಳೋ ತರ ಮಾಡಿದ್ದೀರಿ. ನಮ್ಮದೂ ಒಂದು ಕಂಡೀಷನ್ ಬುದ್ಧಿ, ಅದನ್ನ ತಾವು ಒಪ್ಪಬೇಕು" ಎಂದರು.

"ಏನೋ ಮಾದಪ್ಪ ಗುರುಗಳು ಭಕ್ತರಿಗೆ ಕಂಡೀಷನ್ ಹಾಕ್ತಾರೆ. ಆದರೆ ಇಲ್ಲಿ ಭಕ್ತರೇ ಕಂಡೀಷನ್ ಹಾಕ್ತಿದ್ದೀರಿ. ಆಯ್ತು ನಿನ್ನದೇನಪ್ಪ" ಎಂದರು ಶ್ರೀಗಳು. ಆಗ "ಬುದ್ಧಿ, ಈ ಸಾರಿ ತಾವು ನಮ್ಮ ಊರಿನಿಂದಲೇ ಭಿಕ್ಷೆ ಆರಂಭಿಸಬೇಕು. ಅಲ್ಲದೆ ತಮ್ಮ ಅಡ್ಡಪಲ್ಲಕ್ಕಿ ಉತ್ಸವವನ್ನು ನಾವು ಮಾಡುವುದಕ್ಕೆ ಅವಕಾಶ ಕೊಡಬೇಕು" ಎಂದರು. ಶ್ರೀಗಳು "ಅದೆಲ್ಲ ಬೇಡಪ್ಪ" ಎಂದರು. ನೆರೆದಿದ್ದ ಎಲ್ಲರೂ "ಒಪ್ಪಿಕೊಳ್ಳಬೇಕು... ಒಪ್ಪಿಕೊಳ್ಳಬೇಕು" ಎಂದು ಪ್ರೀತಿಯಿಂದ ಒತ್ತಾಯ ಮಾಡಿದರು. ಶ್ರೀಗಳು ಸಮ್ಮತಿಸಿದರು. ಎಲ್ಲರೂ ಖುಷಿಯಿಂದ 'ಬುದ್ಧಿ ಇನ್ಮೇಲೆ ಶ್ರೀಮಠಕ್ಕೆ ಯಾರೇ ಹೊಸ ಸ್ವಾಮಿಗಳ ಪಟ್ಟಾಧಿಕಾರವಾದರೂ ಮೊದಲು ನಮ್ಮ ಊರಿನಲ್ಲೇ ಮೆರವಣಿಗೆ ಆಗಬೇಕು. ಹಾಗಂತ ಮಾತು ಕೊಡಿ ಎಂದು ಒತ್ತಾಯಿಸಿದರು. "ಅದನ್ನೆಲ್ಲ ಈಗ್ಲೇ ಹೇಗೆ ಹೇಳೋದು. ಮುಂದೆ ನೋಡೋಣ" ಎಂದರು. ಆಗ ಎಲ್ಲರೂ 'ಬುದ್ಧಿ, ಇದು ಒತ್ತಾಯವಲ್ಲ. ನೀವು ನಮಗೆ ಸಹಬಾಳ್ವೆ ಕಲಿಸಿದಿರಿ, ಅದಕ್ಕೆ ಪ್ರತಿಫಲವಾಗಿ ನಾವು ನಿಮಗೆ ಈ ಗೌರವ ಅರ್ಪಿಸುತ್ತಿದ್ದೇವೆ' ಎಂದರು. ಶ್ರೀಗಳು ಹಸನ್ಮುಖಿಗಳಾಗಿ 'ಆಗಲಿ' ಎಂದರು.

ಇಂದೂ ಕೂಡ ಶ್ರೀಮಠದಿಂದ ಭಿಕ್ಷೆಗೆ ಹೋಗುವವರು ಪರಿವಾರ ಸಮುದಾಯದವರ ಮನೆಗೆ ಹೋಗಿ ಅವರು ನೀಡುವ ಕಾಣಿಕೆಯನ್ನು ಸ್ವೀಕರಿಸುತ್ತಲೇ ಬರುವ ಸಂಪ್ರದಾಯವಿದೆ. ಶ್ರೀಮಠದ ನೂತನವಾಗಿ ಪಟ್ಟಾಧಿಕಾರವಾದ ಶ್ರೀಗಳ ಮೆರವಣಿಗೆಯು ಹೊಸಕೋಟೆಯಲ್ಲೇ ಜರುಗುತ್ತಿದೆ. □



ಸ್ಥಾನ–ಮಾನ

ಲೋಕದ ದೃಷ್ಟಿಯಲ್ಲಿ ಅನೇಕ ಬಾರಿ ತಾನು ಅಲಂಕರಿಸುವ ಸ್ಥಾನದಿಂದ ವ್ಯಕ್ತಿಗೆ ಗೌರವಾದರಗಳು ಸಲ್ಲುತ್ತವೆ. ವ್ಯಕ್ತಿಯಿಂದ ಸ್ಥಾನಕ್ಕೆ ಗೌರವ ಬರಬೇಕೇ ಹೊರತು, ಸ್ಥಾನದಿಂದ ವ್ಯಕ್ತಿಗೆ ಗೌರವ ಬರಬಾರದು. ಸ್ಥಾನವೆನ್ನುವುದು ಶಾಶ್ವತವಾಗಿಯೇನೂ ಇರುವುದಲ್ಲವಲ್ಲ! ಮತ್ತೆ ತೋರಿಕೆಯ ಸ್ಥಾನಗಳು ಬೇರೆ. ಹೃದಯದಲ್ಲಿನ ಸ್ಥಾನಗಳು ಬೇರೆ. ನಾವು ಆರಿಸಿಕೊಳ್ಳುವ ಹುದ್ದೆಗಳು ತೋರಿಕೆಯವು. ಅವು ಹೃದಯದಲ್ಲಿ ಸ್ಥಾನವನ್ನು ತಂದುಕೊಡಲಾರವು. ಆದರೆ ಮಾತಿನಲ್ಲಿ ಸ್ಥಾನವನ್ನು ತಂದುಕೊಡುತ್ತವೆ. ಮಾತಿಗೆ ಹೆಚ್ಚು ತೂಕವಿರುವುದಿಲ್ಲ. ಅದು ಸಂದರ್ಭಾನುಸಾರಿಯಾದದ್ದು ಎಂಬುದು ಪೂಜ್ಯ ರಾಜೇಂದ್ರ ಮಹಾಸ್ವಾಮಿಗಳವರ ಸ್ಪಷ್ಟ ನಿಲುವಾಗಿತ್ತು. ಅದಕ್ಕೆ ನಿದರ್ಶನವೆಂಬಂತೆ ಅವರ ಬದುಕಿನಲ್ಲಿ ಸ್ವಾರಸ್ಯಕರ ಘಟನೆಯೊಂದು ಜರುಗಿತು.

ಬೆಳ್ಳಂಬೆಳಗ್ಗೆ ರಿಂಗಣಿಸಿದ ಸ್ಥಿರ ದೂರವಾಣಿಯನ್ನು ಸ್ವೀಕರಿಸಿದ ಶ್ರೀಮಠದ ಕಾರ್ಯಕರ್ತರಾಗಿದ್ದ ಶ್ರೀ ಶಿವರಾಮು ಅವರು ಸಂಭಾಷಣೆ ಮುಗಿದ ನಂತರ, ಪೂಜ್ಯ ರಾಜೇಂದ್ರ ಮಹಾಸ್ವಾಮಿಗಳವರಿಗೆ, "ಬುದ್ಧಿ, ಗೃಹಮಂತ್ರಿಗಳಾದ ಶ್ರೀ ಸಿದ್ಧವೀರಪ್ಪನವರು ಫೋನ್ ಮಾಡಿದ್ದರು, ತಮ್ಮನ್ನು ಕಾಣಲು ಬರುತ್ತಿದ್ದಾರಂತೆ" ಎಂದರು. ಪೂಜ್ಯರು "ಹೌದೇ, ಆಯಿತು. ಅವರೇನು ಬೆಳಗ್ಗಿನ ಉಪಾಹಾರಕ್ಕೆ ಬರುತ್ತಾರೋ, ಮಧ್ಯಾಹ್ನ ಪ್ರಸಾದಕ್ಕೆ ಬರುತ್ತಾರೋ ತಿಳಿಯಬೇಕಿತ್ತು" ಎಂದರು. ಅದಕ್ಕೆ ಶಿವರಾಮು "ಬೆಳಗ್ಗೆಯ ಪ್ರಸಾದಕ್ಕೆ ಬರುತ್ತಾರಂತೆ" ಎಂದರು. ಶ್ರೀಗಳು "ಆಯ್ತು, ಅವರಿಗೆ ವ್ಯವಸ್ಥೆ ಮಾಡು" ಎಂದು, ತಮ್ಮ ಇನ್ನಿತರ ಕಾರ್ಯಗಳಲ್ಲಿ ಮಗ್ನರಾದರು. ಮೂಲತಃ ದಾವಣಗೆರೆಯವರಾದ ಶ್ರೀ ಸಿದ್ಧವೀರಪ್ಪನವರು, ಸಂವಿಧಾನ ರಚನಾಸಭೆಯ ಸದಸ್ಯರಾಗಿದ್ದವರು. 1970–71ರ ಅವಧಿಯಲ್ಲಿ ವಿಧಾನಸಭೆಯ ವಿರೋಧಪಕ್ಷದ ನಾಯಕರಾಗಿದ್ದರು, ದಾವಣಗೆರೆ ನೀರಾವರಿ ಯೋಜನೆ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಅವರು ರಾಜ್ಯ ಸರ್ಕಾರದಲ್ಲಿ ಗೃಹಮಂತ್ರಿಗಳು ಸಹ ಆಗಿದ್ದರು. ಪರಮಪೂಜ್ಯ ರಾಜೇಂದ್ರ ಮಹಾಸ್ವಾಮಿಗಳವರನ್ನು ಕಂಡರೆ ಶ್ರೀ ಸಿದ್ಧವೀರಪ್ಪನವರಿಗೆ ಅತೀವ ಭಕ್ತಿ–ಗೌರವ. ಪರಮಪೂಜ್ಯರ ಮಾತೃಮಮತೆ ನನಗೆ ತಾಯಿಯಿಲ್ಲವೆಂಬ ಕೊರತೆಯನ್ನು ಮರೆಸಿದೆ ಎಂದು ಅವರು ಅನೇಕ ಬಾರಿ ಸಾರ್ವಜನಿಕವಾಗಿ ಹೇಳುತ್ತಿದ್ದರು. ಪರಮಪೂಜ್ಯರ ಸೇವಾಮನೋಭಾವ ತಮ್ಮಂತಹ



ರಾಜಕಾರಣಿಗಳಿಗೆ ದಾರಿದೀಪ ಎಂದು ಅವರು ಭಾವಿಸಿದ್ದರು. ಪೂಜ್ಯರಿಗೂ ಅವರನ್ನು ಕಂಡರೆ ವಿಶೇಷ ಪ್ರೀತಿ. ಪೂಜ್ಯರ ಪ್ರೀತಿಯನ್ನು ಸವಿದ ಎಲ್ಲರಿಗೂ ಅದು ಕೇವಲ ತಮಗೇ ಪೂಜ್ಯರು ನೀಡುತ್ತಿರುವ ವಿಶೇಷ ಪ್ರೀತಿ ಎಂದೇ ಭಾವಿಸುತ್ತಿದ್ದರು. ಅವರೆಂದೂ ಭಕ್ತರಲ್ಲಿ ಭೇದವೆಣಿಸಿದವರಲ್ಲ. ಭೇದವೆಂದರೇನೆಂದೇ ತಿಳಿಯದ ಜ್ಯೋತಿಸ್ವರೂಪರು ಅವರು.

ಸಿದ್ಧವೀರಪ್ಪನವರು ಉಪಾಹಾರದ ಸಮಯಕ್ಕೆ ಬಂದರು. ಅವರನ್ನು ಆಹ್ವಾನಿಸಿದ ಕ್ಯಾತನಹಳ್ಳಿಯ ಶ್ರೀ ಶಿವಪ್ರಭುಸ್ವಾಮಿಗಳವರು ಹಾಗೂ ಕಾರ್ಯಕರ್ತ ಶ್ರೀ ಶಿವರಾಮು ಅವರು "ಮೊದಲು ತಾವು ಉಪಾಹಾರ ಮಾಡಬೇಕಂತೆ. ಅನಂತರ ಪೂಜ್ಯರ ಭೇಟಿ" ಎಂದರು. ಸಿದ್ಧವೀರಪ್ಪನವರು, "ಇಲ್ಲ. ಮೊದಲು ದರ್ಶನ, ಅನಂತರ ಪ್ರಸಾದ"ವೆಂದರು. ಆದರೂ ಶಿವರಾಮು ಅವರು "ಇಲ್ಲ ಸಾರ್, ಪೂಜ್ಯರ ಆದೇಶವಾಗಿದೆ. ಉಪಾಹಾರದ ಸಮಯ ಬೇರೆ ಮೀರುತ್ತಿದೆ. ಮೊದಲು ಪ್ರಸಾದ ಸ್ವೀಕಾರ ಮಾಡಲು ಗುರುಗಳು ಹೇಳಿದ್ದಾರೆ. ದಯಮಾಡಿ ಬನ್ನಿ" ಎಂದು ಒತ್ತಾಯಿಸಿ ಕರೆದೊಯ್ದರು. ಉಪಹಾರ ಸ್ವೀಕರಿಸಿ ಬಂದ ಸಿದ್ಧವೀರಪ್ಪನವರು, ಪರಮಪೂಜ್ಯ ರಾಜೇಂದ್ರ ಮಹಾಸ್ವಾಮಿಗಳನ್ನು ಭೇಟಿಯಾಗಿ ಅವರ ಅಡಿಗೆರಗಿದರು. ಪೂಜ್ಯರು "ಉಪಾಹಾರ ತಡವಾಯಿತೇನೋ" ಎಂದರು. ಅದಕ್ಕೆ ಸಿದ್ಧವೀರಪ್ಪನವರು "ಅಯ್ಯೋ ಬುದ್ಧಿ, ನಾನು ತಡವಾಗಿ ಬಂದೆ ಅಷ್ಟೇ. ಉಪಾಹಾರ ತಡವಾಗೇನು ಆಗಿಲ್ಲ" ಎಂದರು. ಪೂಜ್ಯರು ಸ್ವಲ್ಪ ಸಮಯದ ಬಳಿಕ "ಹೇಗಿದೆ ನಿಮ್ಮ ಮಂಡಿನೋವು" ಎಂದರು. "ಏನೋ ಬುದ್ಧಿ ವಾಸಿನೇ ಆಗ್ತಿಲ್ಲ. ನಾನು ಅನೇಕ ಡಾಕ್ಟರ್ ಬಳಿ ತೋರಿಸಿದೆ. ಯಾಕೋ ಗುಣವಾಗುತ್ತಿಲ್ಲ" ಎಂದರು. "ಹೌದೆ, ಎಲ್ಲಿ ತೋರಿಸಿ, ನೋಡೋಣ" ಎಂದರು ಪೂಜ್ಯರು. ಕಾಲು ನೀಡಿ ಮಂಡಿ ತೋರಿಸಲು ಹಿಂಜರಿದ ಸಿದ್ಧವೀರಪ್ಪನವರು "ಬೇಡಿ ಬಿಡಿ ಬುದ್ಧಿ. ಅದು ಇದ್ದದ್ದೇ" ಎಂದರು. ಅದಕ್ಕೆ ಪೂಜ್ಯರು "ನಾವು ನೋಡಬಾರದೆಂದೇ? ಎಲ್ಲಿ ತೋರಿಸಿ" ಎಂದು ಒತ್ತಾಯಿಸಿದರು. ಗತ್ಯಂತರವಿಲ್ಲದೆ ಸಿದ್ಧವೀರಪ್ಪನವರು ಕಾಲು ನೀಡಿ ತೋರಿಸಬೇಕಾಯಿತು. "ಮಂಡಿಯೇನೂ ಊದಿಕೊಂಡಿಲ್ಲ" ಎಂದರು ಪೂಜ್ಯರು. "ಊದಿಕೊಳ್ಳುವುದು ಏನೂ ಇಲ್ಲ ಬುದ್ಧಿ. ಆದರೆ ಕುಳಿತುಕೊಳ್ಳುವಾಗ, ನಡೆಯುವಾಗ ಮಾತ್ರ ನೋವಾಗುತ್ತದೆ" ಎಂದರು.

"ಹಾಗಾದರೆ ಒಂದು ಕೆಲಸ ಮಾಡೋಣ. ನಮ್ಮ ಬಿಳಿಗಿರಿರಂಗನ ಬೆಟ್ಟದಲ್ಲಿ ಇರುವ ವಿಶ್ವಶಾಂತಿ ನಿಕೇತನ ಆಶ್ರಮದಲ್ಲಿ ಸ್ವಾಮಿ ನಿರ್ಮಲಾನಂದರು ಅಂತ ಒಬ್ಬರು



ಸ್ವಾಮಿಗಳಿದ್ದಾರೆ. ಮೊದಲು ಅವರು ಸೈನ್ಯದಲ್ಲಿದ್ದರು. ಅಲ್ಲಿಂದ ಬಂದ ಮೇಲೆ ಸ್ವಾಮಿಗಳಾಗಿದ್ದಾರೆ. ಅವರು ಆಯುರ್ವೇದ ಹಾಗೂ ನಾಟಿ ಔಷಧದಲ್ಲಿ ಸಿದ್ಧಹಸ್ತರು. ಅವರ ಬಳಿ ನಿಮ್ಮ ಮಂಡಿಯ ನೋವಿನ ವಿಚಾರವನ್ನು ಹೇಳಿದ್ದೇನೆ. ತಮ್ಮನ್ನು ಕರೆದುಕೊಂಡು ಬರುವಂತೆ ತಿಳಿಸಿದ್ದಾರೆ. ತಮಗೆ ವಿರಾಮವಿದ್ದರೆ ಈಗಲೇ ಹೋಗಿ ಬರಬಹುದು" ಎಂದರು. ಸಿದ್ಧವೀರಪ್ಪನವರು "ಅಯ್ಯೋ ಬುದ್ಧಿ, ತಮ್ಮ ಕೆಲಸಗಳನ್ನೆಲ್ಲ ಬಿಟ್ಟು ನನಗೋಸ್ಕರ ತಾವು ಅಲ್ಲಿಗೆ ಬರುವುದು ಬೇಡಿ. ನಾನೇ ಹೋಗಿಬರುತ್ತೇನೆ" ಎಂದರು. ಪೂಜ್ಯರು "ಅಯ್ಯೋ ವೀರಪ್ಪ, ನಮಗೆ ಕೆಲಸ ಇದ್ದೇ ಇರುತ್ತದೆ. ಆದರೆ ಸಮಾಜದ ಕೆಲಸ ಮಾಡುವ ನಿನ್ನದೊಂದು ಸಣ್ಣ ಕೆಲಸವನ್ನು ನಾವು ಮಾಡಿಕೊಟ್ಟರೆ ತಪ್ಪೇನು" ಎಂದರು. ಪೂಜ್ಯರ ಮಾತು ಕೇಳಿ ಗದ್ಗದಿತರಾದ ವೀರಪ್ಪನವರು "ತಾವು ಮಾಡುವ ಸೇವೆಯ ಮುಂದೆ ನಮ್ಮದೇನು ಬುದ್ಧಿ, ನಾವು ಸ್ವಾರ್ಥದಿಂದ ಅಧಿಕಾರಕ್ಕಾಗಿ ಸೇವೆ ಮಾಡುತ್ತೇವೆ. ತಾವು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದ ಸಮಾಜಸೇವೆ ಮಾಡುತ್ತಿದ್ದೀರಿ. ತಾವು ಹೀಗೆಲ್ಲ ಅನ್ನಬಾರದು ಬುದ್ಧಿ, ನಮಗೆ ಶ್ರೇಯಸ್ಕರವಲ್ಲ" ಎಂದರು. ಅದಕ್ಕೆ ನಕ್ಕ ಪರಮಪೂಜ್ಯರು "ಸೇವೆಯಲ್ಲಿ ದೊಡ್ಡದು, ಚಿಕ್ಕದು ಎಂದೇನೂ ಇಲ್ಲ. ಎಲ್ಲವೂ ಒಂದೇ ಆಯಿತು, ನಡೆಯಿರಿ, ನಮ್ಮ ಕಾರಿನಲ್ಲೇ ಬನ್ನಿ" ಎಂದು ಅವರನ್ನು ಕರೆದುಕೊಂಡು ಬಿಳಿಗಿರಿರಂಗನ ಬೆಟ್ಟಕ್ಕೆ ಹೋದರು.

ನಿರ್ಮಲಾನಂದರಿಗೂ ಪರಮಪೂಜ್ಯರನ್ನು ಕಂಡರೆ ತುಂಬ ಪ್ರೀತಿ. ಅದು ಭಕ್ತಿಗಿಂತಲೂ ಮಿಗಿಲಾದುದು. ಮಂತ್ರಿಗಳನ್ನು ಮತ್ತು ಪರಮಪೂಜ್ಯರನ್ನು ಕಂಡು ಸಂತಸಗೊಂಡ ನಿರ್ಮಲಾನಂದರು ಪರಮಪೂಜ್ಯರಿಗಾಗಿ ಕುರ್ಚಿಯೊಂದನ್ನು ತರಿಸಿದರು. ಬದುಕಿನಲ್ಲಿ ವೈರಾಗ್ಯದ ತುದಿಯನ್ನು ತಲುಪಿದ್ದ ನಿರ್ಮಲಾನಂದರಿಗೆ, ಲೌಕಿಕದ ಬಗ್ಗೆ ಅಷ್ಟೇನೂ ಆಸಕ್ತಿ ಇರಲಿಲ್ಲ. ಹಾಗಾಗಿ ಅವರಿಗೆ ರಾಜಕಾರಣಿ, ಅಧಿಕಾರಿ ಯಾರೇ ಬಂದರು ಅವರನ್ನೆಲ್ಲ ಒಂದೇ ಬಗೆಯಾಗಿ ಕಾಣುತ್ತಿದ್ದರು. ಹಾಗಾಗಿ ಅವರು ಸಿದ್ಧವೀರಪ್ಪನವರಿಗೆ ಕುರ್ಚಿ ತರಿಸಲಿಲ್ಲ. ಆದರೆ, ಪರಮಪೂಜ್ಯರು ಕುರ್ಚಿಯಲ್ಲಿ ಕೂರದೆ "ಸ್ವಾಮಿ ನಿರ್ಮಲಾನಂದರ ಪಕ್ಕದಲ್ಲಿ ಚಿತ್ರಾಸನವನ್ನು ಹಾಕಿಸಿ, ತಾವು ನೆಲದ ಮೇಲೆ ಕುಳಿತುಕೊಂಡು, ಸಿದ್ಧವೀರಪ್ಪನವರಿಗೆ ಕುರ್ಚಿಯಲ್ಲಿ ಕುಳಿತುಕೊಳ್ಳಲು ಹೇಳಿದರು. ಸಿದ್ಧವೀರಪ್ಪನವರೋ ಇಬ್ಬರೂ ಮಹಾಪೂಜ್ಯರು ನೆಲದ ಮೇಲೆ ಕುಳಿತಿದ್ದನ್ನು ಕಂಡು ತಾವು ಮಾತ್ರ ಕುರ್ಚಿಯಲ್ಲಿ ಕುಳಿತುಕೊಳ್ಳುವುದು ಸರ್ವಥಾ ಸರಿಯಲ್ಲವೆಂದು ಕುಳಿತುಕೊಳ್ಳಲು ನಿರಾಕರಿಸಿದರು. ಪೂಜ್ಯರು ಒತ್ತಾಯ ಮಾಡಿದರು. ಸಿದ್ಧವೀರಪ್ಪನವರು



ನಿರಾಕರಿಸಿದರು. ಆಗ ಪರಮಪೂಜ್ಯರು "ನೋಡಿ, ವೀರಪ್ಪ. ನೀವು ಮಂಡಿನೋವಿನಿಂದ ಬಳಲುತ್ತಿದ್ದೀರಿ. ನೆಲದ ಮೇಲೆ ಕೂರಲು ಆಗುವುದಿಲ್ಲ. ಹಾಗಾಗಿ ತಾವು ಕುರ್ಚಿಯಲ್ಲಿ ಕೂರುವುದು ದೋಷವಲ್ಲ. ಅದೂ ಅಲ್ಲದೆ ತಾವು ಮಂತ್ರಿಗಳು. ನಿಮಗಿಂತಲೂ ನಿಮ್ಮ ಸ್ಥಾನ ದೊಡ್ಡದು. ಅದಕ್ಕೆ ಒಂದು ಗೌರವವಿರುತ್ತದೆ. ಅದನ್ನು ಎಲ್ಲರೂ ನೀಡಬೇಕು. ಅದಕ್ಕಾಗಿ ತಾವು ಕುರ್ಚಿಯಲ್ಲಿ ಕುಳಿತುಕೊಳ್ಳಬೇಕು. ಇದು ನಮ್ಮ ಆದೇಶವೆಂದು ತಾವು ಭಾವಿಸಬೇಕು" ಎಂದರು. ಆದರೆ ಸಿದ್ಧವೀರಪ್ಪನವರು, "ಬುದ್ಧಿ, ನಮ್ಮ ಸ್ಥಾನ ಇಂದು ಇರುತ್ತದೆ, ನಾಳೆ ಹೋಗುತ್ತದೆ. ಆದರೆ ತಾವು ಕೆಳಗೆ ಕುಳಿತು ನಾನು ಮೇಲೆ ಕುಳಿತರೆ ನನ್ನ ಮಾನವೇನಾಗಬೇಕು. ಆ ಮಾನವಿಲ್ಲದ ಮೇಲೆ ಬೇರೆ ಏನಿದ್ದರೇನಂತೆ. ನಾನು ಯಾವುದೇ ಕಾರಣಕ್ಕೂ ಕುರ್ಚಿಯಲ್ಲಿ ಕುಳಿತುಕೊಳ್ಳುವುದಿಲ್ಲ" ಎಂದರು. ಪೂಜ್ಯರು "ನೋಡಿ ವೀರಪ್ಪ, ಮೇಲೆ ಕೆಳಗೆ ಎಂಬುದು ಯಾವುದೂ ಇಲ್ಲ. ಭೌತಿಕ ವಸ್ತುಗಳ ಸ್ಥಾನದಿಂದ ವ್ಯಕ್ತಿಯನ್ನು, ವ್ಯಕ್ತಿತ್ವವನ್ನು ಅಳೆಯಲಾಗುವುದಿಲ್ಲ. ಹೃದಯದಲ್ಲಿ ಪ್ರೀತಿ ಇದ್ದಾಗ ಗೌರವ, ಅಹಂಕಾರ, ಮಾನ, ಸನ್ಮಾನಗಳ ಪ್ರಶ್ನೆ ಉದ್ಭವಿಸುವುದಿಲ್ಲ. ನೀವು ಕೂರಿ" ಎಂದರು. ಪರಮಪೂಜ್ಯರು ಹಾಗೂ ಸಿದ್ಧವೀರಪ್ಪ ನವರ ಈ ಜುಗಲ್‌ಬಂದಿಯನ್ನು ಗಮನಿಸುತ್ತಲೇ ಇದ್ದ ನಿರ್ಮಲಾನಂದರು ನಕ್ಕು, ಮತ್ತೊಂದು ಕುರ್ಚಿಯನ್ನು ತರಿಸಿ "ಬುದ್ಧಿ, ಗುರುವಿಗೆ ತಕ್ಕ ಶಿಷ್ಯ, ಶಿಷ್ಯನಿಗೆ ತಕ್ಕ ಗುರುವನ್ನು ಕಂಡು ನಾನು ವಿಸ್ಮಿತನಾದೆ. ತಾವು ಕುಳಿತುಕೊಳ್ಳದೆ ಅವರು ಕುಳಿತು ಕೊಳ್ಳುತ್ತಿಲ್ಲ. ಅವರು ಕುಳಿತುಕೊಳ್ಳದೆ ತಾವು ಕುಳಿತುಕೊಳ್ಳುತ್ತಿಲ್ಲ. ಈಗ ಯಾವ ತಕರಾರೂ ಇಲ್ಲದೆ ಇಬ್ಬರೂ ಕುಳಿತುಕೊಳ್ಳಿ. ಇದು ನನ್ನ ವಿನಂತಿ" ಎಂದರು. ನೆರೆದಿದ್ದವರೆಲ್ಲ ನಕ್ಕರು. ಪರಮಪೂಜ್ಯರು ಕುರ್ಚಿಯ ಮೇಲೆ ಕುಳಿತ ಮೇಲೆಯೇ ಸಿದ್ಧವೀರಪ್ಪನವರು ಕುಳಿತರು.

□

- ನಿಷ್ಠೆಯಿಂದ ಬಡಬಗ್ಗರ, ದೀನದಲಿತರ ಸೇವೆ ಮಾಡಿದರೆ ಪರಮಾತ್ಮನ ಸೇವೆ ಮಾಡಿದಂತಾಗುತ್ತದೆ, ಜೀವನ ಸಾರ್ಥಕವಾಗುತ್ತದೆ
- ದುಡಿಮೆಯನ್ನು ಗೌರವಿಸಲು ಕಲಿತರೆ ಆಗ ದುಡಿಯುವವರನ್ನು ಗೌರವಿಸುವುದು ಸಹಜವಾಗುತ್ತದೆ

– ಪರಮಪೂಜ್ಯ ಜಗದ್ಗುರು
ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು



ನಾಸ್ತಿಕ...

ನಂಬದಿರ್ದನು ತಂದೆ, ನಂಬಿದನು ಪ್ರಹ್ಲಾದ
ನಂಬಿಯಂ ನಂಬದಿರುವಿಬ್ಬಂದಿ ನೀನು
ಕಂಬದಿನೊ ಬಿಂಬದಿನೊ ಮೋಕ್ಷವವರಿಂಗಾಯ್ತು
ಸಿಂಬಳದಿ ನೊಣ ನೀನು – ಮಂಕುತಿಮ್ಮ

ಕಗ್ಗದ ಈ ಮಾತುಗಳನ್ನು, ಎದುರು ಸಿಕ್ಕ ಪರಮಾಪ್ತರ ಎದುರು ಒಮ್ಮೆಯಾದರೂ ಹೇಳುವ ವಾಡಿಕೆ ಅವರದಾಗಿತ್ತು. ಅವರೆಂದರೆ ಒಂದು ಕಾಲದಲ್ಲಿ ಪರಮ ನಾಸ್ತಿಕ ರಾಗಿದ್ದವರು, ಚಾರ್ವಾಕ ಸಿದ್ಧಾಂತದ ಅನುಯಾಯಿಯಾಗಿದ್ದರು. ದೇವರೆಂದರೆ ಮೈಮೇಲೆ ದೆವ್ವ ಬಂದಂತೆ ಆಡುತ್ತಿದ್ದರು.

ಸ್ವಾತಂತ್ರ್ಯಪೂರ್ವದಲ್ಲಿ ತಮಿಳುನಾಡಿಗೆ ಸೇರಿದ್ದ, ಕೊಳ್ಳೇಗಾಲ ತಾಲ್ಲೂಕಿನ, ಕೆಸ್ತೂರು ಗ್ರಾಮದ ಸ್ಥಿತಿವಂತ ಕುಟುಂಬದಲ್ಲಿ ಹುಟ್ಟಿ ಬೆಳೆದ ಪಿ. ಬಸವಣ್ಣನವರು, ಆ ಕಾಲದ ಜಸ್ಟಿಸ್ ಪಾರ್ಟಿಯ ರಾಜಕೀಯ ತತ್ತ್ವ ಸಿದ್ಧಾಂತಗಳಿಗೆ ಮಾರುಹೋಗಿದ್ದರು. ಒಂದು ಅರ್ಥದಲ್ಲಿ ಪೆರಿಯಾರ್ ಅವರ ಗಾಢ ಪ್ರಭಾವ ಬಸವಣ್ಣನವರ ಮೇಲೆ ಆಗಿತ್ತು. ದೇವರು ಇದ್ದಾನೆ, ಅವನು ಈ ಲೋಕವನ್ನು ಸಲಹುತ್ತಾನೆ. ನಾವು ನೆಪಮಾತ್ರ ಎಂಬ ಆಸ್ತಿಕವಾದವನ್ನು ಎಂದೂ ಒಪ್ಪುತ್ತಿರಲಿಲ್ಲ. ನಾವು ಮಾಡುವ ಎಲ್ಲ ಕರ್ಮಗಳೂ ದೈವನಿಯಮಿತ ಎಂದಾದರೆ, ನಾವು ಮಾಡುವ ಅಕಾರ್ಯಗಳು, ಅಪರಾಧಗಳು ಕೂಡಾ ದೈವಸಂಕಲ್ಪವೇ ತಾನೇ ಎಂಬ ಪೆರಿಯಾರ್ ಅವರ ವಾದ ಅಥವಾ ತರ್ಕದಿಂದ ಬಸವಣ್ಣನವರು ಬಹಳ ಪ್ರಭಾವಿತರಾಗಿದ್ದರು.

ದಕ್ಷಿಣ ಭಾರತದ ಮೊಟ್ಟಮೊದಲ ವಿಶ್ವವಿದ್ಯಾನಿಲಯ ಮದರಾಸಿನಲ್ಲಿ ಪ್ರಾರಂಭವಾಗಿತ್ತು. ಉನ್ನತ ಶಿಕ್ಷಣಕ್ಕಾಗಿ ಎಲ್ಲ ರಾಜ್ಯಗಳವರೂ ಅಲ್ಲಿಗೆ ಹೋಗಬೇಕಾಗಿತ್ತು. ಆಗತಾನೆ ಪದವಿ ಮುಗಿಸಿ, ಎಲ್‌ಎಲ್‌ಬಿ ಮಾಡಲು ಮದರಾಸಿನ ಪ್ರೆಸಿಡೆನ್ಸಿ ಕಾನೂನು ಕಾಲೇಜಿಗೆ ಸೇರಿದ ಬಸವಣ್ಣನವರು, ಜಸ್ಟಿಸ್ ಪಾರ್ಟಿ ಹಾಗೂ ಪೆರಿಯಾರ್ ಅವರ ಸಿದ್ಧಾಂತದಿಂದ ಪ್ರಭಾವಿತರಾದರು. ರಾಜಧಾನಿಯಾದ ಮದರಾಸಿನಲ್ಲಿ, ಪೆರಿಯಾರ್ ಅವರ ಸಿದ್ಧಾಂತದಿಂದ ಕೂಡಿದ ದ್ರಾವಿಡ ಕಳಗಂ ಪಕ್ಷವನ್ನು ಸೇರಿದರು. ಕರ್ನಾಟಕದಲ್ಲಿ ಕೂಡ ಜಸ್ಟಿಸ್ ಪಾರ್ಟಿ ಆಗ ಆರಂಭಗೊಂಡಿತ್ತು. ಬಸವಣ್ಣನವರು ಕರ್ನಾಟಕದಲ್ಲಿ ಕೂಡ ಪೆರಿಯಾರ್ ಅವರ ಸಿದ್ಧಾಂತ ಜಾರಿಗೆ ಬರಬೇಕು ಎಂದು ಭಾವಿಸಿದ್ದರು. ಬಸವಣ್ಣನವರು ತೀಕ್ಷ್ಣಮತಿಗಳಾಗಿದ್ದರು. ಹಾಗೆಯೇ ಶ್ರಮಜೀವಿಗಳೂ. ಬುದ್ಧಿಯ ಬಲವನ್ನು ನಂಬಿದವರು ಸಾಮಾನ್ಯವಾಗಿ ಶ್ರಮಜೀವಿಗಳಾಗಿರುವುದಿಲ್ಲ ಎನ್ನುವುದಕ್ಕೆ



ಬಸವಣ್ಣನವರ ವ್ಯಕ್ತಿತ್ವ ಅಪವಾದವಾಗಿತ್ತು. ಅನೇಕ ಬಾರಿ ಕೆಸ್ತೂರಿನಿಂದ ದೂರದ ಮದರಾಸಿಗೆ ಅವರು ಸೈಕಲ್ಲಿನಲ್ಲೇ ಪ್ರಯಾಣ ಮಾಡಿದ್ದು ಉಂಟು. ಆ ಕಾಲಕ್ಕೆ ಸೈಕಲ್ಲಿನಲ್ಲಿ ಪ್ರಯಾಣ ಮಾಡುವುದು ಒಂದು ಐಷಾರಾಮಿ ವಿಚಾರ ಎನ್ನುವುದು ಬೇರೆ ವಿಚಾರ.

ಪೆರಿಯಾರ್ ಪ್ರಭಾವದಿಂದ ಬಸವಣ್ಣನವರು, ಲೆನಿನ್, ಕಾರ್ಲ್ ಮಾರ್ಕ್ಸ್ ಮುಂತಾದವರ ಕಮ್ಯುನಿಸಂ ಸಿದ್ಧಾಂತವನ್ನು ಚೆನ್ನಾಗಿ ಓದಿಕೊಂಡಿದ್ದರು. ಮೈಸೂರು ವಿಶ್ವವಿದ್ಯಾನಿಲಯ ಆರಂಭವಾದ ಮೇಲೆ ಕರ್ನಾಟಕದಿಂದ ಮದರಾಸಿಗೆ ವಿದ್ಯಾಭ್ಯಾಸ ಕ್ಕಾಗಿ ಹೋಗುವವರ ಸಂಖ್ಯೆ ಕಡಿಮೆಯಾಗಿ, ಎಲ್ಲರೂ ಮೈಸೂರಿನತ್ತ ಆಗಮಿಸುತ್ತಿದ್ದರು. ಆಗ ವಿದ್ಯಾಭ್ಯಾಸಕ್ಕಾಗಿ ಮೈಸೂರಿಗೆ ಬಂದ ವಿದ್ಯಾರ್ಥಿಗಳು ವಸತಿಗಾಗಲಿ, ಊಟಕ್ಕಾಗಲಿ ಏನೂ ವ್ಯವಸ್ಥೆ ಇರಲಿಲ್ಲ. ಅನೇಕ ಸ್ಥಿತಿವಂತರು, ಸುಸಂಸ್ಕೃತರು ವಿದ್ಯಾರ್ಥಿಗಳನ್ನು ಅದರಲ್ಲೂ ಬಡ ವಿದ್ಯಾರ್ಥಿಗಳನ್ನು ಮನೆಗೆ ಕರೆದು ವಾರಾನ್ನ ಹಾಕುವ ಪದ್ಧತಿ ಇತ್ತು. ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರು ಕೆಲಕಾಲ ವಾರಾನ್ನವನ್ನು ಆಶ್ರಯಿಸಿದ್ದರು ಎಂಬುದು ಗಮನಾರ್ಹ.

ಆ ಸಂದರ್ಭದಲ್ಲಿ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಮಂತ್ರಮಹರ್ಷಿಗಳಿಂದ ಅಪ್ಪಣೆ ಪಡೆದು, ಮೈಸೂರಿನಲ್ಲಿ ನೆಲೆಸಿದ್ದ ಪೂಜ್ಯ ರಾಜೇಂದ್ರ ಶ್ರೀಗಳು, ವಿದ್ಯಾರ್ಥಿಗಳು ಅಧ್ಯಯನಕ್ಕಾಗಿ ಕಷ್ಟಪಡುತ್ತಿರುವುದನ್ನು ಗಮನಿಸಿ ತಮಗೆ ಶ್ರೀಮಠವು ನೀಡುತ್ತಿದ್ದ ಪಡಿಪದಾರ್ಥಗಳನ್ನೇ ಬಳಸಿಕೊಂಡು ಕೆಲವು ವಿದ್ಯಾರ್ಥಿಗಳಿಗೆ, ಪ್ರಸಾದ ವ್ಯವಸ್ಥೆ ಮಾಡಿದ್ದರು. ಅವರ ಈ ಕೈಂಕರ್ಯವೇ ಮುಂದೆ ಬೆಳೆದು ಕ್ಯಾತನಹಳ್ಳಿ ಹಾಸ್ಟೆಲ್ ಸ್ವರೂಪ ಪಡೆಯಿತು. ಆ ಕಾಲದ ವಿದ್ಯಾರ್ಥಿಗಳಿಗೆ ಕ್ಯಾತನಹಳ್ಳಿ ಹಾಸ್ಟೆಲ್ ಮತ್ತು ಮೇನ್ ಬಿಲ್ಡಿಂಗ್‌ನಲ್ಲಿ ವಸತಿ, ಪ್ರಸಾದ ಸಿಕ್ಕಿದೆ ಎಂದರೆ ಅವರು ಶಿಕ್ಷಣ ಯಶಸ್ವಿಯಾಗಿ ಮುಗಿಸಿದಂತೆಯೇ ಎಂಬ ಪ್ರತೀತಿ ಇತ್ತು.

ವಿದ್ಯಾರ್ಥಿಗಳಿಗೆ ಶ್ರೀಗಳು ನೀಡಿದ ಆಶ್ರಯ, ಆಗ ಮೈಸೂರಿನ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಪ್ರಸಿದ್ಧವಾಗಿತ್ತು. ಆಗ ಕೊಳ್ಳೇಗಾಲದಲ್ಲಿ ವಕೀಲ ವೃತ್ತಿಯಲ್ಲಿ ತೊಡಗಿದ್ದ ಬಸವಣ್ಣನವರಿಗೆ ಈ ಸಂಗತಿ ಸಹಜವಾಗಿಯೇ ತಲುಪಿತ್ತು. ಕುತೂಹಲದಿಂದ ಒಮ್ಮೆ ಶ್ರೀಗಳನ್ನು ಭೇಟಿಯಾಗಲು ಬಯಸಿ, ಅವರು ತಂಗಿದ್ದ ಕ್ಯಾತನಹಳ್ಳಿ ವಿದ್ಯಾರ್ಥಿನಿಲಯಕ್ಕೆ ಬಂದರು. ರಾಜೇಂದ್ರ ಶ್ರೀಗಳು ಬೆಳಗಿನ ತಮ್ಮ ಪೂಜೆಯನ್ನು ಮುಗಿಸಿ, ಕಚೇರಿಯ ಕೆಲಸವನ್ನೆಲ್ಲಾ ಪರಿಶೀಲಿಸಿ ತಮ್ಮ ಕೊಠಡಿಯಲ್ಲಿದ್ದರು. ಬಸವಣ್ಣನವರು ಬಂದ ವಿಚಾರವನ್ನು ವಿದ್ಯಾರ್ಥಿಯೊಬ್ಬ ಶ್ರೀಗಳಿಗೆ ತಿಳಿಸಿದನು. ಅವರು 'ಆಯ್ತು, ಬರಹೇಳಿ' ಎಂದರು.

ಸಾಧಾರಣ ಕುರ್ಚಿಯಲ್ಲಿ, ಕುಳಿತಿದ್ದ ಶ್ರೀಗಳನ್ನು, ಕೊಠಡಿಯ ಬಾಗಿಲು ತೆರೆದು ಒಳಬಂದ ಬಸವಣ್ಣನವರು ನೋಡಿದರು. ತಮ್ಮ ಪರಿಚಯ ಮಾಡಿಕೊಂಡರು, ನಂತರ



"ನೋಡಿ ಸ್ವಾಮಿಗಳೆ, ನಾನು ಯಾರಿಗೂ ಕಾಲಿಗೆ ಬೀಳುವುದಿಲ್ಲ. ಅದು ಗುಲಾಮಗಿರಿ ಎಂದು ನನ್ನ ಭಾವನೆ. ಪರಸ್ಪರ ಗೌರವವಿದ್ದರೆ ಸಾಕು. ನನಗೆ ತಮ್ಮ ಕಾರ್ಯಗಳ ಬಗ್ಗೆ ಅಪಾರ ಗೌರವವಿದೆ. ನಾನು ತಲೆಬಾಗಿ ನಮಸ್ಕರಿಸಲಾರೆ, ಅದು ಆತ್ಮಗೌರವಕ್ಕೆ ಚ್ಯುತಿ ತರುತ್ತದೆ" ಎಂದರು. ಒಂದೇ ಸಮನೇ, ವೇಗವಾಗಿ ಆಡಿದ ಬಸವಣ್ಣನವರ ಅಷ್ಟು ಮಾತುಗಳನ್ನೂ ನಗುತ್ತಲೇ ಆಲಿಸಿದ ಶ್ರೀಗಳು, "ಮೊದಲು ಕುಳಿತುಕೊಳ್ಳಿ" ಎಂದು ತಮ್ಮ ಎಡಗಡೆಗೆ ಇದ್ದ ಕುರ್ಚಿಯನ್ನು ತೋರಿಸಿದರು. ಕಾಲಿನ ಮೇಲೆ ಕಾಲು ಹಾಕಿಕೊಂಡು ಕುಳಿತ ಬಸವಣ್ಣನವರು, "ನಾನು ನನ್ನ ವಿಚಾರಗಳನ್ನು ಮೊದಲೇ ಸ್ಪಷ್ಟಪಡಿಸಿದ್ದೇನೆ. ನನ್ನ ನಡವಳಿಕೆ ನಿಮಗೆ ಅನಾದರವೋ, ಅನೌಚಿತ್ಯವೋ, ಅನಾಗರಿಕವೋ ಆಗಿ ಕಾಣಬಾರದು" ಎಂದರು. ಶ್ರೀಗಳು ನಗುತ್ತಲೇ "ನೋಡಿ ಬಸವಣ್ಣ, ನಾವು ನಿಮ್ಮನ್ನು ನಮ್ಮ ಕಾಲಿಗೆ ನಮಸ್ಕರಿಸಿ ಎಂದೆವೆ, ಇಲ್ಲ ತಾನೇ, ಹಾಗೆಯೇ ನಾವು ಯಾರನ್ನೂ ನಮಗೆ ನಮಸ್ಕರಿಸಿ ಎಂದಾಗಲೀ, ತಲೆಬಾಗಿ ನಮಿಸಬೇಕೆಂದಾಗಲಿ ಎಂದೂ ಕೇಳುವುದಿರಲಿ, ಅಂದುಕೊಳ್ಳುವುದೂ ಇಲ್ಲ. ದೇವರೇ ಸೃಷ್ಟಿಸಿದ ಗಿರಿ, ವನ ಎಂದೂ ತಲೆಬಾಗುವುದಿಲ್ಲ ಎಂದರೆ ಅವು ದೇವರಿಗೆ ಅವಿಧೇಯವಾಗಿವೆ ಎಂದರ್ಥವಲ್ಲ, ಬದುಕು ಮಡಿಯಾಗುವುದು ಮುಖ್ಯವೇ ಹೊರತು ತೋರಿಕೆಯ ಗೌರವವಲ್ಲ" ಎಂದರು.

ಶ್ರೀಗಳು ಹಾಗೂ ಬಸವಣ್ಣನವರು ಕೆಲ ಕಾಲ ಹೀಗೆಯೇ ಆತ್ಮೀಯವಾಗಿ ಸಂಭಾಷಿಸಿದರು. ಕೊನೆಗೆ ಹೊರಡಲು ಸಿದ್ಧರಾದ ಬಸವಣ್ಣನವರು ಅವರ ಅರಿವಿಗೇ ಬಾರದಂತೆ ಶ್ರೀಗಳವರ ಪಾದಮುಟ್ಟಿ ನಮಸ್ಕರಿಸಿದರು. ಶ್ರೀಗಳು ತಕ್ಷಣ "ಇದೇನು ಮಾಡುತ್ತಿದ್ದೀರಿ" ಎಂದು ತಮ್ಮ ಪಾದಗಳನ್ನು ಹಿಂದೆಗೆದುಕೊಂಡರು. ಆಗ ಬಸವಣ್ಣನವರು, "ಇಲ್ಲ ಬುದ್ಧಿ, ನಾನು ಬಂದಾಗ ತಮ್ಮನ್ನು ಸ್ವಾಮಿಗಳೇ ಎಂದು ಸಂಬೋಧಿಸಿದೆ. ಅನಂತರ ಕಾಲಿಗೆ ನಮಸ್ಕರಿಸುವುದು ನನ್ನ ಜಾಯಮಾನವಲ್ಲ ಎಂದೆ, ಆದರೆ ತಮ್ಮನ್ನು ಹತ್ತಿರದಿಂದ ನೋಡಿದ ಮೇಲೆ, ಮಾತನಾಡಿದ ಮೇಲೆ ತಮಗೆ ನಮಸ್ಕರಿಸದಿದ್ದರೆ ಅದೊಂದು ಅಪರಾಧ ಎಂದು ಬಲವಾಗಿ ಅನಿಸಿಬಿಟ್ಟಿತು. ಆದುದರಿಂದ ನಮಸ್ಕರಿಸಿದೆ ಬುದ್ಧಿ, ನೀವು ನನ್ನ ಕಣ್ಣು ತೆರೆಸಿದಿರಿ. ಭಗವಂತನೆಂದರೆ ಎಲ್ಲೋ ಕುಳಿತು ನಮ್ಮನ್ನೆಲ್ಲ ನಿಯಂತ್ರಿಸುವವನು ಎಂಬ ಜನರ ಮಾತುಗಳನ್ನು ಕೇಳಿ, ಓದಿ, ತರ್ಕಿಸಿ, ಅದನ್ನು ವಿರೋಧಿಸುತ್ತಿದ್ದೆ. ಆದರೆ ನಮ್ಮೆದುರೇ ದೇವರು ಇದ್ದಾನೆಂಬುದನ್ನು, ಈಗ ಅರಿತೆ. ಭಗವಂತ ನಮ್ಮ ನಡುವಿನ ಜನರ ಹೃದಯದಲ್ಲೇ ಇರುತ್ತಾರೆ ಎಂದು ತಿಳಿಯಿತು ಎಂದು ಮತ್ತೊಮ್ಮೆ ಶ್ರೀಗಳ ಕಾಲಿಗೆರಗಿದರು. ನಾಸ್ತಿಕನಾಗಿದ್ದ ನಮ್ಮನ್ನು ಆಸ್ತಿಕನನ್ನಾಗಿಸಿದಿರಿ ಎಂದು ಗದ್ಗದಿತರಾದರು". ಆ ಬಸವಣ್ಣನವರೇ ಮುಂದೆ ಸನ್ಯಾಸ ದೀಕ್ಷೆ ಸ್ವೀಕರಿಸಿ, ಶ್ರೀ ಕುಮಾರ ನಿಜಗುಣರಾದುದು ಮತ್ತೊಂದು ಚೋದ್ಯ. □



ಹೇಮ ನಿನ್ನದಲ್ಲ

ಹಕ್ಕಿಗಳು ಚಿಲಿಪಿಲಿಗುಟ್ಟಲು ಆರಂಭಿಸುವ ಮೊದಲೇ ಪೂಜೆ ಪೂರೈಸಿ, ಸೂರ್ಯರಶ್ಮಿ ಗಿಡಮರಗಳ ಮೇಲೆ ಬಿದ್ದು ಹೊಂಬಣ್ಣದಿಂದ ಹೊಳೆಯುವ ಹೊತ್ತಿಗೆ, ಹೊಳೆಯುವ ಅದೇ ಬಣ್ಣದ ಕಾವಿಯಲ್ಲಿ, ಪ್ರಸಾದ ಸ್ವೀಕರಿಸಿ ನಿತ್ಯದಂತೆ ಶ್ರೀಮಠದ ಕಾಗದಪತ್ರಗಳ ಕಡತವನ್ನು ಪರಿಶೀಲಿಸುವ ಕಾರ್ಯದಲ್ಲಿ ತೊಡಗಿದ್ದರು ಪೂಜ್ಯ ರಾಜೇಂದ್ರ ಶ್ರೀಗಳು. ಅರಮನೆಯ ಬಳಿಯಿರುವ ಮೈಸೂರಿನ ಶಾಖಾ ಮಠದ (ಇಂದಿನ ಜೆಎಸ್ಎಸ್ ಮಹಾವಿದ್ಯಾಪೀಠ) ಸುತ್ತ ವಿರಳವಾಗಿ ಓಡಾಡುವ ವಾಹನಗಳ ಶಬ್ದ ಕಿವಿಗೆ ಬಿದ್ದು ಏಕಾಗ್ರತೆಯು ಅವರ ಕೆಲಸಕ್ಕೆ ಅಡ್ಡಿಯಾಗುತ್ತಿತ್ತು. ಅಷ್ಟರಲ್ಲಿ ಶ್ರೀಮಠದ ಮುಖ್ಯ ದ್ವಾರದ ಪೌಳಿಗೋಡೆಗೆ ಕಾವಲಾಗಿದ್ದ ದೊಡ್ಡ ಕಬ್ಬಿಣದ ಗೇಟ್ ಅನ್ನು ಯಾರೋ ತಳ್ಳುತ್ತಿದ್ದರು. ಗೇಟಿನಲ್ಲಿದ್ದ ಕಾವಲುಗಾರನಿಗೆ, ತೀರಾ ಹಳೆಯದಾಗಿದ್ದರಿಂದ ಗೇಟನ್ನು ತೆರೆಯಲು ಸ್ವಲ್ಪ ಹೆಚ್ಚೇ ಶ್ರಮ ಆಗುತ್ತಿತ್ತು. ಆಗ ಕಿರ್ ಎಂದು ಶಬ್ದ ಮಾಡುತ್ತಾ ಆ ಬಾಗಿಲು ತೆರೆದುಕೊಳ್ಳುತ್ತಿತ್ತು. ಹಾಗೆ ತೆಗೆದ ಗೇಟಿನ ಕಡೆ ತಿರುಗಿದ ಶ್ರೀಗಳು ಆ ವ್ಯಕ್ತಿಗಳನ್ನು ನೋಡಿ ಮನಸ್ಸಿನಲ್ಲಿ ಕಸಿವಿಸಿಗೊಂಡರು. ನೋಡುತ್ತಿದ್ದ ಕಡತಗಳನ್ನೆಲ್ಲ ಜೋಡಿಸಿ ಬದಿಗಿಟ್ಟು ಬೆಳಗಿನ ಪೂಜೆಯಲ್ಲಿ ತಮ್ಮೊಡನೆ ಪಾಲ್ಗೊಂಡಿದ್ದ ಶ್ರೀಮಠದ ಆತ್ಮೀಯರಾಗಿದ್ದ ಕಸುವಿನಹಳ್ಳಿಯ ಶ್ರೀಗಳನ್ನು ಕರೆದರು. ಎದುರು ನಿಂತ ಕಸುವಿನಹಳ್ಳಿ ಶ್ರೀಗಳಿಗೆ ಪೂಜ್ಯ ರಾಜೇಂದ್ರರು, "ನೋಡಿ ಸ್ವಾಮಿಗಳೇ, ಇಂದು ಪಾರ್ವತಮ್ಮ ಬೆಳ್ಳಂಬೆಳಗೆಯೇ ಬಂದುಬಿಟ್ಟಿದ್ದಾರೆ. ಜೊತೆಗೆ ಯಜಮಾನರನ್ನೂ ಕರೆತಂದಿದ್ದಾರೆ. ಇಂದು ನೀವು ಹೇಗಾದರೂ ಮಾಡಿ ಅವರನ್ನು ಸಂಬಾಳಿಸಲೇಬೇಕು" ಎಂದು ಹೇಳಿ ತಮ್ಮ ವಿಶ್ರಾಂತಿ ಕೊಠಡಿಗೆ ತೆರಳಿದರು.

ಪಾರ್ವತಮ್ಮ ದಂಪತಿಗಳು ಶ್ರೀಮಠದ ಒಳಪ್ರವೇಶ ಮಾಡುವ ಮೊದಲೇ ಕಸುವಿನಹಳ್ಳಿ ಶ್ರೀಗಳು ಹೊರಗೆ ಬಂದು, "ಇದೇನಮ್ಮ ಪಾರ್ವತಮ್ಮ ಇಷ್ಟು ಬೇಗ ಮಠಕ್ಕೆ ಬಂದಿದ್ದೀರಿ. ಏನಾದರೂ ತುರ್ತು ಇತ್ತೆ" ಎಂದರು. ಅದಕ್ಕೆ ಪಾರ್ವತಮ್ಮನವರು "ಅಯ್ಯೋ ಬುದ್ಧೀ, ತುರ್ತೇನೂ ಇಲ್ಲ. ಆದರೆ ನಾವು ಪ್ರತಿ ಬಾರಿ ಬಂದಾಗಲೂ ಶ್ರೀಗಳು ಮಠದಲ್ಲಿ ಇಲ್ಲ, ಹೊರಗೆ ಹೋಗಿದ್ದಾರೆ, ಪೂಜೆಗೆ ಹೋಗಿದ್ದಾರೆ ಎಂದೆಲ್ಲ ಹೇಳುತ್ತಿದ್ದೀರಿ. ಇಂದು ಧನುರ್ಮಾಸ, ಸೋಮವಾರ ಬೇರೆ, ಬೆಳಗ್ಗೆ ಶ್ರೀಗಳು ಶ್ರೀಮಠದಲ್ಲಿಯೇ ಪೂಜೆ ಮಾಡುತ್ತಾರೆ ಎಂಬುದು ಎಲ್ಲರಿಗೂ ಗೊತ್ತಿರುವ



ವಿಚಾರ ತಾನೆ. ಹಾಗಾಗಿ ಬುದ್ಧಿಯವರನ್ನು ಕಾಣಲು ಬಂದಿದ್ದೇವೆ. ಈವತ್ತು ಅವರನ್ನು ಕಂಡೇ ನಾವು ತೆರಳುವುದು" ಎಂದರು. "ಅಯ್ಯೋ ಅಷ್ಟೇ ತಾನೇ, ತಮ್ಮದು ಸ್ನಾನ ಪೂಜೆ ಆಗಿದೆಯೇ ಹೇಳಿ" ಎಂದರು ಕಸುವಿನಹಳ್ಳಿ ಶ್ರೀಗಳು. ಪಾರ್ವತಮ್ಮನವರು "ಅಲ್ಲ ಬುದ್ಧಿ, ಧನುರ್ಮಾಸ ಅಲ್ಲವೆ, ನಾವು ಬೆಳಗ್ಗೆಯೇ ಸ್ನಾನ ಪೂಜೆ ಮಾಡಿದ್ದೇವೆ" ಎಂದರು. "ಹಾಗಿದ್ದರೆ ಬನ್ನಿ, ಪ್ರಸಾದ ಮಾಡಿ ಮೊದಲು" ಎಂದರು. "ಪ್ರಸಾದ ಗಿಸಾದ ಏನೂ ಬೇಡಿ, ಮೊದಲು ಬುದ್ಧಿಯವರನ್ನು ನೋಡಬೇಕು" ಎಂದರು ಪಾರ್ವತಮ್ಮ. "ಅಯ್ಯೋ ಈಗ ತಾನೇ ಅವರು ಹೊರಗೆ ಹೋದರಲ್ಲ" ಎಂದರು ಶ್ರೀಗಳು. "ಅಲ್ಲ, ಇಷ್ಟು ಬೇಗ ಎಲ್ಲಿಗೆ ಹೋದರು! ಕಾರು ಬೇರೆ ಇಲ್ಲಿಯೇ ನಿಂತಿದೆಯಲ್ಲ" ಎಂದಾಗ ಕಸುವಿನಹಳ್ಳಿಯ ಶ್ರೀಗಳು ತಬ್ಬಿಬ್ಬಾದರು. ಸುಧಾರಿಸಿಕೊಂಡು "ಯಾರೋ ಬಂದಿದ್ದರು, ಅವರ ಜೊತೆ ಈಗ ತಾನೇ ಹೋದರು" ಎಂದರು.

ಪಾರ್ವತಮ್ಮನವರಿಗೆ ಬೇಸರ ಮತ್ತು ಅಳು ಎರಡು ಒಟ್ಟೊಟ್ಟಿಗೆ ಉಮ್ಮಳಿಸಿ ಬಂದಿತು. ಅವರ ಯಜಮಾನರು ಸಮಾಧಾನಪಡಿಸಿದರೂ ಅವರಿಗೆ ಸಮಾಧಾನವಾಗಲಿಲ್ಲ. ಏನು ಮಾಡಬೇಕೆಂದು ತಿಳಿಯದೆ ಕಸುವಿನಹಳ್ಳಿ ಶ್ರೀಗಳು ತವಕಿಸತೊಡಗಿದರು. ಪಾರ್ವತಮ್ಮನವರನ್ನು ಹೇಗೆ ಸಮಾಧಾನ ಮಾಡಬೇಕೆಂದು ತಿಳಿಯದೆ ದಿಕ್ಕೆಟ್ಟರು. ಸಾವರಿಸಿಕೊಂಡು "ಪಾರ್ವತಮ್ಮ, ಹೀಗೆಲ್ಲ ಮಠದಲ್ಲಿ ಅಳಬಾರದು. ನೀವೇ ಹೀಗೆ ಅತ್ತರೆ ಹೇಗೆ? ನೀವು ಮೊದಲು ಕುಳಿತುಕೊಳ್ಳಿ. ಸಮಾಧಾನ ಮಾಡಿಕೊಳ್ಳಿ" ಎಂದರೂ, ಒಂದೇಸಮನೆ ಅವರ ಕಂಬನಿ ಧಾರಾಕಾರವಾಗಿ ಹರಿಯುತಿತ್ತು. ಪಾರ್ವತಮ್ಮನವರು ಯಜಮಾನರು ಮತ್ತೆ ಮತ್ತೆ ಸಮಾಧಾನಿಸಿದರೂ ಪಾರ್ವತಮ್ಮನವರ ನೋವು ಕಡಿಮೆಯಾಗಲಿಲ್ಲ. ಕಸುವಿನಹಳ್ಳಿ ಶ್ರೀಗಳಿಗೆ ದಿಕ್ಕೇ ತೋಚದೆ, ಪಾಪಪ್ರಜ್ಞೆಯಲ್ಲಿ ಬಳಲಿದವರಂತೆ ನಿಂತರು. ಪಾರ್ವತಮ್ಮನವರು "ಅಲ್ಲ ಬುದ್ಧಿ, ನೀವು ಗುರುಗಳು ಹೇಳಿದ್ದಾರೆ ಅಂತ ಎಷ್ಟು ಬಾರಿ ನನ್ನ ಒಡವೆಯನ್ನು ತೆಗೆದುಕೊಂಡು ಬಂದು ಗಿರವಿ ಇಟ್ಟಿಲ್ಲ. ನಾನು ಕೊಟ್ಟಿಲ್ಲ ಹೇಳಿ. ಆದರೆ ಈ ಬಾರಿ ನೀವು ಒಂದು ವರ್ಷವಾದರೂ ಒಡವೆಯನ್ನು ವಾಪಸ್ಸು ನೀಡಿಲ್ಲ. ನನ್ನ ಒಡವೆ ನನಗೆ ಬೇಕು. ದಯಮಾಡಿ ಕೊಡಿ ಬುದ್ಧೀ" ಎಂದಳು. ಪಾರ್ವತಮ್ಮನವರು ಪರಮಪೂಜ್ಯ ಜಗದ್ಗುರುಗಳ ಪೂರ್ವಾಶ್ರಮದ ತಂಗಿ. ಶ್ರೀಮಠ ನಡೆಸುತ್ತಿದ್ದ ವಿದ್ಯಾರ್ಥಿನಿಲಯ, ಶಾಲಾಕಾಲೇಜುಗಳ ಅಧ್ಯಾಪಕರಿಗೆ ಸಕಾಲದಲ್ಲಿ ಸಂಬಳ ಕೊಡಲು ತೊಂದರೆಯಾದ ಸಂದರ್ಭದಲ್ಲಿ ಕಸುವಿನಹಳ್ಳಿಯ ಶ್ರೀಗಳನ್ನು ಕಳುಹಿಸಿ ಪಾರ್ವತಮ್ಮನವರ ಒಡವೆಗಳನ್ನು ತರಿಸಿ ಗಿರವಿ ಇಟ್ಟು ಬಂದ



ಹಣದಿಂದ ಸಮಸ್ಯೆಯನ್ನು ಜಗದ್ಗುರುಗಳು ಪರಿಹರಿಸುತ್ತಿದ್ದರು. ಅನುಕೂಲವಾದಾಗ ಒಡವೆಗಳನ್ನು ಬಿಡಿಸಿ, ಕೊಟ್ಟು ಪಾರ್ವತಮ್ಮನವರಿಗೆ ಕಸುವಿನಹಳ್ಳಿ ಶ್ರೀಗಳವರ ಮೂಲಕವೇ ತೆಗೆದುಕೊಂಡು ತಲುಪಿಸಲು ವ್ಯವಸ್ಥೆ ಮಾಡುತ್ತಿದ್ದರು. ಎಲ್ಲವೂ ಅನುಕೂಲವಾಗಿ ನಡೆದುಕೊಂಡು ಬರುತ್ತಿತ್ತು. ಆದರೆ ಈ ಬಾರಿ ತಂದು ಗಿರವಿ ಇಟ್ಟ ಒಡವೆಯನ್ನು ಬಿಡಿಸಿಕೊಳ್ಳಲು ಆಗದೆ ವರ್ಷ ದಾಟಿದ್ದರಿಂದ ಪಾರ್ವತಮ್ಮನವರು ಶ್ರೀಮಠಕ್ಕೆ ಎಡತಾಕಲಾರಂಭಿಸಿದರು. ಹಾಗೇ ಅವರು ಬಂದಾಗಲೆಲ್ಲ ಜಗದ್ಗುರುಗಳು ಪಾರ್ವತಮ್ಮನವರನ್ನು ನೇರವಾಗಿ ಭೇಟಿ ಮಾಡದೆ, ಯಾರ ಮೂಲಕವಾದರೂ ಸಾಗಹಾಕುತ್ತಿದ್ದರು. ಆದರೆ ಪಾರ್ವತಮ್ಮನವರ ಸಹನೆ ಮಿತಿ ಮೀರಿತ್ತು. ಜಗದ್ಗುರುಗಳು ಇಂದು ಸಿಕ್ಕೇ ಸಿಕ್ಕುತ್ತಾರೆ ಎಂಬ ಭರವಸೆಯಿಂದ ಬಂದಿದ್ದ ಆ ದಂಪತಿಗಳನ್ನು ಹೇಗೆ ಎದುರಿಸಬೇಕೆಂದು ಕಸುವಿನಹಳ್ಳಿ ಶ್ರೀಗಳಿಗೆ ಹೊಳೆಯಲಿಲ್ಲ.

ಇಷ್ಟು ಸಂಭಾಷಣೆ ನಡೆಯುವ ಹೊತ್ತಿಗೆ ಶ್ರೀಮಠದ ಒಳಗಡೆಯಿಂದ ಕ್ಯಾತನಹಳ್ಳಿ ಶಿವಪ್ರಭುಸ್ವಾಮಿಗಳು ಹೊರಬಂದರು. ಅವರು ಕಾಲಿಗೆರಗಿದ ಪಾರ್ವತಮ್ಮ ದಂಪತಿಗಳನ್ನು ನೋಡಿದರು. ಅವರಿಗೆ ಪಾರ್ವತಮ್ಮನವರ ದುಃಖದ ಕಾರಣ ತಿಳಿದಿತ್ತು. ಕಸುವಿನಹಳ್ಳಿಯ ಶ್ರೀಗಳ ಮುಖವನ್ನು ನೋಡಿ ಮಗದೊಮ್ಮೆ ಪಾರ್ವತಮ್ಮ ದಂಪತಿಗಳ ಮುಖವನ್ನು ನೋಡಿದರು. "ಯಾಕೆ ಅಳ್ತಾ ಇದ್ದೀಯ ಪಾರ್ವತಮ್ಮ, ಏನಾಗಿದೆ ನಿನಗೆ" ಎಂದರು. ಶಿವಪ್ರಭುಸ್ವಾಮಿಗಳ ಎದುರು ಯಾರೂ ಗಟ್ಟಿಯಾಗಿ ಮಾತನಾಡುತ್ತಿರಲಿಲ್ಲ. ಅವರು ತುಂಬ ಕಟುವಾಗಿ ಮಾತನಾಡುತ್ತಿದ್ದರೆಂಬ ಪ್ರತೀತಿಯಿತ್ತು. ಆದರೆ ಆ ಕಟುನುಡಿಯಲ್ಲಿ ಪ್ರಖರ ಸತ್ಯ ಮಾತ್ರವಿರುತ್ತಿತ್ತು ಅಥವಾ ಅದರ ಕಾರಣದಿಂದಲೇ ಅವರ ಮಾತು ಕೊಂಚ ಕಟುವಾಗಿರುತ್ತಿತ್ತು. ಸುಧಾರಿಸಿಕೊಂಡ ಪಾರ್ವತಮ್ಮ, "ತಮಗೆ ಗೊತ್ತಿಲ್ಲವೆ ಬುದ್ಧಿ, ನನ್ನ ಒಡವೆ" ಎಂದಷ್ಟೆ ಹೇಳಿದರು. ವಿಷಯವನ್ನು ಮೊದಲೇ ತಿಳಿದಿದ್ದ ಶಿವಪ್ರಭುಸ್ವಾಮಿಗಳು ಕಸುವಿನಹಳ್ಳಿ ಶ್ರೀಗಳ ಕಡೆ ತಿರುಗಿ "ಅಲ್ಲ ಸ್ವಾಮಿಗಳೇ, ಒಡವೆಯನ್ನು ಬಿಡಿಸಿಕೊಡಲು ಆಗದೆ ಅವು ಹರಾಜಾದವು ಎಂದು ಹೇಳಲಿಲ್ಲವೆ" ಎಂದರು. ಕಸುವಿನಹಳ್ಳಿ ಶ್ರೀಗಳ ಮುಖ ವಿವರ್ಣವಾಯಿತು. ಪಾರ್ವತಮ್ಮನವರಿಗೆ ದಿಗ್ಭ್ರಮೆಯಾಯಿತು. ದಂಪತಿಗಳು ಪರಸ್ಪರ ಮುಖ ನೋಡಿಕೊಂಡು "ಅಯ್ಯೋ ನನ್ನ ಒಡವೆಯೆಲ್ಲ ಹೋಯ್ತು. ದೇವರೇ ನನ್ನ ಗತಿಯೇನು, ನಾನೇನು ಮಾಡಲಿ, ನಿಮ್ಮ ನಂಬಿ ನನ್ನ ಒಡವೆ ಕೊಟ್ಟು ಕೆಟ್ಟೆ" ಎಂದು ರೋದಿಸಲು ಆರಂಭಿಸಿದಳು. ಪಾರ್ವತಮ್ಮನವರ ಮಾತು ಕಸುವಿನಹಳ್ಳಿಯ ಸ್ವಾಮಿಗಳು ಮತ್ತು



ಶಿವಪ್ರಭುಸ್ವಾಮಿಗಳ ಮನಸ್ಸನ್ನು ಕಲಕಿತು. ಪಾರ್ವತಮ್ಮನವರನ್ನು ಹೇಗೆ ಸಮಾಧಾನ ಮಾಡಬೇಕೆಂಬುದು ತಿಳಿಯಲಿಲ್ಲ. ಆಗ ಪಾರ್ವತಮ್ಮನವರ ಯಜಮಾನರೇ ಪಾರ್ವತಮ್ಮನವರನ್ನು ಸಮಾಧಾನ ಮಾಡಲು ತೊಡಗಿದರು.

ಈ ಎಲ್ಲ ಮಾತುಗಳೂ ವಿಶ್ರಾಂತಿ ಕೊಠಡಿಯಲ್ಲಿದ್ದ ಶ್ರೀಗಳವರ ಕಿವಿಗೆ ಬೀಳುತ್ತಿದ್ದವು. ಶ್ರೀಗಳಿಗೂ ಮನಸ್ಸಿಗೆ ವ್ಯಾಕುಲವೆನಿಸಿತು. ಕಣ್ಣುಗಳು ಆರ್ದ್ರವಾದವು. ಹೊರಗೆ ಬಂದರು. ಜಗದ್ಗುರುಗಳನ್ನು ಕಂಡು ಪುನಃ ಅಳುತ್ತಲೇ ಪಾರ್ವತಮ್ಮನವರು, ಪರಮಪೂಜ್ಯರ ಕಾಲಿಗೆರಗಿದರು. "ಅಳಬೇಡ ಪಾರ್ವತಿ, ನಾನೇನು ನಿನ್ನ ಒಡವೆಯನ್ನು ಲಪಟಾಯಿಸಬೇಕು ಎಂದು ಗಿರವಿ ಇಡಲಿಲ್ಲ. ನೌಕರರಿಗೆ ಮೂರು ತಿಂಗಳು ಸಂಬಳ ಕೊಟ್ಟಿರಲಿಲ್ಲ. ಅವರು ಜೀವನ ನಡೆಸುವುದು ಹೇಗೆ ಎಂಬ ಯೋಚನೆ ಹುಟ್ಟಿತು. ಅದರಿಂದಾಗಿ ಹಣಕ್ಕೆ ನಿನ್ನ ಒಡವೆಗಳನ್ನು ಗಿರವಿ ಇಟ್ಟೆ. ಆದರೆ ಸಕಾಲದಲ್ಲಿ ಹಣ ಬರಲಿಲ್ಲ. ಬಂದ ಹಣವೂ ಹಾಸ್ಟಲಿನ ವಿದ್ಯಾರ್ಥಿಗಳ ಊಟಕ್ಕೆ ಸಾಲದಾಗುತ್ತಿತ್ತು. ಈ ಗಲಾಟೆಯಲ್ಲಿ ನಮಗೆ ಒಡವೆಯ ಬಗ್ಗೆ ಗಮನವೇ ಹೋಗಲಿಲ್ಲ. ಹರಾಜು ನೋಟೀಸನ್ನೂ ಗಮನಿಸಲಿಲ್ಲ" ಎಂದರು. "ಅಯ್ಯೋ, ನನ್ನ ಒಡವೆ ಹೋಯ್ತು, ಇನ್ನು ನನ್ನ ಗತಿಯೇನು" ಎಂದರು ಪಾರ್ವತಮ್ಮ. "ದುಃಖಪಡಬೇಡ ಪಾರ್ವತಿ, ನನಗೆ ಮಕ್ಕಳ ಗತಿಯ ಮುಂದೆ ಬೇರಾವ ಗತಿಯೂ ಮುಖ್ಯವೆಂದು ತೋರಲಿಲ್ಲ. ನನ್ನಿಂದ ತಪ್ಪಾಗಿದೆ, ಕ್ಷಮಿಸು" ಎಂದರು. ಜಗದ್ಗುರುಗಳು ಕ್ಷಮೆ ಕೇಳಿದ್ದು ಅಲ್ಲಿನ ಯಾರಿಗೂ ಇಷ್ಟವಾಗಲಿಲ್ಲ. ಪಾರ್ವತಮ್ಮನವರ ಅಳು ನಿಂತಿರಲಿಲ್ಲ. "ತಾವು ಕ್ಷಮೆ ಕೇಳಬಾರದು ಬುದ್ಧಿ, ಅದರ ಪಾಪ ನನಗೆ ಸುತ್ತಿಕೊಳ್ಳುತ್ತದೆ" ಎಂದು ಕಾಲಿಗೆರಗಿದಳು. ಆಗ ಕಸುವಿನಹಳ್ಳಿ ಶ್ರೀಗಳು "ಪಾರ್ವತಮ್ಮ, ನಿಮ್ಮ ಒಡವೆಗಳು ಒಂದು ಒಳ್ಳೆಯ ಉದ್ದೇಶಕ್ಕೆ ಬಳಕೆಯಾಗಿವೆ ಎಂಬ ವಿಚಾರವನ್ನು ಅರ್ಥಮಾಡಿಕೊಳ್ಳಿ. ಹಸಿದ ಮಕ್ಕಳ ಹೊಟ್ಟೆ ತುಂಬಿಸುವುದರ ಮುಂದೆ ನಿಮ್ಮ ಆಭರಣ ಏನೂ ಅಲ್ಲ" ಎಂದರು. ಪಾರ್ವತಮ್ಮನವರ ಯಜಮಾನರು ಅಷ್ಟರಲ್ಲಿ ವಿದ್ಯಾರ್ಥಿಯೊಬ್ಬ ಓಡೋಡುತ್ತಾ ಬಂದು ಜಗದ್ಗುರುಗಳ ಕಾಲಿಗೆರಗಿ "ಬುದ್ಧಿ ನಾನು ಈ ಸಾರಿ ಫಸ್ಟ್ ಕ್ಲಾಸ್‌ನಲ್ಲಿ ಪಾಸಾದೆ" ಎಂದು ಸಂಭ್ರಮದಿಂದ ಹೇಳಿದನು. ಆತನನ್ನು ತೋರಿಸಿ ಜಗದ್ಗುರುಗಳು, "ನೋಡು ಪಾರ್ವತಮ್ಮ. ಇದು ನಿನ್ನ ನಿಜವಾದ ಒಡವೆ. ಇದು ಎಂದೂ ಕೆಡದ ಆಭರಣ" ಎಂದು ಸಮಾಧಾನ ಹೇಳಿದರು.



ಆಶಯ

ಅಂಗಳದ ತುಂಬ ಹಾಸುಚಪ್ಪರ. ಚಪ್ಪರವೆಂದರೆ ಸಾಧಾರಣ ನೆರಳು ಬೀಳುವಷ್ಟು ಗರಿಗಳ ಹೊದಿಕೆ. ಕೆಳಗೆ ನಿಂತವರ, ಕುಳಿತವರ ತಲೆಯ ಮೇಲಷ್ಟು ನೆರಳು. ಅದು ಒಂದು ರೀತಿಯಲ್ಲಿ ನೆರಳೂ ಹೌದು, ಬಿಸಿಲೂ ಹೌದು. ನೆರಳುಬಿಸಿಲುಗಳ ಸಂಗಮವೆಂದರೂ ನಡೆಯುತ್ತದೆ. ಸುತ್ತೂರು ಶ್ರೀಮಠದ ಅಂಗಳದಲ್ಲಿ ಆದಿ ಜಗದ್ಗುರು ಶ್ರೀ ಶಿವರಾತ್ರಿ ಶಿವಯೋಗಿಗಳವರ ಆರಾಧನಾ ಮಹೋತ್ಸವ ನಡೆಯುತ್ತಿದೆ. ಸುತ್ತಮುತ್ತಲಿನ ಹತ್ತೆಂಟು ಹಳ್ಳಿಯ ಜನರು ಬಂದಿದ್ದಾರೆ. ಅದು ಅರವತ್ತರ ದಶಕ. ಆ ಕಾಲಕ್ಕೆ ಆರಾಧನೆಗೆ ಭಕ್ತಿಯಿಂದ ಬರುವಷ್ಟೇ ಜನರು ಆರಾಧನೆಯ ಅನ್ನಸಂತರ್ಪಣೆಯ ಆಕರ್ಷಣೆಗಾಗಿಯೂ ಬರುತ್ತಿದ್ದರು. ಅನ್ನವೆಂದರೆ ಅದೊಂದು ಅಮೃತ ದಿವ್ಯ ಪರಮಾನ್ನ. ಮದುವೆ, ಆರಾಧನೆ ಹೀಗೆ ವಿಶೇಷ ಸಂದರ್ಭಗಳಲ್ಲಷ್ಟೇ ಜನರು ಅನ್ನವನ್ನು ನೋಡಬಹುದಾಗಿದ್ದ ದಿನಗಳವು. ನಿತ್ಯವೂ ಅನ್ನ ಊಟ ಮಾಡುತ್ತಿದ್ದುದು ಶ್ರೀಮಂತರ ಮನೆಗಳಲ್ಲಿ ಮಾತ್ರ. ಆ ಕಾಲಕ್ಕೆ ಶ್ರೀಮಂತಿಕೆ ಇದ್ದದ್ದೂ ಕೂಡ ಕೆಲವರಿಗಷ್ಟೆ.

ಆರಾಧನೆಯ ದಿನದ ಆ ವಿಶೇಷ ಕೈಂಕರ್ಯಕ್ಕೆ 'ಅನ್ನಸಂತರ್ಪಣೆ' ಎಂದು ಯಾರು ಹೆಸರಿಟ್ಟರೋ ತಿಳಿಯದು. ಸಂತರ್ಪಣೆ ಎನ್ನುವುದಕ್ಕೆ ಇಂಗ್ಲಿಷ್‌ನಲ್ಲಿ ಸ್ಯಾಟಿಸ್‌ಫೈಯಿಂಗ್, ಗ್ರ್ಯಾಟಿಫೈಯಿಂಗ್ ಎಂಬ ಅರ್ಥವಿದೆ. ಇದನ್ನು ಕನ್ನಡದಲ್ಲಿ 'ತೃಪ್ತಿ' ಎಂದು ಕರೆಯಬಹುದು. ಹಸಿದವರ ಹಸಿವನ್ನು ನೀಗಿಸುವುದು, ಹೊಟ್ಟೆ ತುಂಬಿದ ವ್ಯಕ್ತಿ ಸಂತೃಪ್ತಿಗೊಳ್ಳುವುದು, ಇಂಥ ಮಹತ್ವದ ಆಶಯವನ್ನು ಈ ಪ್ರಕ್ರಿಯೆ ಹೊಂದಿದೆ. ಶ್ರೀಮಠದ ಮುಂದೆ ಹಾಕಿದ್ದ ಚಪ್ಪರದ ಕೆಳಗೆ ಸಾಲುಗಟ್ಟಿದ್ದ ಭಕ್ತಸ್ತೋಮ ನೆಲದ ಮೇಲೆ ಚಕ್ಕಳಮಕ್ಕಳ ಹಾಕಿ ಕುಳಿತಿತ್ತು. ಪ್ರಸಾದ ಸ್ವೀಕರಿಸಿ ಎದ್ದವರು ಕುಳಿತುಕೊಳ್ಳುವವರ ನಡುವೆ ಒಂದು ರೀತಿಯ ಪೈಪೋಟಿಯೇ ಏರ್ಪಟ್ಟು, ನೆಲದಿಂದ ದೂಳು ಮೇಲೇಳುತ್ತಿದ್ದರೂ ಅದನ್ನು ಲೆಕ್ಕಿಸದೆ 'ಕುಳಿತುಕೊಳ್ಳಲು ಒಂದಿಷ್ಟು ಜಾಗವಾದರೆ ಸಾಕು' ಎನ್ನುವಂತಿತ್ತು ಅವರ ನಡವಳಿಕೆ. ಆ ಗಲಾಟೆಯಲ್ಲಿ ಜಯಿಸಿ ಪುಟ್ಟಮಾದಮ್ಮ ನವರು ಮತ್ತು ಅವರ ಮೊಮ್ಮಗ ಆರು ವರ್ಷ ವಯಸ್ಸಿನ ದೇವಪ್ಪ ಜಾಗ ಹಿಡಿದುಕೊಳ್ಳುವಲ್ಲಿ ಸಫಲರಾಗಿದ್ದರು.

ಪ್ರಸಾದಕ್ಕೆ ಕುಳಿತುಕೊಳ್ಳಲು ಜಾಗ ಸಿಕ್ಕಿದ ಮೇಲೆ ಊಟದ ಎಲೆ ಯಾವ ದಿಕ್ಕಿನಿಂದ ಬರುತ್ತದೆ ಎಂದು ಬಿಟ್ಟ ಕಣ್ಣು ಬಿಟ್ಟಂತೆ ನೋಡುತ್ತಿದ್ದ ದೇವಪ್ಪ. ಮುತ್ತುಗದ ಎಲೆಯಿಂದ ತಯಾರಿಸಿದ ಊಟದೆಲೆಗೆ ಕೈಚಾಚಿದ ಅವನು ಅದು ತೂತಾಗಿದೆ



ಎಂದು ತಿಳಿದೂ ಮತ್ತೊಂದು ಎಲೆಯನ್ನು ಕೇಳಲಿಲ್ಲ. ಕೇಳಿದರೂ ಕೊಡದೆ ಇದ್ದಂಥ ದಿನಗಳವು. ನೆಲದ ಮೇಲೂ ಆ ಎಲೆಯನ್ನು ಇಡದೆ, ಇಟ್ಟರೆ ಯಾರೋ ಕಿತ್ತುಕೊಂಡುಬಿಡಬಹುದೆಂಬ ಭಯದಿಂದ, ಹಾಗೇ ಕೈಯಲ್ಲಿ ಹಿಡಿದುಕೊಂಡಿದ್ದನು. ಎಲೆಯ ಮೇಲೆ ನೀರು ಚಿಮುಕಿಸುವ ಆಟವಾಡುತ್ತಿದ್ದ. ಎಲೆಯನ್ನು ಕೈಯಲ್ಲೇ ಹಿಡಿದು ಅದನ್ನು ತೊಳೆದುಕೊಳ್ಳುವ ತೋರಿಕೆ ಮಾಡಿದ. ನೀರು ಹಾಕಿದ ಮೇಲೆ ಪಂಕ್ತಿಯ ಬಲಭಾಗದಿಂದ ಎಲೆಯ ಮೇಲೆ ಪಾಯಸ ಬಡಿಸಿದರು; ಅದನ್ನು ನೆಕ್ಕಲು ಹೋಗಿ ಬೆರಳು ಸುಟ್ಟುಕೊಂಡ. ತಕ್ಷಣವೇ ಆ ಬೆರಳನ್ನು ಬಾಯಿಯಲ್ಲಿಟ್ಟುಕೊಂಡ. ಅಕ್ಕಪಕ್ಕದವರು, ಎದುರುಬದರಿನವರು ಆರಾಮವಾಗಿ ಪಾಯಸ ನೆಕ್ಕುತ್ತಿರುವುದನ್ನು ನೋಡಿ, ನನಗೆ ಮಾತ್ರ ಬಿಸಿ ಪಾಯಸ ಬಡಿಸಿ ಅವರಿಗೆ ತಣ್ಣಗಿನ ಪಾಯಸ ಬಡಿಸಿದ್ದಾರೇನೋ ಎಂದುಕೊಂಡ. ಅವರಿಗೆ ಬಡಿಸಿದ್ದದ್ದೂ ಅದೇ ಪಾಯಸ. ಆದರೆ ಎಳೆಯ ಬೆರಳು ಬಿಸಿಯನ್ನು ತಾಳಲಾರದೆಹೋಗಿತ್ತು, ಅಷ್ಟೆ. ಪಾಯಸ ಆರಿದ ಬಳಿಕ ಅದನ್ನು ನೆಕ್ಕಬೇಕೆನಿಸುವಷ್ಟರಲ್ಲೇ ಅನ್ನ ಬಡಿಸಲು ಶುರುವಾಯಿತು. ದೇವಪ್ಪನ ಸರದಿ ಬಂದಾಗ ಆತನ ಎಲೆಯ ಮೇಲಿನ ಇನ್ನೂ ಪಾಯಸ ಹಾಗೆಯೇ ಇತ್ತು. ಅವನ ಅಜ್ಜಿ ದೇವಪ್ಪನ ಎಲೆಗೆ ಪಾಯಸದ ಮೇಲೆಯೇ ಅನ್ನ ಹಾಕುವಂತೆ ಹೇಳಿದಳು. ಅನ್ನದ ಸರದಿ ಬಂದಾಗ ಬಿಟ್ಟುಬಿಟ್ಟರೆ, ಆಗ ತಪ್ಪಿಹೋದರೆ ಮತ್ತೆ ಬರುವುದಿಲ್ಲವೆಂಬ ಆತಂಕ. ಪಾಯಸದ ಮೇಲೆ ಅನ್ನ, ಅದರ ಮೇಲೆ ಸಾಂಬಾರು, ಹೀಗೆ ಸಿಹಿ–ಖಾರಗಳ ವಿಚಿತ್ರ ರಸಸಂಗಮವಾಗಿತ್ತು, ಅವನ ಎಲೆ. ಆದರೂ ಅದನ್ನು ನಿಧಾನವಾಗಿ ಸವಿಯುವ ಬಯಕೆ ದೇವಪ್ಪನದು. ಪಂಕ್ತಿಯಲ್ಲಿ ನಿಧಾನಕ್ಕೆ ಅವಕಾಶವಿರಲಿಲ್ಲ. ಪಂಕ್ತಿಯಲ್ಲಿರುವವರು ಬೇಗಬೇಗನೆ ಊಟ ಮಾಡಿಕೊಳ್ಳಬೇಕು. ಪಂಕ್ತಿಯ ಎಲೆಯನ್ನು ಒಮ್ಮೆ ಎತ್ತಲು ಆರಂಭಿಸಿದರೆಂದರೆ – ಪರೀಕ್ಷಾ ಸಮಯ ಮುಗಿದಾಗ ಕೊಠಡಿಯ ಮೇಲ್ವಿಚಾರಕರು ಇನ್ನೂ ಪರೀಕ್ಷೆ ಬರೆಯುತ್ತಿರುವ ವಿದ್ಯಾರ್ಥಿಯ ಕೈಯಿಂದ ಉತ್ತರಪತ್ರಿಕೆಯನ್ನು ಬಲವಂತವಾಗಿ ಕಸಿದುಕೊಳ್ಳುವಂತೆ – ಪಂಕ್ತಿಯಲ್ಲಿದ್ದವರ ಎಲೆಯನ್ನು ಕಸಿದುಕೊಳ್ಳಲಾಗುತ್ತಿತ್ತು.

ದೇವಪ್ಪ ಬಹಳ ಕಾಲದಿಂದ ಹಸಿದಿದ್ದವನಂತೆ, ಒಂದೇ ಸಮನೆ ಸುಡುವುದನ್ನೂ ಕಾಣದೆ ತಿನ್ನಲಾರಂಭಿಸಿದ. 'ತಿನ್ನು' ಎನ್ನುವ ಕ್ರಿಯಾಪದ ಅಷ್ಟೇನೂ ಉಚಿತವಲ್ಲದಿದ್ದರೂ ಆ ಕ್ರಿಯೆಯನ್ನು ಸಮರ್ಥವಾಗಿ ಸೂಚಿಸಲು ಇದಕ್ಕಿಂತ ಬೇರೆ ಪದ ತೋಚುತ್ತಿಲ್ಲ. ಆದರೆ ಹಸಿದ ಹೊಟ್ಟೆ, ತಿನ್ನುವ ಆಸೆ ಎರಡೂ ದೊಡ್ಡದಿದ್ದರೂ, ದೇವಪ್ಪನ ವಯಸ್ಸು ಸಣ್ಣದಿತ್ತು. ಆದುದರಿಂದ ಆತ ಎಷ್ಟೇ ಪ್ರಯತ್ನಪಟ್ಟರೂ ಪಂಕ್ತಿಯಲ್ಲಿ ಎಲ್ಲರ ಜೊತೆಜೊತೆಗೆ



ಊಟ ಮಾಡಲು ಆಗಲಿಲ್ಲ. ಊಟದಿಂದ ಜನ ಒಮ್ಮೆಲೆ ಮೇಲೆದ್ದರು. ಹೀಗೆ ಒಮ್ಮೆಲೆ ಏಳುವುದು ಆಗಿನ ಸಂಪ್ರದಾಯ. ಪಂಕ್ತಿಯಲ್ಲಿ ಎಲ್ಲರ ಊಟವಾದ ಮೇಲೆಯೇ ಮೇಲೇಳುವುದು ಪದ್ಧತಿಯಾದರೂ, ಹಾಗೆ ಏಳುವಾಗ ಹಿರಿಯರನ್ನಷ್ಟೇ ಗಮನಿಸಲಾಗುತ್ತಿತ್ತು. ಎಲ್ಲರೂ ಎದ್ದಾಗ ಅಜ್ಜಿ ಪುಟ್ಟಮಾದಮ್ಮನೂ ಮೇಲೆದ್ದರು. ಒಂದು ಕಡೆಯಿಂದ ಎಂಜಲೆಲೆಗಳನ್ನು ಎತ್ತಲು ಶುರು ಮಾಡಿದರು. ಇದನ್ನು ಗಾಬರಿಯಿಂದ ಗಮನಿಸಿದ ದೇವಪ್ಪ ಜನ ತನ್ನ ಎಲೆಯನ್ನು ಎತ್ತಲು ಬಂದಾಗ ಚಿಟ್ಟನೆ ಚೀರಿ ಗಲಾಟೆ ಮಾಡತೊಡಗಿದ. ಮಗುವಿನ ಈ ಕಿರುಚಾಟ ಅವನ ಅಜ್ಜಿ ಪುಟ್ಟಮಾದಮ್ಮ ಹಾಗೂ ನೆರೆದಿದ್ದವರಿಗೆ ಗಾಬರಿ ಹುಟ್ಟಿಸಿತು. ಊಟದ ಎಲೆಯ ಮೇಲೆ ಬೋರಲಾಗಿ ಕುಳಿತು ಎಲೆ ಎತ್ತಲು ಬಿಡಲು ಅವಕಾಶ ಕೊಡದೆ ಒಂದೇಸಮನೆ ಚೀರತೊಡಗಿದ.

ಈ ಚೀರಾಟದಿಂದ ವಿಚಲಿತರಾದ ಜನರನ್ನು ನೋಡಿ, ಮಠದ ಅಂಗಳದಲ್ಲಿ ಕುಳಿತಿದ್ದ ರಾಜೇಂದ್ರ ಶ್ರೀಗಳು ಅಲ್ಲಿಗೆ ಧಾವಿಸಿ ಬಂದರು. ಏನಾಗಿದೆ ಎಂದು ವಿಚಾರಿಸಲು ಜನಸಂದಣಿಯನ್ನು ಸರಿಸಿ ನೋಡಿದರು. ಅಳುತ್ತಿದ್ದ ಮಗುವನ್ನು ಅಜ್ಜಿ ಸಮಾಧಾನಪಡಿಸುತ್ತಿದ್ದಳು. ಅಳು ನಿಲ್ಲುತ್ತಿರಲಿಲ್ಲ. ಆಗ ಶ್ರೀಗಳು ದೇವಪ್ಪನ ಹತ್ತಿರ ಬಂದು ಆತನ ತಲೆ ಸವರಿ, "ನೋಡಿಲ್ಲಿ, ಮಗು. ನಾನು ಬಂದಿದ್ದೇನೆ. ಅಳಬೇಡ, ಏನಾಯಿತು ಹೇಳು" ಎಂದರು. ಪುಟ್ಟ ಕೂಸು ದೇವಪ್ಪ "ನನ್ನ ಅನ್ನ ನನ್ನ ಅನ್ನ" ಎಂದಷ್ಟೇ ಬಿಕ್ಕಳಿಸುತ್ತ ತೊದಲಿತು. ಮಗುವಿನ ಮನಸ್ಸನ್ನರಿತ ರಾಜೇಂದ್ರ ಶ್ರೀಗಳು ಎಲೆ ಎತ್ತುತ್ತಿದ್ದವನಿಗೆ "ನೋಡು, ಈ ಮಗುವಿನ ಎಲೆ ಬಿಟ್ಟು ಮಿಕ್ಕದ್ದನ್ನು ಎತ್ತು" ಎಂದರು. ಅಡುಗೆಯವರನ್ನು ಕರೆದು ತಾವೇ ತಮ್ಮ ಕೈಯಿಂದ ಮಗುವಿಗೆ ಮತ್ತೆ ಅನ್ನ ಬಡಿಸಿದರು. ಅವನ ಊಟವಾಗುವವರೆಗೂ ಅಲ್ಲಿಯೇ ನಿಂತರು. ಶ್ರೀಗಳು ನಿಂತದ್ದರಿಂದ ಮಿಕ್ಕವರೂ ನಿಂತರು. ನಿಂತವರನ್ನು ತೆರಳಲು ಹೇಳಿ, ಊಟ ಮಾಡಿ ಮುಗಿಸಿದ ದೇವಪ್ಪನ ತಲೆ ನೇವರಿಸಿ "ಮಗು, ಹೊಟ್ಟೆ ತುಂಬಿತೆ?" ಎಂದರು ನಸುನಗುತ್ತ. ಆ ಪದದ ಅರ್ಥ ಪೂರ್ಣ ತಿಳಿಯದಿದ್ದರೂ ಮಗು ಸುಮ್ಮನೆ ತಲೆಯಾಡಿಸಿತು. ಆತನ ತಲೆ ನೇವರಿಸಿ 'ಒಳಿತಾಗಲಿ' ಎಂದು ಹರಸಿದರು ರಾಜೇಂದ್ರ ಶ್ರೀಗಳು. "ಶ್ರೀಗಳು ಹಾಗೇ ಹರಸಿದಂದಿನಿಂದ ಇಂದಿನವರೆವಿಗೂ ಒಂದು ದಿನವೂ ನಾನು ಹಸಿದವನಲ್ಲ. ಹಸಿವಾದಾಗ ಯಾರಿಂದಲೋ ಎಲ್ಲಿಂದಲೋ ಆಹಾರ ಒದಗಿಬರುತ್ತದೆ. ಅಂದಿನಿಂದ ಇಂದಿನವರೆಗೂ ನನ್ನ ಪಾಲಿಗೆ ಅನ್ನ ಅಕ್ಷಯವಾಗಿದೆ" ಎಂದು ಭಾವುಕರಾಗಿ ಸ್ಮರಿಸಿಕೊಳ್ಳುತ್ತಾರೆ ದೇವಪ್ಪನವರು. ಅನಂತರದಲ್ಲಿ ಅವರು ಶ್ರೀಗಳವರ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದು ಮತ್ತೊಂದು ವಿಶೇಷ.

□



ಸೈಕಲ್ ಬಾಡಿಗೆ!

ಕಚೇರಿಯ ಸಮಯಕ್ಕೆ ಸರಿಯಾಗಿ ರಾಮಾನುಜ ರಸ್ತೆಯಲ್ಲಿ ನಡೆದು ಬರುತ್ತಿದ್ದ ಬಸವಣ್ಣನವರಿಗೆ ಆ ದಿನದ ಶ್ರೀಮಠದ ಉಳಿದ ಕೆಲಸಗಳದ್ದೇ ಚಿಂತೆ. ಶ್ರೀಮಠದ ಪ್ರಾಕಾರಕ್ಕೆ ಕಾಲಿಟ್ಟರೂ ಅವರ ಮನಸ್ಸಿನ ತುಂಬ ಆ ಕೆಲಸಗಳದೇ ಯೋಚನೆ. ಪೂಜೆ, ಪ್ರಸಾದ ಮುಗಿಸಿ, ಕಚೇರಿಯ ಕೆಲ ಕಾಗದ ಪತ್ರಗಳನ್ನು ಗಮನಿಸುತ್ತಿದ್ದ ರಾಜೇಂದ್ರ ಶ್ರೀಗಳ ಕಾಲಿಗೆ ಎಂದಿನಂತೆ ನಮಿಸಿದರು, ಬಸವಣ್ಣನವರು. ಅವರ ಅನ್ಯಮನಸ್ಕತೆಯನ್ನು ಗಮನಿಸಿದ ರಾಜೇಂದ್ರ ಶ್ರೀಗಳು, "ಏನು ಬಸವಣ್ಣ, ಎಲ್ಲಿದೆ ಜ್ಞಾನ" ಎಂದರು. ಎಚ್ಚೆತ್ತ ಬಸವಣ್ಣನವರು "ಏನೂ ಇಲ್ಲ ಬುದ್ಧಿ, ಹಿಂದಿನ ವಾರ ಶ್ರೀಮಠದ ಯಾವ ಕೆಲಸವೂ ಸರಿಯಾಗಿ ಆಗಿಲ್ಲ. ಈ ವಾರವಾದರೂ ಅವೆಲ್ಲವನ್ನೂ ಹೇಗಾದರೂ ಮಾಡಿ ಮುಗಿಸಬೇಕು ಎಂದು ಯೋಚಿಸುತ್ತಿದ್ದೆ" ಎಂದರು. ಶ್ರೀಗಳು "ಆಯಿತು ಬಿಡೋ ದಡ್ಡ, ಯಾವ ಕಾರ್ಯ ಯಾವ ಕಾಲಕ್ಕೆ ಆಗಬೇಕು ಎಂದು ದೇವರು ನಿಶ್ಚಯಿಸಿರುತ್ತಾನೆ, ಆಗ ಆ ಕಾರ್ಯ ಆಗುತ್ತದೆ. ನಮ್ಮ ಪ್ರಯತ್ನ ಕೇವಲ ನೆಪ, ತಿಳ್ಕೋ" ಎಂದರು. ಬಸವಣ್ಣನವರು "ನಮ್ಮ ಪ್ರಯತ್ನವೂ ಮುಖ್ಯ ಅಲ್ಲವೆ? ಬುದ್ಧಿ" ಎಂದರು. ಹೌದೆಂದ ಶ್ರೀಗಳು ಬಸವಣ್ಣನವರು ಹೇಳಿದ ಕೆಲಸಗಳ ಪಟ್ಟಿಯನ್ನು ಕೇಳಿ, "ಆಯಿತು, ಇಷ್ಟೆಲ್ಲ ಕೆಲಸಗಳನ್ನು ನೀನು ನಡೆದುಕೊಂಡು ಮಾಡುತ್ತೇನೆ ಅಂದರೆ ಇನ್ನು ಒಂದು ವಾರವಾದರೂ ಆಗುವುದಿಲ್ಲ. ಒಂದು ಕೆಲಸ ಮಾಡು. ಸುಣ್ಣದಕೇರಿಯಲ್ಲಿ ಅಬ್ದುಲ್ಲನ ಬಳಿ ಒಂದು ಸೈಕಲ್ ಬಾಡಿಗೆಗೆ ತೆಗೆದುಕೊಂಡು ಹೋಗು. ಕಚೇರಿಯಿಂದ ಕಚೇರಿಗೆ ಅಲೆಯುವುದು ಇರುತ್ತೆ" ಎಂದರು.

ಆ ಕಾಲಕ್ಕೆ ಶ್ರೀಮಠದಲ್ಲಿ ಯಾವ ವಾಹನದ ವ್ಯವಸ್ಥೆಯೂ ಇರಲಿಲ್ಲ. ರಾಜೇಂದ್ರ ಮಹಾಸ್ವಾಮಿಗಳು ಅಥವಾ ಅವರ ಗುರುಗಳಾದ ಮಂತ್ರಮಹರ್ಷಿಗಳು ಎತ್ತಿನ ಕಮಾನುಗಾಡಿಯಲ್ಲಿ ಪ್ರಯಾಣಿಸುತ್ತಿದ್ದರು. ಒಂದು ಕಾರಿತ್ತಾದರೂ ಅದನ್ನು ವಿಶೇಷ ಸಂದರ್ಭದಲ್ಲಿ ಮಾತ್ರ ಬಳಸುತ್ತಿದ್ದರು. ಆ ಕಾಲಕ್ಕೆ ಸೀಮೆಯೆಣ್ಣೆಯಿಂದ ಮೊದಲುಗೊಂಡು ಡೀಸೆಲ್, ಪೆಟ್ರೋಲ್ ಎಲ್ಲವನ್ನೂ ಪಡಿತರದ ಮೂಲಕ ಪರ್ಮಿಟ್ಟಿನಲ್ಲಿ ಪಡೆಯಬೇಕಾಗಿತ್ತು. ಅರವತ್ತರ ದಶಕದಲ್ಲಿ ಮಧ್ಯಮ ವರ್ಗದ ಅತ್ಯಂತ ಶ್ರೀಮಂತ ವಾಹನವೆಂದರೆ ಸೈಕಲ್. ಸೈಕಲ್‌ಗೆ ಆ ಕಾಲದಲ್ಲಿ ಕಡ್ಡಾಯವಾಗಿ ಡೈನಮೋ ಇರಲೇಬೇಕು, ಬೆಲ್ ಕಡ್ಡಾಯ. ಇವು ಇಲ್ಲದಿದ್ದರೆ ದಂಡ ವಿಧಿಸಲಾಗುತ್ತಿತ್ತು. ಬಹಳ



ಜನರಿಗೆ ಸೈಕಲ್ ಖರೀದಿಸುವು ದೊಂದು ಅಸಾಮಾನ್ಯ ವಿಷಯವಾಗಿತ್ತು. ಹಾಗಾಗಿ ಬಾಡಿಗೆ ಸೈಕಲ್ ಬಳಸುತ್ತಿದ್ದರು. ಈಗ ಕಾರನ್ನು ಬಾಡಿಗೆಗೆ ಪಡೆಯುವಂತೆಯೇ ಆಗ ಸೈಕಲ್ಲನ್ನು ಬಾಡಿಗೆಗೆ ಪಡೆಯಲಾಗುತ್ತಿತ್ತು.

ಸೈಕಲ್‌ಗಳನ್ನು ಬಾಡಿಗೆಗೆ ನೀಡುವವನು ಸ್ವಲ್ಪ ಅನುಕೂಲಸ್ಥನಾಗಿರುತ್ತಿದ್ದ. ನೀವು ಗಮನಿಸಬೇಕು, ಈಗಿನ ವಾಹನಗಳಿಗೆ ಇರುವ ಹಾಗೆ ಸೈಕಲ್‌ಗಳಿಗೆ ನಂಬರ್ ಪ್ಲೇಟ್ ಇರುತ್ತಿರಲಿಲ್ಲ. ಯಾರೋ ಒಬ್ಬ ಬಾಡಿಗೆಗೆ ಪಡೆದು ಸೈಕಲ್ ಕದ್ದರೆ ಏನು ಮಾಡುವುದು ಎಂದರೆ, ಅದು ಸಾಧ್ಯವಿಲ್ಲದ ಮಾತು. ಯಾಕೆಂದರೆ ಪರಿಚಯವಿದ್ದವರಿಗೆ ಹೊರತು ಬೇರೆಯವರಿಗೆ ಸೈಕಲ್ ಬಾಡಿಗೆಗೆ ನೀಡುತ್ತಿರಲಿಲ್ಲ. ಆ ಕಾಲಕ್ಕೆ ಸೈಕಲ್ ಯಾರ ಬಳಿ ಇದ್ದರೂ ಪರವಾನಗಿ ಇರಲೇಬೇಕು. ಆ ಕಾಲಕ್ಕೆ ಗಂಟೆಗೆ 10 ಪೈಸೆ, ದಿನವೊಂದಕ್ಕೆ 5 ರೂಪಾಯಿ ಬಾಡಿಗೆ ಇರುತ್ತಿತ್ತು.

ಶ್ರೀಗಳವರ ಮಾತಿನಂತೆ ಬಸವಣ್ಣನವರು ಸುಣ್ಣದಕೇರಿ ಅಬ್ದುಲ್ಲನ ಬಳಿ ಸೈಕಲ್ ಬಾಡಿಗೆಗೆ ಪಡೆದು ಕೆಲಸಕ್ಕೆ ತೆರಳಿದರು. ಸಂಜೆ ಆರು ಗಂಟೆಯ ಸಮಯಕ್ಕೆ ಶ್ರೀಮಠಕ್ಕೆ ಹಿಂದಿರುಗಿ ಕಚೇರಿಯ ವಿಷಯವನ್ನೆಲ್ಲ ಶ್ರೀಗಳಲ್ಲಿ ನಿವೇದಿಸಿ "ಸೈಕಲ್ ವಾಪಸ್ಸು ನೀಡಿ ಬರುತ್ತೇನೆ" ಎಂದರು. ಅಷ್ಟರಲ್ಲಿ ಶ್ರೀಗಳು "ಬಸವಣ್ಣ, ನಾಳೆಯೂ ಏನಾದರೂ ಕಚೇರಿ ಕೆಲಸ ಇರಬೇಕಲ್ಲ" ಎಂದರು.

"ಇಲ್ಲ ಬುದ್ಧಿ, ಬಹುಮಟ್ಟಿಗೆ ಎಲ್ಲ ಕೆಲಸವೂ ನಿಮ್ಮ ಕೃಪೆಯಿಂದ ಈವತ್ತು ಮುಗಿದಿದೆ. ನಾಳೆ ಡಿಸಿ ಕಚೇರಿಯಲ್ಲಿ ಮಾತ್ರ ಕೆಲಸ, ನಡೆದುಕೊಂಡೇ ಹೋಗುತ್ತೇನೆ. ಸೈಕಲ್ ನಿಲ್ಲಿಸಿಕೊಂಡರೆ ಸುಮ್ಮನೆ ಬಾಡಿಗೆ ಕಟ್ಟಬೇಕು" ಎಂದರು. "ಏ ದಡ್ಡ, ಡಿಸಿ ಆಫೀಸ್ ಜೊತೆಗೆ ಬೇರೆ ಏನಾದರೂ ಕೆಲಸ ಇದ್ದರೆ ಅದನ್ನೂ ಮುಗಿಸು, ಈಗ ಸೈಕಲ್ ವಾಪಸ್ಸು ಕೊಟ್ಟು, ನಾಳೆ ಮತ್ತೆ ಸೈಕಲ್ ತರೋಕೆ ಹೋದರೆ ಸಮಯ ಹಾಳು. ಶ್ರೀಮಠದಲ್ಲೇ ಸೈಕಲ್ ಇರಲಿ, ಬಿಡು" ಎಂದರು. ಶ್ರೀಗಳ ಮಾತಿಗೆ ಪ್ರತಿ ಹೇಳಲಾರದೆ ಬಸವಣ್ಣನವರು ಮನೆಗೆ ತೆರಳಿದರು.

ಮಾರನೇ ದಿನ ಕೂಡ ಕಚೇರಿಯ ಕೆಲಸ ಎಲ್ಲ ಮುಗಿಸಿ ಬಂದು, ಶ್ರೀಗಳಿಗೆ ವರದಿ ಒಪ್ಪಿಸಿ ಸೈಕಲ್ ವಾಪಸ್ಸು ಬಿಡುವ ಮಾತನಾಡಿದಾಗ ಬಸವಣ್ಣನವರಿಗೆ, ಶ್ರೀಗಳು "ಲೇ, ನಿನ್ನೆ ಕೂಡ ಏನೂ ಕೆಲಸ ಇಲ್ಲ ಕೇವಲ, ಬರಿ ಡಿಸಿ ಆಫೀಸ್ ಕೆಲಸ ಎಂದೆ. ಈಗ ನೋಡು ಸೈಕಲ್ ಎಷ್ಟು ಉಪಯೋಗಕ್ಕೆ ಬಂತು. ಕೆಲಸ ಎಲ್ಲ ಮುಗಿಸಿ ಸಂಜೆಗೆ ಬಂದಿದ್ದೀಯಾ. ಸೈಕಲ್ ಶ್ರೀಮಠದಲ್ಲೇ ಇರಲಿ, ನಾಳೆ ಕೊಟ್ಟರೆ ಆಯಿತು" ಎಂದರು. ಇದೇ ರೀತಿ ಸೈಕಲ್ ಬಾಡಿಗೆಗೆ ಪಡೆದು ನಾಲ್ಕು ದಿನಗಳು ಕಳೆಯಿತು.



ಕಚೇರಿಯ ಯಾವ ಕೆಲಸವೂ ಇಲ್ಲದಿದ್ದರೂ ಸಹ ಸೈಕಲ್ ಶ್ರೀಮಠದಲ್ಲೇ ಉಳಿಯಿತು. ಬಸವಣ್ಣನವರು ಎಷ್ಟೇ ಹೇಳಿದರೂ ಶ್ರೀಗಳು ಯಾವುದಾದರೂ ಒಂದು ನೆಪ ಹೇಳಿ ಸೈಕಲ್ ಹಿಂದಿರುಗಿಸಲು ಬಿಡುತ್ತಿರಲಿಲ್ಲ. ಇದು ಬಸವಣ್ಣನವರಿಗೆ ಮಾತ್ರವಲ್ಲ, ಶ್ರೀಮಠದ ಮಿಕ್ಕವರಿಗೂ ಕುತೂಹಲ ಮೂಡಿಸುತ್ತಿತ್ತು. ಆದರೆ ಕಾರಣ ಯಾರಿಗೂ ತಿಳಿಯುತ್ತಿರಲಿಲ್ಲ. ಶ್ರೀಗಳವರನ್ನು ಪ್ರಶ್ನಿಸುವಂತೆಯೂ ಇರಲಿಲ್ಲ. ಕ್ಯಾತನಹಳ್ಳಿ ಶ್ರೀಗಳಿಗೆ ಬಹುಶಃ ಕಾರಣ ತಿಳಿದಿತ್ತು. ಆದರೆ ಅವರನ್ನು ಕೇಳುವ ಧೈರ್ಯ ಯಾರಿಗೂ ಇರಲಿಲ್ಲ.

ಐದು ದಿನ ಕಳೆದ ಮೇಲೆ ಶ್ರೀಗಳು "ಲೋ... ಬಸವಣ್ಣನನ್ನು ಕೂಗೋ" ಎಂದು ಶ್ರೀಮಠದ ಸೇವಕ ಶಿವರಾಮುವಿಗೆ ಹೇಳಿದರು. "ಅವರಿನ್ನೂ ಬಂದಿಲ್ಲ ಬುದ್ಧಿ, 10 ಗಂಟೆಗೆ ಬರಬಹುದು" ಎಂದರು. "ಶ್ರೀಗಳು ಹಾಗಿದ್ದರೆ ಒಂದು ಕೆಲಸ ಮಾಡು. ನೀನೇ ಸೈಕಲ್ ತೆಗೆದುಕೊಂಡು ಹೋಗಿ ಅಬ್ದುಲ್ಲನಿಗೆ 5 ರೂಪಾಯಿ ಬಾಡಿಗೆ ಕೊಟ್ಟು ಬಾ" ಎಂದು ಅವನ ಕೈಗೆ ಹಣ ಕೊಟ್ಟರು. ಶಿವರಾಮು ಸೈಕಲ್ ವಾಪಸ್ಸು ನೀಡಿ ಬಂದರು. ಕಚೇರಿಗೆ ಸಮಯಕ್ಕೆ ಸರಿಯಾಗಿ ಬಂದ ಬಸವಣ್ಣನವರಿಗೆ ವಿವರವೆಲ್ಲ ತಿಳಿದು, ಶ್ರೀಗಳ ಬಳಿ ಹೋಗಿ "ಅಲ್ಲ ಬುದ್ಧಿ, ಮೂರು ದಿನ ಏನೂ ಕೆಲಸವಿಲ್ಲದೆ ಸೈಕಲ್ ಶ್ರೀಮಠದಲ್ಲೇ ಇತ್ತು. ಸುಮ್ಮಸುಮ್ಮನೆ ಮೂರು ದಿನದ ಬಾಡಿಗೆ ವ್ಯರ್ಥವಾಯಿತಲ್ಲ" ಎಂದರು. ಅಲ್ಲೇ ಇದ್ದ ಕ್ಯಾತನಹಳ್ಳಿ ಶ್ರೀಗಳು "ಲೋ ಬಾಡಿಗೆ ಕೊಡೋದಕ್ಕೆ ದುಡ್ಡು ಇದ್ದರಲ್ಲವೆ, ಸೈಕಲ್ ವಾಪಸ್ಸು ನೀಡೋದು" ಎಂದರು.

ಈ ಯಾವ ಸಂಭಾಷಣೆಯ ಮೇಲೂ ಗಮನವಿಲ್ಲದೆ ನಿರುಮ್ಮಳರಾಗಿದ್ದ ಶ್ರೀಗಳನ್ನು ತದೇಕಚಿತ್ತದಿಂದ ನೋಡಿ, ಕಂಗಳು ತುಂಬಿಕೊಂಡ ಬಸವಣ್ಣನವರು ರಾಜೇಂದ್ರ ಶ್ರೀಗಳ ಪಾದಕ್ಕೆ ಬಿದ್ದು ಅಳತೊಡಗಿದರು. ಶ್ರೀಗಳು "ಏನೋ ಯಾಕೋ ಅಳ್ತೀಯ. ಈವೊತ್ತು ಮಠಕ್ಕೆ ಜೀಮಾರಳ್ಳಿ ಸಾಹುಕಾರರು ಬಂದಿದ್ದರು. 10 ರೂಪಾಯಿ ದಕ್ಷಿಣೆ ಹಾಕಿದರು. ಅದರಲ್ಲಿ 5 ರೂಪಾಯಿ ಬಾಡಿಗೆ ನೀಡಿದ್ದೇವೆ. ನಮಗೆ ಮೊದಲ ದಿನವೇ ಕೆಲಸವಿಲ್ಲವೆಂದು ಗೊತ್ತಿದ್ದರೂ ಬಾಡಿಗೆ ನೀಡಲು ಹಣವಿರಲಿಲ್ಲ" ಎಂದರು. "ಅಲ್ಲ ಬುದ್ಧಿ, ಹಣಕ್ಕೆ ಇಷ್ಟು ಕಷ್ಟಪಡುತ್ತಿದ್ದರೂ ಇಷ್ಟು ಜನ ವಿದ್ಯಾರ್ಥಿಗಳನ್ನು ಸಲಹುತ್ತಿದ್ದೀರಿ. ಇದೆಲ್ಲ ಬೇಕಾ, ಬುದ್ಧಿ" ಎಂದರು. "ಬಸವಣ್ಣ, ದೇವರು ನಮ್ಮನ್ನು ಹೀಗೆ ಸೇವೆ ಮಾಡಲೆಂದೇ ನಿಯಮಿಸಿದ್ದಾನಲ್ಲಪ್ಪ, ಅದನ್ನು ಮಾಡಬೇಕು. ನಾವು ಒಂದು ಸೈಕಲ್ ಇದ್ದ ಹಾಗೆ. ಇದು ಕೂಡ ಬಾಡಿಗೆ ಸೈಕಲ್ಲೇ. ದೇವರು ಇದರ ಕಾರ್ಯ ಮುಗಿದ ಮೇಲೆ ವಾಪಸ್ಸು ಪಡೀತಾನೆ ಬಿಡು" ಎಂದು ಹೇಳುತ್ತ ಶ್ರೀಮಠದೊಳಕ್ಕೆ ತೆರಳಿದರು. □



ಶುಲ್ಕ

ಶ್ರೀಗಳನ್ನು ಕಾಣಲು ಸರದಿಯಲ್ಲಿ ನಿಂತ ಅನೇಕರಲ್ಲಿ ಸ್ವಾಮಿ ಕೂಡ ಒಬ್ಬರು. ಐಟಿಐ ಕಾಲೇಜಿನಲ್ಲಿ ಪ್ರಥಮ ದರ್ಜೆ ಸಹಾಯಕರಾಗಿದ್ದ ಪ್ರಭುಸ್ವಾಮಿಯವರಿಗೆ ಶ್ರೀಮಠದಿಂದಲೇ ವೇತನ ಪಾವತಿಯಾಗುತ್ತಿತ್ತು. ಅವರಿನ್ನೂ ಸರ್ಕಾರಿ ವೇತನಕ್ಕೆ ಒಳಪಟ್ಟಿರಲಿಲ್ಲ. ಇವರಂತೆ ಶ್ರೀಮಠದ ಕಾಲೇಜಿನಲ್ಲಿ ನೂರಾರು ಜನ ವೇತನ ಪಡೆಯುತ್ತಿದ್ದರು. ಕೆಲವೊಮ್ಮೆ ಅಗತ್ಯಕ್ಕಿಂತಲೂ ಹೆಚ್ಚಿನ ಸಿಬ್ಬಂದಿ ಶಿಕ್ಷಣಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು. ರಾಜೇಂದ್ರ ಶ್ರೀಗಳಿಗೆ ತೀರ ಪರಿಚಯವಿದ್ದ ಒಬ್ಬ ಸದ್ಭಕ್ತರು "ನಮ್ಮ ಹುಡುಗನಿಗೆ ಒಂದು ಕೆಲಸ ಕೊಡಿ ಬುದ್ಧಿ" ಎಂದರೆ, ಸಹಜವಾಗಿ ಇಲ್ಲ ಎನ್ನದೆ ಶ್ರೀಗಳು ತಮ್ಮ ಬಳಿ ಇಟ್ಟುಕೊಂಡಿರುತ್ತಿದ್ದ ಸಣ್ಣ ಚೀಟಿಯೊಂದರಲ್ಲಿ ಅಭ್ಯರ್ಥಿಯ ಹೆಸರು, ಶಿಫಾರಸು ಮಾಡಿದವರ ಹೆಸರನ್ನು ನಮೂದಿಸಿ "ಈತನಿಗೆ ಕೆಲಸ ನೀಡುವುದು" ಎಂದು ಬರೆದು ಸಹಿ ಮಾಡಿ ಕಳುಹಿಸುತ್ತಿದ್ದರು. ಆ ಚೀಟಿ ಸಂಬಂಧಪಟ್ಟವರಿಗೆ ತಲುಪಿದ ಕೂಡಲೇ ಏನಾದರೂ ಒಂದು ಕೆಲಸ ದೊರಕುತ್ತಿತ್ತು.

ಹೀಗೆ ಅಗತ್ಯಕ್ಕಿಂತಲೂ ಹೆಚ್ಚು ಸಿಬ್ಬಂದಿ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು. ಸ್ವಾಮಿಯವರ ತಂದೆ ದೊಡ್ಡ ದೈವಭಕ್ತರು, ಶ್ರೀಮಠದ ಅಭಿಮಾನಿಗಳು, ಸದಾಚಾರ ಸಂಪನ್ನರು. ಆದ್ದರಿಂದ ಅವರಿಗೆ ಸುಲಭವಾಗಿ ಉದ್ಯೋಗ ದೊರೆತಿತ್ತು. ಆದರೆ ಶ್ರೀಮಠ ದಿಂದ ದೊರಕುತ್ತಿದ್ದ ಸಂಬಳ ಜೀವನ ನಿರ್ವಹಣೆಗೆ ಸಾಲುತ್ತಿರಲಿಲ್ಲ. ಈ ಕಾರಣದಿಂದ ಅವರು ಅನೇಕ ಬಾರಿ ಪರಿತಪಿಸುತ್ತಿದ್ದರು. ಇಂತಹವರಿಗೆ ಇದ್ದ ಒಂದೇ ದಾರಿಯೆಂದರೆ ಶ್ರೀಗಳನ್ನು ಕಂಡು ತಮ್ಮ ಕಷ್ಟಗಳನ್ನು ಹೇಳಿಕೊಳ್ಳುವುದು. ಶ್ರೀಗಳ ಮುಂದೆ ನಿಂತು ಯಾರೇ ಕಣ್ಣೀರಿಟ್ಟರೂ ಅವರು ಸತ್ಯಾಸತ್ಯತೆಯನ್ನು ಗಮನಿಸುತ್ತಿರಲಿಲ್ಲ; ವಿವೇಕ ಅವಿವೇಕದ ಬಗ್ಗೆ ತೀವ್ರವಾಗಿ ಯೋಚಿಸುತ್ತಿರಲಿಲ್ಲ. ಅವರದ್ದು ಕನಿಕರದ ಕರುಳು, ಅಸಾಧಾರಣ ಹೆಂಗರುಳು. ಅವರನ್ನು ಹತ್ತಿರದಿಂದ ಬಲ್ಲ ಅನೇಕರು ಹೇಳುವಂತೆ "ತಾಯಿಪ್ರೇಮ" ಅವರದು. ಶ್ರೀಗಳ ಈ ಸ್ವಭಾವವನ್ನು ಕೆಲವರು ದುರುಪಯೋಗಪಡಿಸಿಕೊಂಡ ಉದಾಹರಣೆಗಳೂ ಇವೆ. ಆದರೆ ಬಹುತೇಕರು ನಿಜವಾಗಿಯೂ ಕಷ್ಟದಲ್ಲಿರುತ್ತಿದ್ದವರು. ಅಂತಹವರಿಗೆ ತಕ್ಷಣಕ್ಕೆ ಸ್ಪಂದಿಸುತ್ತಿದ್ದ ಶ್ರೀಗಳು ಅವರಿಗೆ ಏನಾದರೊಂದು ಪರಿಹಾರ



ದೊರಕಿಸುತ್ತಿದ್ದರು. ಆದರೆ ಅದು ಹಣಕಾಸಿನ ವಿಚಾರವಾದರೆ ಒಂದು ತೊಡಕಿರುತ್ತಿತ್ತು. ಅದೆಂದರೆ ಶ್ರೀಮಠದ ಹಣಕಾಸಿನ ವಿಷಯದಲ್ಲಿ ಬಹಳ ಕಠಿಣ ಸ್ವಭಾವದ ಶ್ರೀ ಕ್ಯಾತನಹಳ್ಳಿ ಪ್ರಭುಸ್ವಾಮಿಗಳ ಕಣ್ಣು ತಪ್ಪಿಸಿ ನಡೆಯಬೇಕಾಗಿತ್ತು. ಅವರು ನಿಧಿಯನ್ನು ಕಾಯುವ ಸರ್ಪದಂತೆ ಇದ್ದರು ಎಂದರೆ ಅತಿಶಯೋಕ್ತಿಯಲ್ಲ. ಬೇರೆಯವರಿರಲಿ, ಸ್ವತಃ ಪರಮಪೂಜ್ಯರೇ ಅಗತ್ಯಕ್ಕಿಂತ ಹೆಚ್ಚಿಗೆ ಖರ್ಚು ಮಾಡಲು ಅವರು ಬಿಡುತ್ತಿರಲಿಲ್ಲ. ರಾಮಾನುಜ ರಸ್ತೆಯಲ್ಲಿರುವ ಈಗಿನ ಹಳೆಯ ಆಸ್ಪತ್ರೆ ಕಟ್ಟಡ ಮತ್ತೆ ನಿರ್ಮಾಣವಾದಾಗ ಬೇರೆಯವರು ಕ್ಯೂರಿಂಗ್ ಮಾಡಿದರೆ ಸರಿಯಾಗಿ ಮಾಡುವುದಿಲ್ಲ ಮತ್ತು ಸುಮ್ಮಸುಮ್ಮನೆ ಹಣ ವ್ಯರ್ಥವೆಂದು ಭಾವಿಸಿ, ಕ್ಯಾತನಹಳ್ಳಿ ಬುದ್ಧಿಯವರು ಸ್ವತಃ ತಾವೇ ಆ ಕಾರ್ಯ ಮಾಡುತ್ತಿದ್ದರು. ಆದರೆ, ರಾಜೇಂದ್ರ ಶ್ರೀಗಳ ಮಮ್ಮಲ ಮರುಗುವ ಸ್ವಭಾವ ಇದಕ್ಕಿಂತ ಭಿನ್ನವಾಗಿತ್ತು.

ಸರದಿಯಲ್ಲಿ ನಿಂತ ಯಾರೇ ಆದರೂ ಮೊದಲು ಕ್ಯಾತನಹಳ್ಳಿಯ ಪ್ರಭುಸ್ವಾಮಿಗಳನ್ನು ದಾಟಿಯೇ ಒಳಹೋಗಿ ರಾಜೇಂದ್ರ ಶ್ರೀಗಳನ್ನು ಕಾಣಬೇಕಾಗಿತ್ತು. ಹೀಗೆ ಕಾಣಲು ಮುನ್ನ ಬಂದ ಕಾರಣವನ್ನು ಕ್ಯಾತನಹಳ್ಳಿ ಬುದ್ಧಿಯವರಿಗೆ ವಿವರವಾಗಿ ಹೇಳಬೇಕಾಗಿತ್ತು. ಕಾರಣ ಸರಿಕಂಡರೆ ಮಾತ್ರ ಒಳಪ್ರವೇಶ; ಇಲ್ಲದಿದ್ದರೆ ಅಂಥವರನ್ನು ನಿರ್ದಾಕ್ಷಿಣ್ಯವಾಗಿ ಹಿಂದಕ್ಕೆ ಕಳುಹಿಸುತ್ತಿದ್ದರು. ಒಂದರ್ಥದಲ್ಲಿ, ಶಿವನ ಮುಂದಿನ ನಂದಿಯಂತೆ ಕ್ಯಾತನಹಳ್ಳಿ ಪ್ರಭುಸ್ವಾಮಿಗಳಿದ್ದರು.

ಸರದಿಯಲ್ಲಿ ನಿಂತಿದ್ದ ಸ್ವಾಮಿಯವರಿಗೆ ಅವಕಾಶ ದೊರೆತಾಗ, ಶ್ರೀಗಳ ಕಾಲು ಹಿಡಿದು ಅಳತೊಡಗಿದರು. ವಿಚಲಿತರಾದ ರಾಜೇಂದ್ರ ಶ್ರೀಗಳು "ಏನೋ ಯಾಕೋ ಅಳ್ತಿದ್ದೀಯ, ಏನು ಹೇಳು ಮೊದಲು" ಎಂದರು. ಬದುಕಿನ ಬವಣೆಗಳು ಎಷ್ಟೇ ಬೇಡವೆಂದರೂ ಮನುಷ್ಯನನ್ನು ಅಸಹಾಯಕನನ್ನಾಗಿಸಿಬಿಡುತ್ತವೆ. ಶ್ರೀಗಳ ಸಾಂತ್ವನದ ಮಾತಿನ ನಂತರವೂ ದುಃಖಿಸುತ್ತಿದ್ದ ಸ್ವಾಮಿಯವರನ್ನು ಕುರಿತು "ಏನೋ ದಡ್ಡ ಅಳ್ತೀಯಲ್ಲ, ಅಳು ನಿಲ್ಲಿಸು. ಏನು ವಿಷಯ ಹೇಳು ಮೊದಲು" ಎಂದರು. ದುಃಖವನ್ನು ಸಾವರಿಸಿಕೊಂಡು, "ಬುದ್ಧಿ, ಎರಡು ತಿಂಗಳಿಂದ ಮನೆ ಬಾಡಿಗೆ ಕಟ್ಟಿಲ್ಲ. ಬಂದ ಸಂಬಳವೆಲ್ಲ ತಂದೆಯ ಅನಾರೋಗ್ಯಕ್ಕೆ ಖರ್ಚಾಯಿತು. ಈ ತಿಂಗಳು ಮಕ್ಕಳಿಗೆ ಶಾಲೆಯ ಶುಲ್ಕ ಪಾವತಿಸಬೇಕು. ಕೊನೆಯ ದಿನಾಂಕ ಹತ್ತಿರ ಬರುತ್ತಿದೆ. ಏನು ಮಾಡಲೂ ತೋಚುತ್ತಿಲ್ಲ. ಅದಕ್ಕೆ ನಿಮ್ಮನ್ನು ಕಂಡು ಸಾಲ ಕೇಳಲು ಬಂದೆ ಬುದ್ಧಿ, ದಯಮಾಡಿ ಮುನ್ನೂರು ರೂಪಾಯಿ



ಕೊಡಿ. ಪ್ರತಿ ತಿಂಗಳು ಸಂಬಳದಲ್ಲಿ ಇಂತಿಷ್ಟು ಅಂತ ಹಿಡಿದುಕೊಳ್ಳಿ" ಎಂದು ಅಳುತ್ತಲೇ ಹೇಳಿದನು. ಶ್ರೀಗಳು "ಅಯ್ಯೋ ನನ್ನ ಹತ್ತಿರ ಯಾವುದೂ ದುಡ್ಡಿಲ್ಲವಲ್ಲೋ, ಮಕ್ಕಳ ಫೀಜ್ ಅಂತ ಬೇರೆ ಹೇಳ್ತಿದ್ದಿಯಾ, ಏನು ಮಾಡೋದು". "ಬುದ್ಧಿ, ತಾವು ಕೊಡದಿದ್ದರೆ ಈ ವರ್ಷ ಮಕ್ಕಳ ಓದು ನಿಂತುಹೋಗುತ್ತದೆ". "ಗೊತ್ತಾಯ್ತು ಕಣೋ, ಆದರೆ ದುಡ್ಡಿಲ್ಲವಲ್ಲ. ಆಯ್ತು, ಒಂದು ಕೆಲಸ ಮಾಡು, ನಾನು ತುಮ್ಮನೇರಳೆ ಸಾಹುಕಾರರ ಮನೆಗೆ ಪೂಜೆಗೆ ಹೋಗ್ತಿದ್ದೀನಿ. ಅಲ್ಲಿ ಏನು ಕಾಣಿಕೆ ಕೊಡ್ತಾರೋ ನೋಡ್ತೀನಿ, ಅದನ್ನು ನಿನಗೆ ಕೊಡ್ತೀನಿ. ಸಂಜೆ ಬಾ ಕ್ಯಾತನಹಳ್ಳಿ ಸ್ವಾಮಿಗಳು ನೋಡಿಯಾರು. ಕಣ್ಣೀರು ಒರೆಸಿಕೊ. ಸಂಜೆ ಬಾ. ಈಗ ಹೋಗು" ಎಂದು ಅವರನ್ನು ಕಳುಹಿಸಿದರು.

ಸಂಜೆ ಶ್ರೀಮಠದ ಆವರಣದಲ್ಲಿ ರಾಜೇಂದ್ರ ಶ್ರೀಗಳ ಆಗಮನವನ್ನೇ ಕಾಯುತ್ತಿದ್ದರು ಸ್ವಾಮಿಯವರು. ಪೂಜೆ ಮುಗಿಸಿ ಶ್ರೀಗಳು ಆಗಮಿಸಿದರು. ಹೀಗೆ ಪೂಜೆ ಮುಗಿಸಿ ಬಂದಾಗ ಭಕ್ತರು ನೀಡಿದ ಕಾಣಿಕೆಯನ್ನು, ಶ್ರೀಮಠದ ಒಳಗೆ ಪ್ರವೇಶಿಸುತ್ತಿದ್ದಂತೆ, ಕ್ಯಾತನಹಳ್ಳಿ ಪ್ರಭುಸ್ವಾಮಿಗಳಿಗೆ ನೀಡುವುದು, ಅವರು ಅದನ್ನು ಲೆಕ್ಕ ಬರೆದಿಡುವುದು ಸಹಜವಾಗಿಯೇ ನಡೆದುಕೊಂಡು ಬಂದ ವಾಡಿಕೆ. ಅಂದೂ ಸಹ ರಾಜೇಂದ್ರ ಶ್ರೀಗಳು 50 ರೂಪಾಯಿಗಳನ್ನು ಕ್ಯಾತನಹಳ್ಳಿ ಶ್ರೀಗಳಿಗೆ ನೀಡಿ, ಲೆಕ್ಕದ ಪುಸ್ತಕಕ್ಕೆ ಜಮಾ ಮಾಡಿಸಿದರು. ಹಿಂಬಾಲಿಸುತ್ತಲೇ ಬಂದ ಸ್ವಾಮಿಯವರನ್ನು ಕಂಡು ಕ್ಯಾತನಹಳ್ಳಿ ಶ್ರೀಗಳು, "ಬೆಳಗ್ಗೆ ಬಂದಿದ್ಯಲ್ಲ, ಪುನಃ ಈಗೇಕೆ ಬಂದೆ, ಬೇರೆ ಕೆಲಸವಿಲ್ಲವೆ" ಎಂದು ಗದರಿದರು. ಆಗ ರಾಜೇಂದ್ರ ಶ್ರೀಗಳು, "ಇಲ್ಲ, ನಾನೇ ಬರಹೇಳಿದ್ದು, ಕಾಲೇಜಿನ ವಿಚಾರ ಏನೋ ಮಾತನಾಡುವುದಿದೆ" ಎಂದು ಹೇಳಿ ಒಳಗೆ ಕರೆದುಕೊಂಡು ಹೋದರು. ಪೀಠದಲ್ಲಿ ಕುಳಿತು ಅನೌಪಚಾರಿಕ ಮಾತುಕತೆ ಮುಗಿದ ಮೇಲೆ ತಾವು ಧರಿಸಿದ್ದ ಅಂಗಿಯ ತೋಳಿನ ಮಡಿಕೆಯನ್ನು ಬಿಚ್ಚಿ, ಅದರಲ್ಲಿ ಅಡಗಿಸಿಟ್ಟಿದ್ದ 300 ರೂ.ಗಳನ್ನು ತೆಗೆದು, "ಸಾಹುಕಾರರು 50 ರೂಪಾಯಿ ಕಾಣಿಕೆ ನೀಡಿದರು. ಈ ಮುನ್ನೂರು ರೂ.ಗಳನ್ನು ಅವರಿಂದ ಸಾಲ ತಂದಿದ್ದೇನೆ. ಹೋಗು, ಮೊದಲು ಬಾಡಿಗೆ ಹಾಗೂ ಮಕ್ಕಳ ಫೀಸ್ ಕಟ್ಟು. ಈ ಹಣವನ್ನು ಜೇಬಿನಲ್ಲಿ ಇಟ್ಟುಕೊಂಡು ಹೋಗಬೇಡ, ಕ್ಯಾತನಹಳ್ಳಿ ಶ್ರೀಗಳಿಗೆ ಅನುಮಾನ ಬಂದೀತು, ಅವರಿಗೆ ಕಾಣದಂತೆ ತೆಗೆದುಕೊಂಡು ಹೋಗು" ಎಂದರು. "ಬುದ್ಧಿ, ನನಗಾಗಿ ತಾವು ಇನ್ನೊಬ್ಬರ ಬಳಿ ಸಾಲ ಬೇಡುವಂತೆ ಆಯ್ತು, ನನ್ನ ಕ್ಷಮಿಸಿ



ಬುದ್ಧಿ" ಎಂದು ಕಾಲು ಹಿಡಿದು ಪ್ರಭುಸ್ವಾಮಿ ದುಃಖಿಸತೊಡಗಿದರು. ಆಗ ಶ್ರೀಗಳು ಅವರಿಗೆ ಸಮಾಧಾನ ಹೇಳಿ, "ಲೇ ದಡ್ಡ, ನೀನು ಅಳೋದನ್ನು ಕ್ಯಾತನಹಳ್ಳಿ ಬುದ್ಧಿಯವರು ಕಂಡರೆ ಕೆಲಸ ಕೆಡುತ್ತೆ. ನಾನು ಸಾಲ ಪಡೆದ ವಿಷಯ ಕ್ಯಾತನಹಳ್ಳಿಯವರಿಗೆ ಹೇಳಬೇಡಿ ಎಂದು ಸಾಹುಕಾರರಿಗೂ ಹೇಳಿದ್ದೇನೆ. ನೀನು ಬೇರೆ ಜೋರಾಗಿ ಅಳ್ತೀಯಲ್ಲ. ಮೊದಲು ಇಲ್ಲಿಂದ ನಡೆ ನಡೆ" ಎಂದರು. "ಬುದ್ಧಿ, ನಿಮ್ಮ ಈ ಋಣವನ್ನು ನಾನು ತೀರಿಸೋಕೆ ಆಗುತ್ತೆಯೆ". "ಅಯ್ಯೋ ಬಿಡಯ್ಯಾ ನೀನು ಮಠದ ಉದ್ಯೋಗಿ. ಅಂದರೆ ಶ್ರೀಮಠದ ಮಗ. ನಿನ್ನ ದುಃಖ ನಮ್ಮದೂ ಅಲ್ಲವೆ. ಮಕ್ಕಳ ವಿದ್ಯಾಭ್ಯಾಸ ಅಂತೀಯಾ, ಹೋಗು, ನೀವೆಲ್ಲ ಚೆನ್ನಾಗಿದ್ದರೆ ತಾನೇ ನಾವೂ ಸಂತೋಷವಾಗಿರುವುದು, ಹೋಗು ಹೋಗು" ಎಂದು ಕಳುಹಿಸಿ, ತಮ್ಮ ಒಳಕೋಣೆಗೆ ಶ್ರೀಗಳು ನಡೆದರು.

□

- ಕಾಯಕ ಯಾವುದೇ ಆಗಲಿ, ಶ್ರದ್ಧೆ ಮತ್ತು ನಿಷ್ಠೆಯಿಂದ ಮಾಡಿದರೆ ಖಂಡಿತವಾಗಿ ಫಲ ಲಭಿಸುತ್ತದೆ.
- ಕಾಯಕ ಮಾಡದವನಿಗೆ ಧರ್ಮವಿಲ್ಲ, ಧರ್ಮವಿಲ್ಲದವನಿಗೆ ದೇವರಿಲ್ಲ
- ಸತ್ಯಶುದ್ಧ ಕಾಯಕ ನಿಷ್ಠೆಯನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು.
- ಬಡತನದ ನಿವಾರಣೆಗೆ ಸತ್ಯಶುದ್ಧ ಕಾಯಕ ತಾರಕಮಂತ್ರ
- ಕಾಯಕ ಶ್ರಮಯುಕ್ತವೂ, ಸತ್ಯಶುದ್ಧವೂ ಆಗಿರಬೇಕು
- ಜನರ ಸೇವೆ ಮಾಡುವ ಅವಕಾಶ ಲಭಿಸಿದಾಗ ಅದು ದೇವರು ಕೊಟ್ಟ ವರ ಎಂದು ಭಾವಿಸಬೇಕು
- ಮಾಡುವ ಕರ್ತವ್ಯದಲ್ಲಿ ಎಚ್ಚರವಿರಬೇಕು, ಅದಕ್ಕಾಗಿ ಏನು ಮಾಡಬೇಕು ಎಂಬುದನ್ನು ಮರೆಯಬಾರದು
- ಒಳ್ಳೆಯ ಕೆಲಸವನ್ನು ಮಾಡಬೇಕು ಎನ್ನಿಸಿದ ಕೂಡಲೇ ಮಾಡಬೇಕು; ನಾಳೆಗೆಂದು ಮುಂದೂಡಬಾರದು.

– ಪರಮಪೂಜ್ಯ ಜಗದ್ಗುರು
ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು



ತೋರುಂಬ ಲಾಭ

ಒಂದೇ ಸಮನೆ ಗಂಟೆ ಬಾರಿಸುವ ಶಬ್ದ ಕೇಳಿದಾಗ ಪಂಚೆಯುಟ್ಟು, ಮೈಮೇಲೆ ಕೆಂಪು ಅಂಗವಸ್ತ್ರವನ್ನು ಅಡ್ಡಡ್ಡ ಹೊದ್ದುಕೊಂಡು ಹಣೆಗೆ ತ್ರಿಪುಂಡ್ರ ಧರಿಸಿ, ವಕ್ಷಸ್ಥಳದಲ್ಲಿ ಕರಡಿಗೆ ಇಟ್ಟುಕೊಂಡು, ಕೈಯಲ್ಲಿ ತಟ್ಟೆ ಹಿಡಿದು ನಾ ಮುಂದು ತಾ ಮುಂದು ಎಂದು ಪ್ರಸಾದಾಲಯಕ್ಕೆ ತೆರಳಿ ಸರದಿಯ ಸಾಲಿನಲ್ಲಿ ಕುಳಿತುಕೊಳ್ಳುವುದೇ ಒಂದು ಸಂಭ್ರಮ. ಈ ಮೇಲಿನ ಅಂಶಗಳಲ್ಲಿ ಯಾವುದೇ ಒಂದು ಕೊರತೆಯಾದರೂ ಅಂಥವರು ಊಟದ ಕೋಣೆಗೆ ಪ್ರವೇಶಿಸುವಂತೆ ಇರಲಿಲ್ಲ. ಅವರಿಗೆ ಆ ದಿನ ಊಟ ಇರುತ್ತಿರಲಿಲ್ಲ. ಹಾಗಾಗಿ ಎಲ್ಲರೂ ಕಡ್ಡಾಯವಾಗಿ ಈ ಸಂಪ್ರದಾಯವನ್ನು ಪಾಲಿಸಬೇಕಾಗಿತ್ತು. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ವೀರಶೈವ ವಿದ್ಯಾರ್ಥಿಗಳಲ್ಲದವರೂ ಕೂಡ ಲಿಂಗವನ್ನು ಧರಿಸುತ್ತಿದ್ದರು. ಸ್ವತಃ ಶ್ರೀಗಳೇ ಎಲ್ಲರಿಗೂ ಲಿಂಗದೀಕ್ಷೆ ನೀಡುತ್ತಿದ್ದರು. ಊಟಿ, ಕೊಳ್ಳೇಗಾಲ, ರಾಮಾಪುರದಲ್ಲಿ ಹೀಗೆ ಶ್ರೀಗಳಿಂದ ಲಿಂಗದೀಕ್ಷೆ ಸ್ವೀಕರಿಸಿದ ಸಾವಿರಾರು ಜನರಿದ್ದರು. "ಲಿಂಗ ಧರಿಸಬೇಕಾದರೆ ಅವರು ಹುಟ್ಟಿನಿಂದ ಲಿಂಗಾಯತರೇ ಆಗಬೇಕಿಲ್ಲ. ಯಾರಿಗೆ ನಂಬಿಕೆ, ಶ್ರದ್ಧೆ ಇರುತ್ತದೆಯೋ ಅವರೆಲ್ಲರೂ ಧರಿಸಬಹುದು" ಎಂದು ಶ್ರೀಗಳು ಹೇಳುತ್ತಿದ್ದರು. ವಿದ್ಯಾರ್ಥಿನಿಲಯದಲ್ಲಿ ವಿದ್ಯಾರ್ಥಿಗಳು ದಿನಕ್ಕೆ ಎರಡು ಹೊತ್ತು ಮಾತ್ರ ಪ್ರಸಾದ ಸ್ವೀಕರಿಸಬಹುದಾಗಿತ್ತು. ಪ್ರಸಾದ ಸ್ವೀಕರಿಸುವ ಹೊತ್ತನ್ನು ವಿದ್ಯಾರ್ಥಿಯೇ ನಿರ್ಧರಿಸಬಹುದಿತ್ತು. ನಿಲಯದ ಮೇಲ್ವಿಚಾರಕರು ಆ ವಿದ್ಯಾರ್ಥಿಯು ದಿನದ ಆ ಸಮಯಕ್ಕೆ ಬಂದಿದ್ದನೆ, ಇಲ್ಲವೆ ಎಂಬುದನ್ನು ನೆನಪಿನಿಂದಲೇ ಊಹಿಸಿ ದಾಖಲಿಸುತ್ತಿದ್ದರು. ಸರತಿಯ ಸಾಲಿನಲ್ಲಿ ತಾನೇ ಮೊದಲಿಗನಾಗಿ ಪ್ರಸಾದ ಸ್ವೀಕರಿಸಬೇಕು ಎನ್ನುವುದು ಎಲ್ಲ ವಿದ್ಯಾರ್ಥಿಗಳ ಬಯಕೆಯಾಗಿರುತ್ತಿತ್ತು.

ಅಂದೂ ಹೀಗೆ ಸರತಿಯ ಸಾಲಿನಲ್ಲಿ ಕುಳಿತವರಲ್ಲಿ ಸಿದ್ದಲಿಂಗಪ್ಪನೂ ಒಬ್ಬ. ಎಂಟನೆಯ ತರಗತಿಯಲ್ಲಿ ಓದುತ್ತಿದ್ದ ಆತನಿಗೆ ವಿದ್ಯಾರ್ಥಿನಿಲಯದಲ್ಲಿ ಸ್ವಲ್ಪ ಹೆಚ್ಚಿನ ಗೌರವವಿತ್ತು. ಕಾರಣ, ಆತ ಪರಮಪೂಜ್ಯ ರಾಜೇಂದ್ರ ಶ್ರೀಗಳವರ ಪೂರ್ವಾಶ್ರಮದ ಹತ್ತಿರದ ಸಂಬಂಧಿಯಾಗಿದ್ದ. ಮಾತ್ರವಲ್ಲ, ಮುಂದೆ ಹೆಸರಾಂತ ಮಠವೊಂದಕ್ಕೆ ಉತ್ತರಾಧಿಕಾರಿ ಕೂಡ ಆಗುವವನಿದ್ದ. ಸಾಮಾನ್ಯವಾಗಿ ಬಿಡುವಿದ್ದಾಗಲೆಲ್ಲ ಶ್ರೀಗಳು ತಾವೇ ಪ್ರಸಾದದ ಪ್ರಾಂಗಣಕ್ಕೆ ಬಂದು ಪ್ರಾರ್ಥನೆಯನ್ನು ಹೇಳುತ್ತಿದ್ದರು. ಸ್ವತಃ ಪ್ರಸಾದವನ್ನು ಕೂಡ ಬಡಿಸುತ್ತಿದ್ದರು. ಹುಡುಗರು ಸರತಿಯ ಸಾಲಿನಲ್ಲಿ ಪ್ರಸಾದ



ಬಡಿಸುವುದನ್ನು ವೀಕ್ಷಿಸುತ್ತ ಶತಪಥ ಹಾಕುತ್ತಿದ್ದರು. "ಬಡಿಸಿದ ಪ್ರತಿ ಅನ್ನದ ಅಗುಳಿನಲ್ಲೂ ಭಗವಂತನಿದ್ದಾನೆ. ಹಾಗಾಗಿ ಅದನ್ನು ವ್ಯರ್ಥ ಮಾಡಬಾರದು" ಎನ್ನುವುದು ಶ್ರೀಗಳ ನಂಬಿಕೆಯಾಗಿತ್ತು. ಹಾಗೆ ನೋಡಿದರೆ, ವೀರಶೈವ ಪರಂಪರೆಯ ಎಲ್ಲ ಗುರುಗಳೂ ಸಹ ಊಟದ ತಟ್ಟೆಯಲ್ಲಿ ಬಡಿಸಿದ ಯಾವ ಪದಾರ್ಥವನ್ನೂ ಬಿಡದೆ ಸ್ವೀಕರಿಸುವುದು, ಅನಂತರ ಆ ತಟ್ಟೆಯನ್ನು ತೊಳೆದ ಆ ನೀರನ್ನೂ ಕುಡಿಯುವುದು ಒಂದು ಪದ್ಧತಿಯಾಗಿತ್ತು.

ಅಂದು ರಾಜೇಂದ್ರ ಶ್ರೀಗಳು ಪ್ರಸಾದಾಲಯಕ್ಕೆ ಬಂದವರೆ ಎಲ್ಲರ ಪ್ರಾರ್ಥನೆಯನ್ನು ಗಮನಿಸುತ್ತ ಯಾರು ಯಾರು ಕರಡಿಗೆಯನ್ನು ಧರಿಸಿದ್ದಾರೆಂಬುದನ್ನು ಪರಿಶೀಲಿಸತೊಡಗಿದರು. ವಿದ್ಯಾರ್ಥಿನಿಲಯದಲ್ಲಿ ಎಲ್ಲ ವಿದ್ಯಾರ್ಥಿಗಳೂ ಸಾಮಾನ್ಯವಾಗಿ ಕರಡಿಗೆ ಧರಿಸುತ್ತಿದ್ದರು. ಕೆಲವರು ಪ್ರಸಾದದ ಅಂಗಳದಿಂದ ತಮ್ಮ ಕೊಠಡಿಗೆ ಹೋದ ಬಳಿಕ ಕರಡಿಗೆಯನ್ನು ತೆಗೆದು ಗೂಟದಲ್ಲೋ, ತಮ್ಮ ತಮ್ಮ ಟ್ರಂಕಿನಲ್ಲೋ ಇಡುತ್ತಿದ್ದರು. ಪ್ರಸಾದಾಲಯದಲ್ಲಿ ಕರಡಿಗೆಯನ್ನು ಆಗಾಗ ಪರಿಶೀಲಿಸುವ ಕೆಲಸ ನಡೆಯುತ್ತಿತ್ತು; ಕೆಲವೊಮ್ಮೆ ಕೊಠಡಿಗೆ ಹೋಗಿ ಕೂಡ ಪರಿಶೀಲಿಸುತ್ತಿದ್ದರು. ಯಾವ ವಿದ್ಯಾರ್ಥಿಯೂ ರೂಮಿನಲ್ಲಿ ದೇವರ ಚಿತ್ರಪಟವನ್ನು ಬಿಟ್ಟು ತಮಗೆ ಇಷ್ಟವಾದ ಕ್ರೀಡಾಪಟು, ಚಿತ್ರನಟ ಮುಂತಾದವರ ಚಿತ್ರವನ್ನು ಹಾಕುವಂತಿರಲಿಲ್ಲ. ಅಲ್ಲಿ ಕನ್ನಡಿಯೂ ಇರುತ್ತಿರಲಿಲ್ಲ. ಆಗಿನ ಕಾಲದ ಪ್ರಸಾದಾಲಯದಲ್ಲಿ ಈ ಎಲ್ಲ ಸಂಗತಿಗಳನ್ನೂ ಪರಿಗಣಿಸುತ್ತಿದ್ದರು. ಸಿದ್ದಲಿಂಗಪ್ಪ ರಜೆಯಲ್ಲಿ ಊರಿಗೆ ಹೋಗಿ ವಾಪಸು ಬರುವಾಗ ತನ್ನ ಕರಡಿಗೆಯನ್ನು ಅಲ್ಲಿಯೇ ಮರೆತು ಬಂದುಬಿಟ್ಟಿದ್ದನು. ಅದು ಅವನಿಗೆ ನೆನಪಾದದ್ದು ಊಟದ ಗಂಟೆ ಹೊಡೆದಾಗಲೇ. ಕರಡಿಗೆ ಇಲ್ಲದೆ ಪ್ರಸಾದಾಲಯಕ್ಕೆ ಹೋಗುವಂತಿಲ್ಲ. ಹೋಗದೆ ಇದ್ದರೆ ಹಸಿವಿನಿಂದ ಬಳಲಬೇಕಾಗುತ್ತದೆ. ಏನು ಮಾಡಬೇಕೆಂದು ತೋಚದೆ ಚಿಂತಾಕ್ರಾಂತನಾದನು. ಆಗ ಆತನಿಗೆ ಒಂದು ಉಪಾಯ ಹೊಳೆಯಿತು. ಟ್ರಂಕಿಗೆ ಹಾಕುವ ಸಣ್ಣ ಬೀಗಕ್ಕೆ ಮಂದಲಿಗೆಯ ದಾರವನ್ನು ಕಟ್ಟಿ ಅದನ್ನು ಧರಿಸಿಕೊಂಡು ಮೈಮೇಲೆ ಕೆಂಪುವಸ್ತ್ರವನ್ನು ಹೊದ್ದುಕೊಂಡು ತಟ್ಟೆ ಹಿಡಿದು ಪ್ರಸಾದಾಲಯಕ್ಕೆ ಬಂದನು. ಇದೆಲ್ಲವನ್ನೂ ಪರಿಶೀಲಿಸಿದ ಶ್ರೀಗಳು ಅಲ್ಲಿ ಏನೂ ಮಾತನಾಡದೆ ಎಲ್ಲರಿಗೂ ಪ್ರಸಾದ ಬಡಿಸುವಂತೆ ತಿಳಿಸಿ ತಮ್ಮ ಕೋಣೆಗೆ ತೆರಳಿದರು.

ಪ್ರಸಾದ ಸ್ವೀಕರಿಸಿದ ನಂತರ ಸಿದ್ದಲಿಂಗಪ್ಪನಿಗೆ ಶ್ರೀಗಳು ಹೇಳಿ ಕಳುಹಿಸಿದರು. ಸಿದ್ದಲಿಂಗಪ್ಪ ಪ್ರಸಾದಾಲಯದಲ್ಲಿ ಶ್ರೀಗಳು ತಾನು ಕರಡಿಗೆ ಧರಿಸದೆ ಇರುವುದನ್ನು



ಕಂಡುಹಿಡಿಯಲಿಲ್ಲ. ಅದೂ ಅಲ್ಲದೆ ಈಗ ಪ್ರಸಾದ ಮುಗಿದಿದೆ ಎಂದು ಮನಸ್ಸಿನಲ್ಲಿ ಧೈರ್ಯ ಮಾಡಿಕೊಂಡು ಅಡ್ಡವಸ್ತ್ರವನ್ನು ತೆಗೆದು ಅಂಗಿ ಧರಿಸಿಕೊಂಡು ಲಿಂಗವನ್ನು ತೆಗೆದುಹಾಕಿ ಶ್ರೀಗಳಿದ್ದ ಕೋಣೆಗೆ ತೆರಳಿದನು. ಶ್ರೀಗಳು ಕಚೇರಿಯಲ್ಲಿದ್ದ ಎಲ್ಲರನ್ನೂ ಹೊರಗೆ ಕಳುಹಿಸಿ, ಸಿದ್ದಲಿಂಗಪ್ಪನ ಮುಖ ನೋಡುತ್ತಾ "ಊರಿನಿಂದ ಯಾವಾಗ ಬಂದೆ?" ಎಂದರು. "ನಿನ್ನೆ ಸಂಜೆ ಬಂದೆ" ಎಂದನು ಸಿದ್ದಲಿಂಗಪ್ಪ. ಹೀಗೆ ಹೇಳುವಾಗ ಸಿದ್ದಲಿಂಗಪ್ಪನ ಮುಖದಲ್ಲಿ ಯಾವ ಅಳುಕು, ಹಿಂಜರಿಕೆ ಇರಲಿಲ್ಲ. "ಎಲ್ಲಿ ನಿನ್ನ ಕರಡಿಗೆ ತೋರಿಸು" ಎಂದರು. ಆ ಅನಿರೀಕ್ಷಿತ ಪ್ರಶ್ನೆಯಿಂದ ಸ್ವಲ್ಪ ವಿಚಲಿತನಾದ ಸಿದ್ದಲಿಂಗಪ್ಪ ತಡವರಿಸಿಕೊಂಡು "ರೂಮಿನಲ್ಲಿದೆ" ಎಂದನು. "ಹೋಗಿ ಧರಿಸಿಕೊಂಡು ಬಾ" ಎಂದರು. ಆಗ ಸಿದ್ದಲಿಂಗಪ್ಪ "ಅದು... ಅದು..." ಎಂದು ತಡವರಿಸುತ್ತಿದ್ದಂತೆ "ನೀನು ಇಂದು ಪ್ರಾರ್ಥನೆಯಲ್ಲಿ ಕರಡಿಗೆ ಧರಿಸಿರಲಿಲ್ಲ ಅದು ನನಗೆ ಗೊತ್ತು" ಎಂದರು. ಸಿದ್ದಲಿಂಗಪ್ಪನಿಗೆ ತನ್ನ ತಪ್ಪಿನ ಅರಿವಾಗಿ ಶ್ರೀಗಳ ಕಾಲಿಗೆರಗಿ "ತಪ್ಪಾಯಿತು ಬುದ್ಧಿ" ಎಂದನು. ಆಗ ಶ್ರೀಗಳು "ನೀನು ಮಠದ ಹುಡುಗ, ಮುಂದೆ ಮಠಾಧಿಪತಿ ಆಗಬೇಕಾದವನು. ಅಂತಹವನು ಹೀಗೆ ಮಾಡಬಾರದು, ಅಲ್ಲವೆ" ಎಂದರು. "ಊಟದ ಸಮಯದಲ್ಲಿ ಕರಡಿಗೆ ಧರಿಸದಿದ್ದರೆ ಪ್ರಸಾದ ಸಿಗುವುದಿಲ್ಲವಲ್ಲ ಎಂದು ಹೀಗೆ ಮಾಡಿದೆ" ಎಂದ ಸಿದ್ದಲಿಂಗಪ್ಪ. ಆಗ ಶ್ರೀಗಳು "ನೀನು ಬೀಗವನ್ನು ಕರಡಿಗೆ ಎಂದು ಧರಿಸಿದ್ದಕ್ಕೆ ನನಗೆ ಬೇಜಾರಿಲ್ಲ, ತೋರಿಕೆಗೆ ಲಿಂಗ ಧರಿಸುವುದಕ್ಕಿಂತ ಬೀಗವನ್ನೇ ಲಿಂಗವೆಂದು ಧರಿಸಿದ್ದಿದ್ದರೆ ನನಗೆ ಇಷ್ಟವಾಗುತ್ತಿತ್ತು. ಆದರೆ ಹೀಗೆ ಮಾಡಿದ ನಿನಗೆ ಪ್ರಸಾದದ ಮೇಲಿನ ಆಸೆ ಮಾತ್ರ ಇತ್ತು. ಅದೂ ಅಲ್ಲದೆ 'ಇದು ನಮ್ಮ ಮಠ' ಎಂಬ ಒಂದು ರೀತಿಯ ಅಹಂಕಾರವಿತ್ತು. ಇದು ಯಾರಿಗೂ ಒಳ್ಳೆಯದಲ್ಲ. ಅದರಲ್ಲೂ ಮಠಾಧಿಪತಿ ಆಗುವವರಿಗೆ ಇಂಥ ಬುದ್ಧಿ ಇರಲೇಬಾರದು. ನಿನ್ನನ್ನು ಅನೇಕರು ಅನುಸರಿಸುತ್ತಾರೆ ಎಂಬುದು ನಿನಗೆ ತಿಳಿದಿರಬೇಕಾಗಿತ್ತು" ಎಂದರು. ಶ್ರೀಗಳ ಮಾತು ಸಿದ್ಧಲಿಂಗಪ್ಪನನ್ನು ಶೂಲದಂತೆ ಇರಿಯುತ್ತಿದ್ದವು. ಅವು ಆತನ ಒಳಗಣ್ಣನ್ನು ತೆರೆದವು. ಶ್ರೀಗಳ ಕಾಲು ಹಿಡಿದು, ಕಣ್ಣೀರುಗರೆದು ಮುಂದೆ "ಇನ್ನು ಮುಂದೆ ಹೀಗಾಗದಂತೆ ನೋಡಿಕೊಳ್ಳುತ್ತೇನೆ" ಎಂದು ಮಾತು ಕೊಟ್ಟನು. ಶ್ರೀಗಳು ಪ್ರೀತಿಯಿಂದ ಆತನ ತಲೆ ನೇವರಿಸಿದರು.

□



ಬೆಳಕಿನ ದಾರಿ ತೋರಿದವರು

ಬದುಕೇ ಶೂನ್ಯವೆನಿಸತೊಡಗಿತ್ತು. ನನ್ನ ಬದುಕಿನ ಆಧಾರವಾಗಿದ್ದ, ಸರ್ವಸ್ವವೂ ಆಗಿದ್ದ ಯಜಮಾನರನ್ನು ಕಳೆದುಕೊಂಡು ದಿಕ್ಕೇ ತೋಚದಂತೆ ಆಗಿತ್ತು. ಇಂಜಿನಿಯರ್ ಆಗಿದ್ದ ಅವರು ದೇವರು, ಧರ್ಮ, ಸಂಸ್ಕೃತಿ ಎಂದು ಯಾವಾಗಲೂ ಹೇಳುತ್ತಿದ್ದರು. ಮಾತ್ರವಲ್ಲ, ಜೀವನದಲ್ಲೂ ಅದನ್ನು ಸದಾ ಅನುಸರಿಸುತ್ತಿದ್ದ ನನ್ನ ಪತಿದೇವರು ಹಾಸಿಗೆ ಹಿಡಿದು ವರ್ಷಗಳ ಕಾಲ ಮಲಗಿದಾಗಲೇ ದುಃಖವಾಗಿತ್ತು. ದೇವರ ಮೇಲೆ ನಂಬಿಕೆಯೇ ಇಲ್ಲವಾಗಿತ್ತು. ಆತ ಇರುವುದು ನಿಜವೇ ಆಗಿದ್ದರೆ ಇಷ್ಟು ಧಾರ್ಮಿಕರಾಗಿದ್ದ ನನ್ನ ಪತಿಗೆ ಯಾಕೆ ಇಷ್ಟೊಂದು ಕಷ್ಟ ಕೊಡುತ್ತಿದ್ದ ಎಂದು ಆ ಕಾಣದ ದೇವರನ್ನು ನಿತ್ಯವೂ ಶಪಿಸುತ್ತಿದ್ದೆ. ಈ ನಡುವೆ ಅವರು ದೈವಾಧೀನರಾಗಿದ್ದು ಬದುಕಿನಲ್ಲಿ ಒಮ್ಮೆಲೇ ಕತ್ತಲೆ ಆವರಿಸಿದಂತಾಯಿತು. ನನ್ನ ದುರದೃಷ್ಟ, ನನಗೆ ಮಕ್ಕಳ ಭಾಗ್ಯವೂ ಇರಲಿಲ್ಲ. ನನ್ನ ಯಜಮಾನರೇ ನನ್ನ ಸರ್ವಸ್ವವಾಗಿದ್ದರು. ಅವರನ್ನು ಕಳೆದುಕೊಂಡ ಬಳಿಕ ನನಗೆ ಬದುಕಿನಲ್ಲಿ ಇನ್ನೇನೂ ಉಳಿದಿಲ್ಲವೆನಿಸಿತು.

ನಮ್ಮ ಪೂರ್ವಿಕರಿಂದ ಹಾಗೂ ನಾವು ಸಂಪಾದಿಸಿದ್ದ ಅಪಾರ ಸಂಪತ್ತಿಗೆಲ್ಲ ಈಗ ಅರ್ಥವಿಲ್ಲದಾಗಿಬಿಟ್ಟಿತ್ತು. ಮನಸ್ಸು ವೈರಾಗ್ಯದ ಕಡೆಗೆ ಆಕರ್ಷಿತವಾಯಿತು. ಎಲ್ಲದರ ಬಗ್ಗೆ ನಿರಾಸಕ್ತಿ. ಜೀವನವೇ ಸಾಕು ಎಂಬ ನಿರ್ಧಾರಕ್ಕೆ ಬಂದೆ. ಯಾರೊಂದಿಗೂ ಮಾತನಾಡಬೇಕು ಎನಿಸುತ್ತಿರಲಿಲ್ಲ. ಒಂದು ಮುಂಜಾನೆ ನನ್ನ ದುಃಖವನ್ನೆಲ್ಲ ನನ್ನ ಗುರುಗಳಾದ ಶ್ರೀ ರಾಜೇಂದ್ರ ಸ್ವಾಮಿಗಳ ಬಳಿ ನಿವೇದಿಸಿಕೊಳ್ಳಬೇಕು ಎಂದು ಶ್ರೀಮಠಕ್ಕೆ ತೆರಳಿದೆ. ಆಗ ತಾನೇ ಪೂಜೆ, ಪ್ರಸಾದ ಮುಗಿಸಿ ಅವರು ಯಾವುದೋ ಕಾಗದವನ್ನು ನೋಡುತ್ತಿದ್ದರು. ನಾನು ಬಂದಿರುವುದನ್ನು ನೋಡಿ ಶ್ರೀಮಠದ ಸೇವಕ ಶಿವರಾಮು "ಇದೇನು ಮೇಡಂ, ಇಷ್ಟು ಬೇಗ ಬಂದಿದ್ದೀರಿ" ಎಂದರು. "ಗುರುಗಳನ್ನು ನೋಡುವುದಿತ್ತು" ಎಂದೆ. "ಬನ್ನಿ, ಒಳಗಿದ್ದಾರೆ" ಎಂದು ಕರೆದುಕೊಂಡು ಹೋದರು. ಶ್ರೀಮಠದಲ್ಲಿ ಎಲ್ಲರಿಗೂ ನಮ್ಮ ಕುಟುಂಬದ ಮೇಲೆ ತುಂಬಾ ಗೌರವವಿತ್ತು. ಶ್ರೀಗಳಿದ್ದ ಪ್ರಾಕಾರವನ್ನು ಪ್ರವೇಶಿಸುತ್ತಿದ್ದಂತೆ ನನ್ನನ್ನು ನೋಡಿ "ಅಯ್ಯೋ, ಇದೇನಮ್ಮ ಇಷ್ಟು ಬೇಗ ಮಠಕ್ಕೆ ಬಂದಿದ್ದೀರಿ, ಏನಾದರೂ ತುರ್ತು ವಿಷಯ ಇತ್ತೇ? ಎಲ್ಲರೂ ಸೌಖ್ಯ ತಾನೇ" ಎಂದರು. ಶ್ರೀಗಳವರ ದರ್ಶನವೂ ಆಗಿ, ಅವರು ಸೌಖ್ಯವೇ ಎಂದು ಕೇಳಿದಾಗ ದುಃಖ ಒತ್ತರಿಸಿಕೊಂಡು ಬಂತು. ಕಣ್ಣೀರು ಧಾರಾಕಾರವಾಗಿ



ಹರಿಯಲಾರಂಭಿಸಿತು. ಶಿವರಾಮು "ಮೇಡಂ ಅಳಬೇಡಿ, ಅಳಬೇಡಿ" ಎನ್ನುತ್ತಲೇ ಇದ್ದ. ಶ್ರೀಗಳು "ಅಳಬೇಡಮ್ಮ, ಸಮಾಧಾನ ಮಾಡಿಕೊ. ಎಲ್ಲರಿಗೂ ಕಷ್ಟ ಇದ್ದದ್ದೇ. ನೀನೇ ಹೀಗೆ ಧೈರ್ಯಗೆಟ್ಟು ಅಳುತ್ತಿದ್ದರೆ ಹೇಗೆ? ಎಷ್ಟು ಬುದ್ಧಿವಂತೆ, ವಿವೇಕ ಇರುವವಳು ನೀನು. ಹೀಗೆ ಅಳುತ್ತಾರೆಯೇ? ನಿನ್ನ ಗಂಡ ಈಗ ಹೋಗಿದ್ದಾನೆ. ನಾಳೆ ನಾವೂ ಅಷ್ಟೇ. ಸಾವು ಯಾರಿಗೂ ತಪ್ಪಿದ್ದಲ್ಲ, ಅಲ್ವಾ" ಎಂದು ಹೇಳುತ್ತಿರುವಂತೆ ಶ್ರೀಗಳ ಕಾಲಿಗೆರಗಿ ನಮಿಸಿ, ಅವರ ಪಾದದ ಬಳಿ ಕುಳಿತೆ. ಶ್ರೀಗಳು "ಮೇಲೇಳು, ಕುರ್ಚಿಯಲ್ಲಿ ಕುಳಿತುಕೋ" ಎಂದು ಒತ್ತಾಯಿಸಿದರು. ಶಿವರಾಮು ಕೂಡ ಬಲವಂತ ಮಾಡಿದ. ಆದರೆ ಭೂಮಿಯವರೆಗೂ ಕುಸಿದುಹೋಗಿದ್ದ ನನಗೆ ಮೇಲೇಳಲು ಆಸಕ್ತಿಯೇ ಇರಲಿಲ್ಲ. ನೆಲದ ಮೇಲೆ ಗುರುಗಳ ಸನ್ನಿಧಾನದಲ್ಲಿ ಸುಮ್ಮನೆ ಕುಳಿತುಕೊಳ್ಳುವುದೇ ಹಿತವೆನಿಸಿತು. ಶ್ರೀಗಳಿಗೆ "ಇಲ್ಲಿಯೇ ಕುಳಿತುಕೊಳ್ಳುತ್ತೇನೆ" ಎಂದು ವಿನಂತಿಸಿದೆ. ಶಿವರಾಮು ಕೆಲಸದ ನಿಮಿತ್ತ ಹೊರಗೆ ತೆರಳಿದ ಮೇಲೆ ಶ್ರೀಗಳು "ಬಂದ ವಿಚಾರವೇನು?" ಎಂದು ನನ್ನನ್ನು ಕೇಳಿದರು. ನಾನು ನನ್ನ ದುಃಖವನ್ನೆಲ್ಲ ತೋಡಿಕೊಂಡು ವೈರಾಗ್ಯದ ಮಾತುಗಳನ್ನಾಡಿದೆ. "ನನ್ನ ಆಸ್ತಿಯನ್ನೆಲ್ಲ ಶ್ರೀಮಠಕ್ಕೆ ದಾನ ಮಾಡಲು ನಿರ್ಧರಿಸಿದ್ದೇನೆ. ಸಂಬಂಧಪಟ್ಟ ಎಲ್ಲ ಕಾಗದ ಪತ್ರಗಳನ್ನೂ ತಂದಿದ್ದೇನೆ. ತಾವು ಸ್ವೀಕರಿಸಬೇಕು. ನನ್ನನ್ನು ಎಲ್ಲಾ ಬಂಧನಗಳಿಂದ ಮುಕ್ತಳನ್ನಾಗಿಸಬೇಕು" ಎಂದು ವಿನಂತಿಸಿದೆ. ವಿನಂತಿ ಎನ್ನುವುದಕ್ಕಿಂತಲೂ ಬೇಡಿದೆ ಎನ್ನಬಹುದು. ಶ್ರೀಗಳು "ತಿಂಡಿ ಆಯಿತೆ" ಎಂದರು. ಇಲ್ಲವೆಂದು ತಲೆಯಾಡಿಸಿದೆ. ಆಚೆ ಇದ್ದ ಶಿವರಾಮುವನ್ನು ಕರೆದು, "ಮೊದಲು ಇವರನ್ನು ಕರೆದುಕೊಂಡು ಹೋಗು, ಪ್ರಸಾದ ಮಾಡಿಸು" ಎಂದರು. ನಾನು "ಅದು ಆಮೇಲಾಗಲಿ ಬುದ್ಧಿ, ಮೊದಲು ಇದನ್ನೆಲ್ಲಾ ಸ್ವೀಕರಿಸಿ" ಎಂದೆ. "ಮೊದಲು ನೀನು ಹೋಗಿ ಪ್ರಸಾದ ಮಾಡಿಕೊಂಡು ಬಾಮ್ಮ, ನಾವು ಇಲ್ಲೇ ಇರುತ್ತೇವಲ್ಲ" ಎಂದರು.

ಶ್ರೀಗಳವರ ಬಲವಂತಕ್ಕೆ ಆಚೆ ಹೋಗಿ ಸ್ವಲ್ಪ ಪ್ರಸಾದವನ್ನು ಸ್ವೀಕರಿಸಿ ಬಂದೆ. ಅಷ್ಟರಲ್ಲಿ ಮತ್ತೆ ಕೆಲವರು ಶ್ರೀಗಳನ್ನು ನೋಡಲು ಬಂದಿದ್ದರು. ಅವರೊಡನೆ ಮಾತನಾಡುತ್ತಿದ್ದ ಶ್ರೀಗಳು ನನ್ನನ್ನು ಎಲ್ಲರಿಗೂ ಪರಿಚಯಿಸಿ "ಗೊತ್ತಲ್ಲ ಇವರು, ಲೀಲಮ್ಮ ಎಂದು. ಬಹಳ ಉದಾರಿಗಳು" ಎಂದೆಲ್ಲ ವಿಶೇಷಣಗಳನ್ನು ಬಳಸಿದರು. ಅವರೆಲ್ಲರೂ ಹೋದ ಮೇಲೆ "ಊರಿನ ಕಡೆ ಹೋಗಲಿಲ್ಲವೇ?" ಎಂದರು ಶ್ರೀಗಳು. "ಯಾವುದೂ ಬೇಡ ಎನಿಸಿದೆ. ಎಲ್ಲವನ್ನೂ ಮಠಕ್ಕೆ ನೀಡಿ ಸನ್ಯಾಸ ತೆಗೆದುಕೊಂಡು ಆಶ್ರಮ ಸೇರಿಕೊಳ್ಳಲು ನಿರ್ಧರಿಸಿದ್ದೇನೆ. ಈ ಆಸ್ತಿಯೆಲ್ಲ ಶ್ರೀಮಠಕ್ಕೇ ಸಲ್ಲಬೇಕು ಎಂದು ನಿರ್ಧರಿಸಿದ್ದೇನೆ" ಎಂದೆ. ಮತ್ತೆ ನನ್ನ ಬ್ಯಾಗಿನಲ್ಲಿದ್ದ ಎಲ್ಲಾ ಕಾಗದಪತ್ರಗಳನ್ನು



ತೆಗೆಯಲು ಆರಂಭಿಸುತ್ತಿದ್ದಂತೆ ಶ್ರೀಗಳು "ಒಂದು ನಿಮಿಷ. ಆ ಪತ್ರಗಳನ್ನು ತೆಗೆಯಬೇಡ, ಇರು" ಎಂದರು. ನಾನು "ಯಾಕೆ ಬುದ್ಧಿ" ಎಂದೆ. "ನಾನು ಹೇಳುವ ಮಾತುಗಳನ್ನು ಪೂರ್ತಿ ಕೇಳಿಸಿಕೋ. ಆಮೇಲೆ ಏನು ಮಾಡಬೇಕು ಎಂದು ನಿರ್ಧರಿಸೋಣ" ಎಂದರು.

ಮುಂದುವರಿದು ಅವರು ಹೇಳಿದರು : "ನೋಡು, ಜೀವ ಮತ್ತು ಜೀವನ ಎಂಬುದು ತುಂಬ ದೊಡ್ಡದು. ಭಗವಂತ ನೀಡಿದ ಬದುಕನ್ನು ನಾವು ನಮಗೆ ತೋಚಿದಂತೆ ಬಳಸಬಾರದು. ಅವನು ತೋರಿಸಿದಂತೆ ನಡೆಯಬೇಕು. ನಿನಗಿನ್ನೂ ಚಿಕ್ಕ ವಯಸ್ಸು, ದೇಹದಲ್ಲಿ ಶಕ್ತಿ, ಚೈತನ್ಯ ಎಲ್ಲ ಇದೆ. ಗಂಡನನ್ನು ಕಳೆದುಕೊಂಡ ದುಃಖದ ಭರದಲ್ಲಿ ಮನಸ್ಸು ಸಹಜವಾಗಿ ಎಲ್ಲದರ ಬಗ್ಗೆ ನಿರಾಸಕ್ತಿ ತಳೆಯುತ್ತದೆ. ವೈರಾಗ್ಯದ ಕಡೆ ಮುಖ ಮಾಡುತ್ತದೆ. ಆದರೆ ಇದನ್ನು ಅಭಾವವೈರಾಗ್ಯ ಎನ್ನುತ್ತಾರೆ. ವೈರಾಗ್ಯ ಮತ್ತು ಸನ್ಯಾಸ ಎನ್ನುವುದು ಸುಲಭವಲ್ಲ. ಅದು ಸಂಸಾರಕ್ಕಿಂತಲೂ ಕಠಿಣ. ಮತ್ತೊಂದು ಸಂಗತಿಯನ್ನು ತಿಳಿದುಕೋ. ಲೌಕಿಕ ಜಗತ್ತಿನಲ್ಲಿ ಸಂಪತ್ತಿನಿಂದಲೇ ವ್ಯಕ್ತಿಗೆ ಗೌರವ. ಹಣ ಮತ್ತು ಅಂತಸ್ತಿನಿಂದಲೇ ಎಲ್ಲ ನಿರ್ಧಾರ. ಅಂತಹುದರಲ್ಲಿ ಎಲ್ಲವನ್ನೂ ಮಠಕ್ಕೆ ನೀಡಿದರೆ ನಿನ್ನ ಪರಿಸ್ಥಿತಿ ಏನಾದೀತು? ಯಾವುದೇ ಕಾರಣಕ್ಕೂ ನಾವು ನಿನ್ನ ಆಸ್ತಿಯನ್ನು ಸ್ವೀಕರಿಸುವುದಿಲ್ಲ. ನೀನು ನಮಗಲ್ಲ, ಯಾರಿಗೂ ದಾನ ಮಾಡಬೇಡ. ಈ ಸಂಪತ್ತನ್ನು ನೀನೇ ಸದ್ವಿನಿಯೋಗ ಮಾಡು. ನಿನ್ನ ಹಾಗೂ ನಿನ್ನ ಗಂಡನ ಹೆಸರು ಶಾಶ್ವತವಾಗಿ ಉಳಿಯುವಂತೆ ಮಾಡು" ಎಂದು ಸಲಹೆ ನೀಡಿದರು. ಆಗ ನಾನು "ಸದ್ವಿನಿಯೋಗ ಆಗಲೆಂದೇ ಅಲ್ಲವೆ ಮಠಕ್ಕೆ ನೀಡುತ್ತಿರುವುದು" ಎಂದೆ. "ನೋಡು, ಎಲ್ಲವೂ ಸಮುದ್ರಕ್ಕೆ ಸೇರಿದರೆ ಅದರಿಂದ ಬಂದ ಲಾಭವೇನು? ಏನೂ ಇಲ್ಲ. ನೀನೇ ಒಂದು ಸರೋವರ ಆಗಬೇಕು. ಅದರಿಂದ ನಿನ್ನನ್ನು ಅವಲಂಬಿಸಿರುವ ಜನ ಬದುಕುತ್ತಾರೆ" ಎಂದು ತಿಳಿಹೇಳಿದರು. "ನಿನ್ನ ಮುಂದಿರುವ ವಿಶಾಲ ಜಗತ್ತಿನಲ್ಲಿ ನಿನಗಿಂತ ಬಹಳ ಜನ, ಬೇರೆ ಬೇರೆ ರೀತಿಯ ಸಂಕಷ್ಟಗಳಲ್ಲಿ ಇದ್ದಾರೆ. ಅವರನ್ನು ನೋಡು. ನೀನು ಸನ್ಯಾಸ, ವೈರಾಗ್ಯದ ಮಾತನ್ನು ಬಿಡು. ಅದು ನಮ್ಮಂಥವರಿಗೆ ಸೇರಿದ್ದು. ಜೀವನದಲ್ಲಿ ಆಸಕ್ತಿ ಕಳೆದುಕೊಳ್ಳಬೇಡ. ನಿನ್ನ ಮತ್ತು ನಿಮ್ಮ ಯಜಮಾನರ ಹೆಸರಿನಲ್ಲಿ ಒಂದು ಟ್ರಸ್ಟ್ ಮಾಡು. ಅದರ ಮೂಲಕ ಯಥಾಮತಿಯಾಗಿ ಸಮಾಜಸೇವೆ ಮಾಡು" ಎಂದರು. ಅವರ ಆ ಹಿತನುಡಿಯ ಮುಂದೆ ನನ್ನ ವೈರಾಗ್ಯದ ಅರ್ಥಹೀನತೆ ಗೊತ್ತಾಯಿತು. ಅವರ ಆಶಯದಂತೆ ಒಂದು ಟ್ರಸ್ಟ್ ಮಾಡಿದೆ, ಅದಕ್ಕೆ ಶ್ರೀಗಳನ್ನೇ ಅಧ್ಯಕ್ಷರನ್ನಾಗಿಸಿದೆ.

(ಮೇಲಿನ ಪ್ರಸಂಗದಲ್ಲಿ ಪ್ರಸ್ತಾಪಿತವಾಗಿರುವವರು ಮೈಸೂರಿನ ಒಬ್ಬರು ಮಹಿಳಾ ರಾಜಕಾರಣಿ)



ಜಾತಿ ವಿಜಾತಿ ಎನ್ನದ ಶ್ರೀಗಳು

ಬಳ್ಳಾರಿಯ ತಮ್ಮ ಮನೆಯ ಹೊರಾಂಡದಲ್ಲಿ ಕುಳಿತಿದ್ದ ಕೋ. ಚನ್ನಬಸಪ್ಪನವರ ಎದುರು ಆಲೂರಿನ ಬಡ ಮುಸ್ಲಿಂ ವಿದ್ಯಾರ್ಥಿಯೊಬ್ಬ ದೈನ್ಯದಿಂದ ನಿಂತಿದ್ದ. ಆತನಿಗೆ ಕಾಲೇಜು ಶಿಕ್ಷಣ ಪಡೆಯಬೇಕೆಂಬ ಆಸೆ. ಆದರೆ ಬಳ್ಳಾರಿಯಲ್ಲಿ ಅದು ಸಾಧ್ಯವಿಲ್ಲದ ಮಾತಾಗಿತ್ತು. ಅದಕ್ಕೆ ಎರಡು ಕಾರಣಗಳಿದ್ದವು. ಆ ಸಮಯದಲ್ಲಿ ಬಳ್ಳಾರಿಯಲ್ಲಿ ಸರ್ಕಾರಿ ಕಾಲೇಜು ಇರಲಿಲ್ಲ. ಇದ್ದ ಖಾಸಗಿ ಕಾಲೇಜಿಗೆ ಹೋಗುವಷ್ಟು ಶಕ್ತಿ ಅಬ್ದುಲ್‌ಗೆ ಇರಲಿಲ್ಲ (ಹೆಸರು ಬದಲಿಸಿದೆ). ಆಲೂರು ಕೂಡ್ಲಿಗಿ ತಾಲ್ಲೂಕಿನ ಒಂದು ಹಳ್ಳಿ. ಅಲ್ಲಿಂದ ಬಳ್ಳಾರಿಗೆ ನಿತ್ಯ ಪ್ರಯಾಣ ಮಾಡುವುದೂ ಆಗದ ಮಾತು. ಬಳ್ಳಾರಿಯಲ್ಲಿಯೇ ಉಳಿದುಕೊಳ್ಳಲು ವಿದ್ಯಾರ್ಥಿನಿಲಯಗಳಿದ್ದವಾದರೂ, ಅಲ್ಲಿ ಈತ ಮುಸ್ಲಿಮನಾದುದ ರಿಂದ ಪ್ರವೇಶಾತಿ ಸಿಗುತ್ತಿರಲಿಲ್ಲ. ಹಾಗಾಗಿ ತಮ್ಮ ಮುಂದೆ ನಿಂತ ಅಬ್ದುಲ್ಲನ ಪರಿಸ್ಥಿತಿಯನ್ನು ಕಂಡು ಚನ್ನಬಸಪ್ಪನವರಿಗೆ ಏನೊಂದೂ ತೋಚದೆ ನಾಳೆ ಬಾ, ನಾಳಿದ್ದು ಬಾ, ಎನ್ನುವುದೊಂದೇ ದಾರಿ ಉಳಿದಿತ್ತು. ಅಬ್ದುಲ್ಲನಾದರೋ ಅವರು ಹೇಳಿದ ದಿನ ಹೇಳಿದ ಸಮಯಕ್ಕೆ ಸರಿಯಾಗಿ ಅಂಗಳದಲ್ಲಿ ಹಾಜರಾಗುತ್ತಿದ್ದ.

ಅಂದು ಬಂದವನೇ ವಿನಯದಿಂದ ಯಥಾ ಪ್ರಕಾರ ಕಾಲಿಗೆ ಬಿದ್ದು "ಹ್ಯಾಂಗೆ ಮಾಡ್ಲಿ ಸಾರ್" ಎಂದು ಅದೇ ದೈನ್ಯತೆಯಿಂದ ಕೇಳಿದ. ಹಿಂದಿನ ರಾತ್ರಿಯೇ ನಾಳೆ ಅಬ್ದುಲ್ಲಾ ಬರುವುದು ಗೊತ್ತಿದ್ದರಿಂದ ಚನ್ನಬಸಪ್ಪನವರು ತಡರಾತ್ರಿಯವರೆಗೂ ಯೋಚಿಸುತ್ತಿದ್ದರು. ಕತ್ತಲಿನಲ್ಲಿ ಬೆಳಕೊಂದು ಹೊಳೆದದ್ದು ಅವರ ನೆನಪಿನಲ್ಲಿತ್ತು. ಅಬ್ದುಲ್ ಎದುರು ಬಂದು "ಹ್ಯಾಗೆ ಮಾಡ್ಲಿ ಸರ್" ಎಂದದ್ದೇ ತಡ "ಮೈಸೂರಿಗೆ ಹೋಗ್ತೀಯಾ" ಎಂದು ಕೇಳಿದರು ಚನ್ನಬಸಪ್ಪ. "ಅಲ್ಲಿ ನನಗೆ ಊಟ ವಸತಿ ಯಾರು ಕೊಡ್ತಾರೆ ಸರ್" ಎಂದ ಅಬ್ದುಲ್ಲ. "ಹೋಗೋದಾದ್ರೆ ಹೇಳು, ಸುತ್ತೂರು ಶ್ರೀಗಳು ಅಂತ ಇದ್ದಾರೆ. ಅವರಿಗೆ ಒಂದು ಕಾಗದ ಕೊಡ್ತೀನಿ. ತಗೊಂಡು ಹೋಗಿ ಕೊಡು". ಅವರು ನಮ್ಮ ಜಾತಿಯವರಿಗೆ ಸೇರಿಸಿಕೊಳ್ಳುತ್ತಾರಾ ಸರ್" ಎಂದ ಅಬ್ದುಲ್ಲ. "ನಿನಗೆ ಯಾಕೆ, ಬೇಕಾದರೆ ಹೇಳು. ಒಂದು ಕಾಗದ ಕೊಡ್ತೀನಿ. ಅದನ್ನು ಕೊಟ್ಟು ಬುದ್ದಿಗಳ ಮುಂದೆ ಉದ್ದಕ್ಕೆ ಅಡ್ಡಬೀಳು. ಕೈಕಟ್ಟಿಕೊಂಡು ನಿಂತುಕೋ, ಅಷ್ಟೇ ಸಾಕು" ಎಂದರು ಚನ್ನಬಸಪ್ಪ. ಅಬ್ದುಲ್ಲ ಅದಕ್ಕೆ ಒಪ್ಪಿದನು. ಚನ್ನಬಸಪ್ಪನವರು ಕಾಗದ ಕೊಟ್ಟರು.



ಕಾಗದ ತೆಗೆದುಕೊಂಡು ಬಂದ ಅಬ್ದುಲ್ಲನಿಗೆ ಮೈಸೂರು ಹೊಸದು. ಆದರೂ ಪರಿಚಿತ ವಿಳಾಸವಾದುದರಿಂದ ರೈಲು ಇಳಿದ ಅಬ್ದುಲ್ಲನಿಗೆ ಶ್ರೀಮಠವನ್ನು ಹುಡುಕುವುದು ಕಷ್ಟವಾಗಲಿಲ್ಲ. ಆತ ನಡೆದೇ ಶ್ರೀಮಠವನ್ನು ತಲುಪಿದ. ಆತ ತಲುಪುವ ವೇಳೆಗಾಗಲೇ ಮಧ್ಯಾಹ್ನವಾಗಿತ್ತು. ಶ್ರೀಗಳು ಇನ್ನೂ ಬರುತ್ತಿದ್ದ ಭಕ್ತರನ್ನು ನೋಡುತ್ತಿದ್ದರು. ಸರತಿಯ ಸಾಲಿನಲ್ಲಿ ನಿಂತ ಅಬ್ದುಲ್ಲನನ್ನು ಗಮನಿಸಿದ ಶ್ರೀಗಳು ಆತನ ಸರದಿ ಬರುವವರೆಗೂ ಸುಮ್ಮನಿದ್ದರು. ಅವನು ನಮಸ್ಕರಿಸುತ್ತಿದ್ದಂತೆ "ನೀನು ಎಲ್ಲಿಂದ ಬಂದಿದ್ದೀಯಾ" ಎಂದರು. ಅಬ್ದುಲ್ಲ ತಾನು ತಂದಿದ್ದ ಕಾಗದವನ್ನು ಶ್ರೀಗಳವರ ಕೈಗೆ ಕೊಟ್ಟನು. ಅವರು ತೆರೆದು ಓದುವುದಕ್ಕೆ ಮೊದಲೇ ಅಬ್ದುಲ್ಲ "ನಾನು ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲೂಕು ಆಲೂರಿನಿಂದ ಬಂದಿದ್ದೇನೆ. ಕೋ. ಚನ್ನಬಸಪ್ಪನವರು ಈ ಪತ್ರ ನೀಡಿದರು" ಎಂದ. ಅಷ್ಟರಲ್ಲಿ ಶ್ರೀಗಳು ಕಾಗದದ ಒಕ್ಕಣೆಯನ್ನೆಲ್ಲ ಓದಿದ್ದರು. "ಮಧ್ಯಾಹ್ನದ ಪ್ರಸಾದವಾಯಿತೆ" ಎಂದರು ಶ್ರೀಗಳು. ಆಗ ಅಬ್ದುಲ್ಲ "ಇಲ್ಲ ಬುದ್ಧಿ ರೈಲು ಇಳಿದು ನೇರವಾಗಿ ಇಲ್ಲಿಗೇ ಬಂದಿದ್ದೇನೆ" ಎಂದ. "ಹೋಗು, ಮೊದಲು ಪ್ರಸಾದ ಮಾಡು" ಎಂಬ ಶ್ರೀಗಳ ಮಾತು ಕೇಳಿ, "ಪ್ರಸಾದ ಮಾಡು" ಎಂದರೆ ಏನು ಮಾಡಬೇಕು ಎಂದು ತಿಳಿಯಲಿಲ್ಲ. ಆತನಿಗೆ ನಿತ್ಯ ಪ್ರಾರ್ಥನೆ ಮಾಡಿ ಗೊತ್ತಿತ್ತು. ಬಹುಶಃ ಶ್ರೀಗಳು ತನಗೆ ಮಧ್ಯಾಹ್ನದ ಪ್ರಾರ್ಥನೆ ಮಾಡಲು ಹೇಳಿದ್ದಾರೆ. ಅದು ತನಗೆ ಪ್ರಸಾದ ಎಂದು ಕೇಳಿಸಿರಬೇಕು ಎಂದು, "ಸ್ವಾಮೀಜಿ ತಾವು ಹೇಳಿದ್ದು ನನಗೆ ತಿಳಿಯಲಿಲ್ಲ" ಎಂದ. ಶ್ರೀಗಳು ತಮ್ಮ ಸಹಾಯಕರನ್ನು ಕರೆದು "ಈತ ಬಳ್ಳಾರಿಯಿಂದ ಬಂದಿದ್ದಾನೆ. ಏನೂ ತಿಂದಿಲ್ಲ, ಕರೆದುಕೊಂಡು ಹೋಗಿ ಪ್ರಸಾದ ಮಾಡಿಸಿ" ಎಂದರು.

ಅಬ್ದುಲ್ಲನನ್ನು ಕರೆದುಕೊಂಡು ಹೋದ ಸಹಾಯಕರು ಪ್ರಸಾದದ ಕೊಠಡಿಯಲ್ಲಿ "ಇಲ್ಲಿ ಕುಳಿತುಕೊಳ್ಳಿ" ಎಂದು ಹೇಳಿ ಪ್ರಸಾದದ ವ್ಯವಸ್ಥೆ ಮಾಡಿದರು. ಅಬ್ದುಲ್ಲನಿಗೆ ತನ್ನ ಎದುರು ತಟ್ಟೆಯಲ್ಲಿ ಪ್ರಸಾದ ಬೀಳುತ್ತಿರುವುದನ್ನು ನೋಡಿ ಒಮ್ಮೆಲೇ ಕಣ್ಣೀರು ಆವರಿಸಿತ್ತು. ಪ್ರತಿನಿತ್ಯ ತನ್ನ ತಾಯಿ ತನಗಾಗಿ ಕಾಯ್ದುಕೊಂಡು ಊಟ ಬಡಿಸುತ್ತಿದ್ದುದು ನೆನಪಾಯಿತು. ನನ್ನ ಹಸಿವನ್ನು ಅರಿತುಕೊಂಡು ಪ್ರಸಾದಕ್ಕೆ ವ್ಯವಸ್ಥೆ ಮಾಡಿಸಿದ ಶ್ರೀಗಳ ಬಗ್ಗೆ ಅವ್ಯಕ್ತ ಭಕ್ತಿಭಾವ ಆತನ ಮನಸ್ಸನ್ನು ತುಂಬಿತು. ನನ್ನ ಅನಂತಕಾಲದ ಪ್ರಾರ್ಥನೆಯಿಂದ ಪ್ರತ್ಯಕ್ಷರಾದ "ಅಲ್ಲಾ"ನೇ ಇವರೆಂದು ಮನಸ್ಸಿನಲ್ಲಿ ಅಂದುಕೊಂಡ. ಹಸಿದ ತನಗೆ ಊಟ ಹಾಕಿದ ಶ್ರೀಗಳು ನನಗೆ ವಿದ್ಯಾರ್ಥಿನಿಲಯದಲ್ಲಿ ಪ್ರವೇಶ ನೀಡಿದರೆ ಸಾಕೆಂದು ಪ್ರಾರ್ಥಿಸತೊಡಗಿದನು. ಪ್ರಸಾದ ಮುಗಿಸಿ ಬಂದ ಅಬ್ದುಲ್ಲನ



ಕೈಗೆ ಒಂದು ಸಣ್ಣ ಚೀಟಿಯನ್ನು ನೀಡಿದ ಶ್ರೀಗಳು "ಇದನ್ನು ಚಾಮರಾಜಪುರಂನ ಹಾಸ್ಟೆಲ್ ಮ್ಯಾನೇಜರ್‌ಗೆ ನೀಡು, ನಿನಗೆ ಸೀಟು ಕೊಡುತ್ತಾರೆ" ಎಂದರು.

ಆ ಚೀಟಿಯಲ್ಲಿ "ಈ ಚೀಟಿ ತರುವಾತನನ್ನು ಸೇರಿಸಿಕೊಳ್ಳುವುದು" ಎಂದು, ಜೊತೆಗೆ ಇಂಗ್ಲಿಷಿನಲ್ಲಿ 'FF' ಎಂದು ಬರೆದಿದ್ದರು. ಅದಲ್ಲದೆ "ನೀನು ಯಾವ ಕಾಲೇಜಿಗೆ ಸೇರಿದ್ದೀಯಾ" ಎಂದರು. "ಚನ್ನಬಸಪ್ಪನವರು ಮಹಾರಾಜ ಕಾಲೇಜಿನಲ್ಲಿ ಬಿ.ಎ. ಓದಲು ಸೇರಿಸಿದ್ದಾರೆ" ಎಂದ ಅಬ್ದುಲ್ಲ. "ಒಳ್ಳೆಯದಾಗಲಿ" ಎಂದ ಶ್ರೀಗಳು, ಮುಂದಿನ ಭಕ್ತರೊಂದಿಗೆ ಮಾತನಾಡತೊಡಗಿದರು. ಸುಮ್ಮನೆ ನಿಂತಿದ್ದ ಅಬ್ದುಲ್ಲನನ್ನು ನೋಡಿ ಶ್ರೀಗಳು "ಯಾಕೆ ನಿಂತಿದ್ದೀಯಾ, ಚೀಟಿ ತೆಗೆದುಕೊಂಡು ಹೋಗಿ ಕೊಡು" ಎಂದರು. ಚೀಟಿ ಹಿಡಿದು ವಿದ್ಯಾರ್ಥಿನಿಲಯಕ್ಕೆ ಹೋಗಿ ಮ್ಯಾನೇಜರ್ ಅವರಿಗೆ ಚೀಟಿ ಕೊಟ್ಟ. ಅದನ್ನು ನೋಡಿ "ಯಾವೂರು" ಎಂದರು. "ಬಳ್ಳಾರಿ" ಎಂದ ಅಬ್ದುಲ್ಲ. "ಪರವಾಗಿಲ್ಲ, ಪುಣ್ಯವಂತ ನೀನು, ಶ್ರೀಗಳು 'FF' ಎಂದು ಬರೆದಿದ್ದಾರೆ" ಎಂದರು. "ಹಾಗೆಂದರೇನು ಸರ್" ಎಂದ ಅಬ್ದುಲ್ಲ. "ಫುಲ್ ಫ್ರೀ ಶಿಪ್, ಅದೃಷ್ಟವಂತ ನೀನು" ಎಂದು ಮ್ಯಾನೇಜರು ಅವನನ್ನು ದಾಖಲು ಮಾಡಿಕೊಂಡು ರೂಂ ತೋರಿಸಿದರು.

ಆ ಸಮಯದಲ್ಲಿ ರೂಮಿನಲ್ಲಿದ್ದ ಎಲ್ಲ ವಿದ್ಯಾರ್ಥಿಗಳೂ ಕಾಲೇಜಿಗೆ ಹೋಗಿದ್ದರಿಂದ ಅಬ್ದುಲ್ಲ ಒಬ್ಬನೇ ಇರುವಂತಾಯಿತು. ರೂಮ್‌ನ ಬಾಗಿಲು ಹಾಕಿಕೊಂಡು ಪಶ್ಚಿಮಕ್ಕೆ ತಿರುಗಿ ಮಂಡಿಯೂರಿ "ಅಲ್ಲಾ ಇರುವನೆಂದು ನಾನು ಇದುವರೆಗೂ ಪ್ರಾರ್ಥಿಸುತ್ತಿದ್ದೆ, ಆದರೆ ನೋಡಿರಲಿಲ್ಲ. ಇಂದು ನೋಡಿದ್ದೇನೆ. ಭಗವಂತ ನಮಗಾಗಿ ಭೂಮಿಯಲ್ಲಿ ಅವತರಿಸಿ ನಮ್ಮ ಕಷ್ಟ ನಿವಾರಿಸುತ್ತಾನೆ ಎನ್ನುತ್ತಿದ್ದರು. ನಾನು ಭಗವಂತನನ್ನು ಇಂದು ಕಾಣುವಂತಾಯಿತು" ಎಂದು ಶ್ರೀಗಳನ್ನು ಸ್ತುತಿಸುತ್ತಾ, ಕಣ್ಣೀರು ಸುರಿಸುತ್ತಿದ್ದ. ಅಂದಿನಿಂದ ಅಬ್ದುಲ್ಲನ ಪಾಲಿಗೆ ಶ್ರೀಗಳೇ ದೇವರಾದರು. ಆತ ಬಿ.ಎ. ಮುಗಿಸಿ ತನ್ನ ಊರಿಗೆ ತೆರಳಿದನು. ಕನ್ನಡದ ಒಳ್ಳೆಯ ಸಾಹಿತಿಯೂ ಆದನು.

❑



ಹೊನ್ನು ಹೊರೆ

ಅಂದು ಬೆಳಗ್ಗೆ ಪತ್ರಿಕೆಯನ್ನು ಓದುತ್ತಿದ್ದ, ಪರಮಪೂಜ್ಯ ರಾಜೇಂದ್ರ ಶ್ರೀಗಳಿಗೆ ಅದರಲ್ಲಿದ್ದ ಜಾಹೀರಾತು ಗಮನ ಸೆಳೆಯಿತು. ಚಾಮರಾಜಪುರಂನ ಮುಖ್ಯರಸ್ತೆಯಲ್ಲಿ ಇದ್ದ "ಶ್ರೀ ಡಿ. ಬನುಮಯ್ಯ ಅವರ ಕಟ್ಟಡವೊಂದು ಮಾರಾಟಕ್ಕಿದೆ" ಎನ್ನುವುದು ಆ ಜಾಹೀರಾತಿನ ಒಕ್ಕಣೆ. ಅದನ್ನು ನೋಡುತ್ತಿದ್ದಂತೆ ಶ್ರೀಗಳ ಮನಃಪಟಲದಲ್ಲಿ ಮಿಂಚೊಂದು ಹಾಯ್ದು ಹೋದಂತಾಯಿತು. ಕ್ಷಣಕಾಲ ಚಿಂತನೆಯಲ್ಲಿ ತೊಡಗಿದರು. ಆ ಸಮಯಕ್ಕೆ ಸರಿಯಾಗಿ ಗುಂಡ್ಲುಪೇಟೆ ತಾಲ್ಲೂಕು ಬೇಗೂರಿನ ನಿಟ್ರೆ ಸುಬ್ಬಣ್ಣನವರು ಆಗಮಿಸಿ, ಶ್ರೀಗಳವರಿಗೆ ನಮಸ್ಕರಿಸಿದರು. ಶ್ರೀಗಳು ಕೈಯಲ್ಲಿದ್ದ ಪತ್ರಿಕೆಯನ್ನು ಪಕ್ಕಕ್ಕಿಟ್ಟು, "ಈಗ ಬಂದೆಯಾ, ಹೋಗು, ಪ್ರಸಾದ ಮಾಡು" ಎಂದರು. ಬಸಪ್ಪನವರು "ಮನೆಯಲ್ಲಿಯೇ ಆಯ್ತು ಬುದ್ಧಿ. ಬೆಂಗಳೂರಿಗೆ ಹೋಗುತ್ತಿದ್ದೆ. ತಮ್ಮ ದರ್ಶನ ಮಾಡಿ ಹೋಗೋಣ ಎಂದು ಬಂದೆ, ಅಷ್ಟೆ" ಎಂದರು. "ಹೌದೇ, ಮನೆಯಲ್ಲಿ ಎಲ್ಲರೂ ಕ್ಷೇಮವೇ" ಎಂಬ ಉಭಯಕುಶಲೋಪರಿ ಸಾಂಪ್ರತ ನಡೆಯಿತು. ಮಾತಿನ ನಡುವೆ ಶ್ರೀಗಳು ಅನ್ಯ ಮನಸ್ಕರಾಗಿರುವುದನ್ನು ಗುರುತಿಸಿದ ಸುಬ್ಬಣ್ಣನವರು, "ತಾವು ಏನೋ ಯೋಚನೆಯಲ್ಲಿ ಇರುವಂತಿದೆಯಲ್ಲ ಬುದ್ಧಿ" ಎಂದರು.

"ಹೌದು ಸುಬ್ಬಣ್ಣ, ನಾವು ಈಗ ಸಾಹುಕಾರ ಸಿದ್ದಲಿಂಗಯ್ಯನವರು ಶ್ರೀಮಠಕ್ಕೆ ನೀಡಿದ ಕಟ್ಟಡದಲ್ಲಿ ವಿದ್ಯಾರ್ಥಿನಿಲಯವನ್ನು ನಡೆಸುತ್ತಿದ್ದೇವೆ. ಈ ವಿಷಯ ನಿನಗೂ ಗೊತ್ತು. ಅಲ್ಲಿ ದಿನೇದಿನೇ ವಿದ್ಯಾರ್ಥಿಗಳ ಸಂಖ್ಯೆ ಅಧಿಕವಾಗುತ್ತಿದೆ. ಓದಲು ಅಪೇಕ್ಷಿಸಿ, ಆಶ್ರಯ ಬಯಸಿ ಬರುವವರ ಸಂಖ್ಯೆ ಹೆಚ್ಚುತ್ತಿದೆ. ಅದೂ ಅಲ್ಲದೆ ಶ್ರೀಮಠದ್ದೇ ಆದ ಒಂದು ಸ್ವಂತ ಕಟ್ಟಡ ಇರಬೇಕು ಎನ್ನಿಸುತ್ತಿದೆ" ಎಂದರು. ಸುಬ್ಬಣ್ಣನವರು "ಒಳ್ಳೆಯ ವಿಚಾರವೇ ಬುದ್ಧಿ, ತಮ್ಮ ಮನಸ್ಸಿಗೆ ಈ ಸಂಗತಿ ಬಂದಿದೆ ಎಂದ ಮೇಲೆ ಅದು ಆಗಿಯೇ ತೀರುತ್ತದೆ" ಎಂದರು. ಮುಂದುವರೆದು "ಇದಕ್ಕಾಗಿ ಯಾವುದಾದರೂ ಜಾಗವನ್ನು ನೋಡಿದ್ದೀರಾ?" ಎಂದರು ಸುಬ್ಬಣ್ಣನವರು. "ಹಾಗೇನೂ ಇಲ್ಲ. ಇಂದಿನ ಪತ್ರಿಕೆಯಲ್ಲಿ ಚಾಮರಾಜಪುರಂನಲ್ಲಿರುವ ಒಂದು ಕಟ್ಟಡವನ್ನು ಬನುಮಯ್ಯನವರು ಮಾರಾಟ ಮಾಡುವುದಾಗಿ ಬಂದಿದೆ. ಆ ಕಟ್ಟಡವನ್ನು ನೀನೂ ನೋಡಿದ್ದೀಯಲ್ಲಾ, ಚೆನ್ನಾಗಿದೆ. ಅದೂ ಅಲ್ಲದೆ ಅದರ ಹಿಂಭಾಗದಲ್ಲಿ ವಿಸ್ತಾರವಾದ ಖಾಲಿ ಜಾಗವೂ ಇದೆ. ವಿದ್ಯಾರ್ಥಿನಿಲಯಕ್ಕೆ ಸೂಕ್ತವಾಗಿದೆ" ಎಂದರು ಶ್ರೀಗಳು. "ಹೌದು ಬುದ್ಧಿ



ನಾನೂ ಆ ಕಟ್ಟಡವನ್ನು ನೋಡಿದ್ದೇನೆ. ಸೊಗಸಾಗಿದೆ. ಕೊಂಡುಕೊಳ್ಳುವುದು ಒಳ್ಳೆಯದೆ". "ನಿಜ ಸುಬ್ಬಣ್ಣ, ಆದರೆ ಅದಕ್ಕೆ ಬೇಕಾದಷ್ಟು ಹಣ ನಮ್ಮ ಬಳಿ ಇಲ್ಲ, ಏನು ಮಾಡಬಹುದು ಎಂದೂ ತೋಚುತ್ತಿಲ್ಲ" ಎಂದು ತಮ್ಮ ಅಂಗವಸ್ತ್ರವನ್ನು ಸರಿಪಡಿಸಿಕೊಳ್ಳಲು ಕೈಹಾಕಿದರು; ತಟ್ಟನೆ ನೆನಪಿಗೆ ಬಂದದ್ದು ಎದೆಯ ಮೇಲಿದ್ದ ಚಿನ್ನದ ಕರಡಿಗೆ.

ಈ ಹಿಂದೆಯೇ ಒಮ್ಮೆ ಚಿನ್ನದ ಕರಡಿಗೆಯನ್ನು ವಿದ್ಯಾರ್ಥಿನಿಲಯದ ನಿರ್ವಹಣೆಗಾಗಿ ಮಾರಿದ ಸಂಗತಿ ಜನಜನಿತವಾಗಿತ್ತು. ಈ ವಿಷಯ ತಿಳಿದ ನಿಟ್ರೆ ಸುಬ್ಬಣ್ಣನವರ ಚಿಕ್ಕಪ್ಪ ಶ್ರೀ ಮಲ್ಲಿಕಾರ್ಜುನಪ್ಪನವರು ಹೊಸ ಚಿನ್ನದ ಕರಡಿಗೆಯನ್ನು ಮಾಡಿಸಿ ಶ್ರೀಗಳಿಗೆ ನೀಡಿದ್ದರು. ಮಲ್ಲಿಕಾರ್ಜುನಪ್ಪನವರು ಬಂದೀಖಾನೆಯ ಅಧೀಕ್ಷಕರಾಗಿದ್ದರು. ಮುಂದೆ ಇವರೇ ಶ್ರೀಗಳಿಗೆ ಬೆಳ್ಳಿಯ ಕಿರೀಟವನ್ನೂ ಮಾಡಿಸಿಕೊಟ್ಟಿದ್ದರು. ಅವರು ಚಿನ್ನದ ಕರಡಿಗೆ ನೀಡಿದಾಗ ಶ್ರೀಗಳು ಅದನ್ನು ನಿರಾಕರಿಸಿದ್ದರು. ಆಗ ಮಲ್ಲಿಕಾರ್ಜುನಪ್ಪನವರು "ಬುದ್ಧಿ, ತಾವು ಬೇಡ ಅನ್ನಬಾರದು. ದಯಮಾಡಿ ಸ್ವೀಕರಿಸಬೇಕು. ದೊಡ್ಡ ಗುರುಗಳು ಚಿನ್ನದ ಕರಡಿಗೆ ನೀಡಿದ್ದರಿಂದ ತಾನೇ ತಾವು ಅದನ್ನು ಮಾರಿ, ಹಸಿದ ಮಕ್ಕಳಿಗೆ ಅನ್ನ ಹಾಕಿದಿರಿ, ಇದೂ ಅಂಥದೇ ಸಂದರ್ಭಕ್ಕೆ ಒದಗಬಹುದು" ಎಂದು ಒತ್ತಾಯ ಮಾಡಿ ನೀಡಿದ್ದರು.

ಹಾಗೆ ಒತ್ತಾಯ ಮಾಡಿ ನೀಡುವಾಗ, ಬಹುಶಃ ಮಲ್ಲಿಕಾರ್ಜುನಪ್ಪನವರು, ತಮ್ಮ ಮಾತು ಮುಂದೊಮ್ಮೆ ನಿಜವಾಗಬಹುದು ಎಂದು ಎಣಿಸಿರಲಿಕ್ಕಿಲ್ಲ. ರೂಢಿಯಂತೆ ಆಡಿದ್ದ ಮಾತದು. ಶ್ರೀಗಳವರು ನಿಟ್ರೆ ಸುಬ್ಬಣ್ಣನವರ ಜೊತೆ ಬನುಮಯ್ಯನವರ ಆ ಜಾಗವನ್ನು ಕೊಂಡುಕೊಳ್ಳಲು ಸಮಾಲೋಚಿಸಿ, ಬಳಿಕ ಚಿನ್ನದ ಕರಡಿಗೆಯನ್ನು ಮುಟ್ಟಿ, ಏನೋ ಹೊಳೆದಂತೆ ಆಗಿ, "ಸುಬ್ಬಣ್ಣ, ನಿನಗೆ ಒಂದು ಕೆಲಸ ವಹಿಸುತ್ತೇನೆ. ಚಾಚೂ ತಪ್ಪದೆ ಮಾಡಬೇಕು. ಮತ್ತೆ ಇದನ್ನು ಯಾರಿಗೂ ಹೇಳಬಾರದು. ಹಾಗಂತ ಪ್ರಮಾಣ ಮಾಡು" ಎಂದರು. ಸುಬ್ಬಣ್ಣನವರು ಏನೂ ಯೋಚಿಸದೆ "ಆಯ್ತು ಬುದ್ಧಿ, ತಮ್ಮ ಪಾದಸಾಕ್ಷಿಯಾಗಿಯೂ ಯಾರಿಗೂ ಹೇಳುವುದಿಲ್ಲ" ಎಂದರು. "ನೋಡು, ಈ ಕರಡಿಗೆ ತೆಗೆದುಕೋ. ಇದು ನಿಮ್ಮ ಚಿಕ್ಕಪ್ಪ ಮಾಡಿಸಿಕೊಟ್ಟಿದ್ದು. ಇದನ್ನು ಎಲ್ಲಿಯಾದರೂ ಅಡವಿಟ್ಟು, ಸಾಧ್ಯವಾದಷ್ಟೂ ಹೆಚ್ಚಿಗೆ ಹಣ ಪಡೆದುಕೊಂಡು ಬಾ, ಈ ಕಟ್ಟಡವನ್ನು ಕೊಂಡುಕೊಳ್ಳಲು ಮುಂಗಡ ಕೊಡೋಣ" ಎಂದರು. ಶ್ರೀಗಳವರ ಮಾತು ಕೇಳಿ ಸುಬ್ಬಣ್ಣನವರು ಭಾವುಕರಾದರು. ಆದರೆ ಗತ್ಯಂತರವಿಲ್ಲದೆ "ಆಯ್ತು ಬುದ್ಧಿ" ಎಂದು ಕರಡಿಗೆಯನ್ನು ಸ್ವೀಕರಿಸಿ ತೆರಳಿದರು.



ಸುಬ್ಬಣ್ಣನವರು ಸ್ಥಿತಿವಂತರೂ ಆಗಿದ್ದರಿಂದ, ಅವರಿಗೆ ಕೃಷ್ಣರಾಜ ವೃತ್ತದಲ್ಲಿದ್ದ ಆಭರಣದಂಗಡಿಯ ಶ್ರೀ ಎ. ಶಂಕರಶೆಟ್ಟಿ ಮತ್ತು ಅವರ ಸಹೋದರರಾದ ಶ್ರೀ ರಾಮಶೆಟ್ಟಿ ಮತ್ತು ಕೃಷ್ಣಯ್ಯಶೆಟ್ಟಿ ಸ್ನೇಹಿತರಾಗಿದ್ದರು. ವಿರಾಮದ ಕಾಲದಲ್ಲಿ ಅವರ ಅಂಗಡಿಯಲ್ಲಿ ಕಾಲ ಕಳೆಯುತ್ತಿದ್ದರು. ಆ ಅಂಗಡಿಗೆ ತೆರಳಿದ ಸುಬ್ಬಣ್ಣನವರು ಕರಡಿಗೆಯನ್ನು ಶಂಕರಶೆಟ್ಟಿಯವರಿಗೆ ನೀಡಿ "ಇದನ್ನು ಗಿರವಿ ಇರಿಸಿಕೊಂಡು ಹಣ ನೀಡಿ" ಎಂದರು. ಶಂಕರಶೆಟ್ಟಿಯವರು "ಅಯ್ಯೋ ಸುಬ್ಬಣ್ಣನವರೆ, ಇದೇಕೆ ಹೀಗೆ ಮಾಡುತ್ತಿದ್ದೀರಿ. ಬೇಕಾಗಿದ್ದರೆ ಹಣ ಪಡೆದು ಅನಂತರ ಹಣ ಹಿಂದಿರುಗಿಸಿ. ದೇವರನ್ನು ಇಡುವ ಕರಡಿಗೆಯನ್ನು ಗಿರವಿ ಇಡುವುದೆ, ಬೇಡ" ಎಂದರು.

ಸುಬ್ಬಣ್ಣನವರು ಒಂದು ಕ್ಷಣ ಮೈಮರೆತು "ಇದು ನಮ್ಮದಲ್ಲ" ಎಂದುಬಿಟ್ಟರು. "ಮತ್ತೆ ಯಾರದ್ದು" ಎಂದರು ಶೆಟ್ಟರು. "ಅದನ್ನು ಹೇಳುವಂತಿಲ್ಲ. ಯಾರಿಗೂ ಹೇಳಬೇಡಿ ಎಂದು ಇದನ್ನು ಕೊಟ್ಟವರು ನನ್ನಿಂದ ಮಾತು ತೆಗೆದುಕೊಂಡಿದ್ದಾರೆ. ಆದುದರಿಂದ ಅವರ ಹೆಸರನ್ನು ಹೇಳುವುದಿಲ್ಲ. ಆದರೆ ತಾವು ಕೊಡುವ ಹಣ ಖಂಡಿತವಾಗಿ ಒಂದು ಧರ್ಮಕಾರ್ಯಕ್ಕೆ ಬಳಕೆಯಾಗುತ್ತದೆ" ಎಂದರು ಸುಬ್ಬಣ್ಣನವರು. "ಆಯಿತು" ಎಂದು 4,000 ರೂಪಾಯಿಗಳನ್ನು ನೀಡಿದರು, ಶೆಟ್ಟರು. ಮುಂದುವರೆದು "ವಾಸ್ತವವಾಗಿ ಇದಕ್ಕೆ 2,000 ಮಾತ್ರ ಕೊಡಬಹುದು. ನೀವು ಪರಿಚಯಸ್ಥರು, ಧರ್ಮಕಾರ್ಯಕ್ಕೆ ಎಂದು ಬೇರೆ ಕೇಳುತ್ತಿದ್ದೀರಿ. ಹೆಚ್ಚಿನ ಹಣ ಬೇಕು ಎಂದಿದ್ದೀರಿ. ಅದಕ್ಕಾಗಿ ಇಷ್ಟು ಹಣ ನೀಡುತ್ತಿದ್ದೇನೆ. ಅದರೂ ಕೇಳುತ್ತೇನೆ. ಈ ಕರಡಿಗೆ ಇದರ ತೂಕ, ಇದನ್ನು ಗಿರವಿ ಇಡುತ್ತಿರುವುದು ನೋಡಿದರೆ ಇದು ಸುತ್ತೂರು ಸ್ವಾಮಿಗಳದ್ದೇ ಇರಬಹುದು ಎಂದು ನನಗೆ ಅನುಮಾನ" ಎಂದರು. ಸುಬ್ಬಣ್ಣನವರಿಗೆ ಏನು ಹೇಳಬೇಕೆಂದು ತೋಚಲಿಲ್ಲ. ಸುಳ್ಳು ಹೇಳುವಂತೆಯೂ ಇರಲಿಲ್ಲ. ನಿಜವನ್ನು ಹೇಳಲೂ ಆಗುತ್ತಿರಲಿಲ್ಲ. "ಅದೆಲ್ಲ ನಿಮಗೇಕೆ? ಈ ಕರಡಿಗೆಯನ್ನು ಹಾಗೇ ಇಡಿ. ಬಿಡಿಸಿಕೊಳ್ಳುತ್ತೇವೆ" ಎಂದರು. ಶೆಟ್ಟರು ನಕ್ಕು "ನೋಡಿ ಸುಬ್ಬಣ್ಣನವರೆ ನಿಮ್ಮ ಮುಖವೇ ನಿಜ ಹೇಳುತ್ತಿದೆ. ಇದು ಸುತ್ತೂರು ಶ್ರೀಗಳದ್ದೇ" ಎಂದು ಹೇಳಿ, "ಹೋಗಲಿ ಬಿಡಿ. ನನಗೂ ಇದು ಸಂತೋಷವೆ. ಧರ್ಮಕಾರ್ಯದಲ್ಲಿ ನನ್ನದೂ ಸ್ವಲ್ಪ ಪುಣ್ಯ ಇರುತ್ತದೆ" ಎಂದು, ಸುತ್ತೂರು ಸ್ವಾಮಿಗಳನ್ನು ಬಿಟ್ಟರೆ ಯಾರು ತಾನೇ ಚಿನ್ನವನ್ನು, ಅದರಲ್ಲೂ ಕರಡಿಗೆಯನ್ನು, ಹೀಗೆ ಕಾಣಲು ಸಾಧ್ಯ? ಅಂಥವರು ಇರುವುದರಿಂದಲೇ ಇನ್ನೂ ಮಳೆ–ಬೆಳೆ ಚೆನ್ನಾಗಿ ಆಗುತ್ತಿದೆ" ಎನ್ನುತ್ತ, ನಿಂತಲ್ಲೇ ಶ್ರೀಗಳಿಗೆ ಕೈ ಮುಗಿದರು.

❑



ಬಂಗಾರ ಸ್ವಾಮಿ

ಆಗಿನ್ನೂ ಮೈಸೂರು ರಾಜ್ಯ ಕರ್ನಾಟಕವಾಗಿರಲಿಲ್ಲ. ಅಕ್ಟೋಬರ್ 1962 . ದೇಶದಲ್ಲಿ ಯುದ್ಧದ ವಾತಾವರಣ. ಚೀನಾ ದೇಶ ಭಾರತದ ಮೇಲೆ ಏಕಾಏಕಿ ಯುದ್ಧ ಸಾರಿತ್ತು. ಈ ಯುದ್ಧದ ಮುನ್ಸೂಚನೆಯನ್ನು ಅರಿತಿದ್ದ ಮಹರ್ಷಿ ಅರವಿಂದರು 1950 ಸೆಪ್ಟೆಂಬರ್‌ನಲ್ಲಿ ಹೇಳಿದ್ದರು: "ಕಮ್ಯೂನಿಸ್ಟ್ ಚೀನಾದಿಂದ ಭರತಖಂಡಕ್ಕೆ ಬಂದೊದಗಬಹುದಾದ ವಿಪತ್ತನ್ನು ಭಾರತೀಯರು ಅರಿಯಬೇಕು. ಅವರು ಟಿಬೆಟ್ ಮೇಲೆ ದಾಳಿ ಮಾಡಿ ತರುವಾಯ ಅಸ್ಸಾಂ ಮಾರ್ಗವಾಗಿ ನಮ್ಮ ದೇಶದ ಮೇಲೆ ದಾಳಿ ನಡೆಸಬಹುದು". ಅರವಿಂದರು ಭವಿಷ್ಯ ನುಡಿದ ಒಂಬತ್ತು ವರ್ಷಗಳ ನಂತರ, ಅಂದರೆ 1959ರಲ್ಲಿ, ಚೀನಾ ಟಿಬೆಟ್‌ನಲ್ಲಿ ದೊಡ್ಡ ಸೇನಾಕ್ರಾಂತಿಯನ್ನು ನಡೆಸಿತು. ಅಲ್ಲಿನ ಬೌದ್ಧ ಧರ್ಮಗುರು ದಲೈಲಾಮಾ ನಿರಾಶ್ರಿತರಾದರು. ಅವರಿಗೆ ಭಾರತ ರಾಜಕೀಯ ಆಶ್ರಯ ನೀಡಿತು. ಇದರಿಂದ ಕೆರಳಿ ಕೆಂಡವಾದ ಚೀನಾ ಭಾರತದ ಮೇಲೆ ಆಕ್ರಮಣ ಮಾಡಿತು. ಆರ್ಥಿಕವಾಗಿ ಸಶಕ್ತವಾಗಿದ್ದ ಚೀನಾ, ಬಡ ಭಾರತದೊಡನೆ ಹೋರಾಡಲು ನಿಂತಿತು.

ಒಂದು ದೇಶದ ನಿಜವಾದ ಶಕ್ತಿಯಿರುವುದು ಅಲ್ಲಿನ ಸೈನ್ಯ, ಜನಸಂಖ್ಯೆ, ಸಾಧನ–ಸಲಕರಣೆಗಳಿಂದಲ್ಲ. ಬದಲಿಗೆ ಆ ದೇಶವಾಸಿಗಳ ಆತ್ಮಶಕ್ತಿಯ ಮೇಲೆ. ಗೆಲುವು ಮತ್ತು ಸಾವು ಮಾತ್ರವೇ ಎಂದು ನಿರ್ಧರಿಸಿದವರಿಗೆ ಸೋಲುವ ಭೀತಿಯಲ್ಲಿ! ಅಂತಹ ಅಸೀಮ ಆತ್ಮಸ್ಥೈರ್ಯ ಪ್ರತಿಯೊಬ್ಬ ಭಾರತೀಯ ಸೈನಿಕರಿಗೂ ಇತ್ತು. ಚೀನಾ ಸ್ವತಃ ಯುದ್ಧವನ್ನು ನಿಲ್ಲಿಸಿತು, ಶಾಂತಿ ಸಂಧಾನ ಏರ್ಪಟ್ಟಿತು. ಆದರೆ ಈ ಯುದ್ಧ ದೇಶದ ಶ್ರೀಸಾಮಾನ್ಯರಲ್ಲಿ ಅಸಾಧಾರಣ ರಾಷ್ಟ್ರಪ್ರೇಮವನ್ನು ಬಡಿದೆಬ್ಬಿಸಿತು. ಅಂಥದೊಂದು ಅಪೂರ್ವ ಕ್ಷಣಕ್ಕೆ ದೇಶದ ಸಾಂಸ್ಕೃತಿಕ ರಾಜಧಾನಿಯಾದ ಮೈಸೂರು ನಗರ ಸಾಕ್ಷಿಯಾಯಿತು.

ಅದೊಂದು ಸಾರ್ವಜನಿಕ ಸಮಾರಂಭ. ಸಭೆಯ ದಿವ್ಯ ಸಾನ್ನಿಧ್ಯವನ್ನು ಸುತ್ತೂರು ಶ್ರೀಮಠದ ಪರಮಪೂಜ್ಯ ಮಂತ್ರಮಹರ್ಷಿಗಳು ಹಾಗೂ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ವಹಿಸಿದ್ದರು. ಅಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎಸ್. ನಿಜಲಿಂಗಪ್ಪನವರು ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತ, ದೇಶಕ್ಕೆ ಬಂದೆರಗಿದ



ಯುದ್ಧಭೀತಿ, ನಾಗರಿಕರು ಮಾಡಬೇಕಾದ ಕರ್ತವ್ಯಗಳ ಬಗ್ಗೆ ಸುದೀರ್ಘವಾಗಿ ಮಾತನಾಡಿದರು. "ದೇಶದ ಆರ್ಥಿಕತೆಯ ಅಭಿವೃದ್ಧಿಗಾಗಿ ಎಲ್ಲರೂ ತಮ್ಮ ಕೈಲಾದ ಸಹಾಯ ನೀಡಿ" ಎಂದು ಸಭಿಕರಲ್ಲಿ ವಿನಂತಿಸಿದರು.

ಮಂತ್ರಮಹರ್ಷಿಗಳು ರಾಜೇಂದ್ರ ಶ್ರೀಗಳಿಗೆ ಆಶೀರ್ವಚನ ಭಾಷಣ ಮಾಡುವಂತೆ ಸೂಚನೆಯನ್ನಿತ್ತರು. ಶ್ರೀಗಳವರು ಮಾತನಾಡುತ್ತಾ "ರಾಜಕಾರಣಿಗಳಿಗೆ ಇದು ಸ್ವಾತಂತ್ರ್ಯದ ಪ್ರಶ್ನೆ, ವ್ಯಾಪಾರಿಗಳಿಗೆ ವಹಿವಾಟಿನ ಪ್ರಶ್ನೆ, ಒಬ್ಬೊಬ್ಬರಿಗೆ ಒಂದೊಂದು ದೃಷ್ಟಿಯಲ್ಲಿ ಈ ಪ್ರಶ್ನೆ ಮಹತ್ವದ್ದು. ಆದರೆ ನಮ್ಮ ದೃಷ್ಟಿಯಲ್ಲಿ ಇದು ಆರ್ಷೇಯ ಧರ್ಮದ ಅಳಿವು–ಉಳಿವಿನ ಪ್ರಶ್ನೆ. ಈ ದೇಶ ಉಳಿದರೆ ಧರ್ಮ ಉಳಿದೀತು. ಇಲ್ಲದಿದ್ದರೆ ನಮ್ಮ ಗುಡಿ–ಗೋಪುರಗಳು, ಮಠ–ಮಾನ್ಯಗಳು ಫ್ಯಾಕ್ಟರಿಗಳೋ, ಶಸ್ತ್ರಾಗಾರಗಳೋ ಆಗಿಹೋಗುತ್ತವೆ. ಜೀವ ಇದ್ದರೆ ತಾನೆ ದೇಹಕ್ಕೆ ಬೆಲೆ. ಧರ್ಮ ಎಂಬುದು ನಮ್ಮ ರಾಷ್ಟ್ರದ ಆತ್ಮ. ಧರ್ಮ ಉಳಿದರೆ ದೇಶ ಬದುಕುತ್ತದೆ. ಈ ದಾಳಿ ಬೇರೆಯವರಿಗಿಂತಲೂ ನಮಗೆ ಹೆಚ್ಚು ಮಹತ್ವದ್ದು ಎಂದರು. ಸಭಿಕರೊಬ್ಬರು ಎದ್ದು ನಿಂತು "ಈ ವಿಪತ್ತನ್ನು ನಿವಾರಿಸಲು ನಮಗೆ ಫ್ಯಾಕ್ಟರಿಗಳು, ಶಸ್ತ್ರಾಗಾರಗಳೂ ಬೇಕಲ್ಲವೆ, ಬುದ್ಧಿ" ಎಂದರು. ಆಗ ಜಗದ್ಗುರುಗಳು "ಹೌದು, ತಾವು ಹೇಳುವ ಮಾತೂ ಸತ್ಯವೇ. ಕಾರ್ಖಾನೆಗಳು ಹೆಚ್ಚುಹೆಚ್ಚಾಗಿ ಸ್ಥಾಪನೆಯಾಗಿ, ಜನರಿಗೆ ಉದ್ಯೋಗ ದೊರೆತು, ದೇಶದ ಆರ್ಥಿಕ ಅಭಿವೃದ್ಧಿಗೆ ದಾರಿಯಾಗಬೇಕು. ಹಾಗೆಯೇ ದೇಶದಲ್ಲಿ ಶಾಂತಿ ನೆಮ್ಮದಿ ಸಹಬಾಳ್ವೆ ನೆಲೆಸಬೇಕಾದರೆ ಮಠಗಳು ಬೇಕು. ಮಠಗಳು, ಧರ್ಮ ಇಲ್ಲದ ಕಾರ್ಖಾನೆಗಳ ದೇಶ ಕೇವಲ ದೈತ್ಯಶಕ್ತಿಯಾಗುತ್ತದೆ" ಎಂದರು. ಸಭೆ ಕರತಾಡನ ಮಾಡಿತು.

ಶ್ರೀಗಳು ತಮ್ಮ ಭಾಷಣ ಮುಗಿಸಿ ಹಿರಿಯ ಗುರುಗಳ ಸಮೀಪ ನಡೆದರು. ಹಿರಿಯ ಗುರುಗಳು ತಮ್ಮ ಕೊರಳಲ್ಲಿದ್ದ ಚಿನ್ನದ ಕರಡಿಗೆಯನ್ನು ತೆಗೆದು ರಾಜೇಂದ್ರ ಶ್ರೀಗಳ ಕೈಗೆ ನೀಡಿ, "ಇದನ್ನು ರಾಷ್ಟ್ರೀಯ ನಿಧಿಗೆ ಅರ್ಪಿಸಿಬಿಡಿ" ಎಂದರು. ವೇದಿಕೆಯ ಮೇಲಿದ್ದ ಮಾನ್ಯ ಮುಖ್ಯಮಂತ್ರಿಗಳಿಗೆ ಆ ಕರಡಿಗೆಯನ್ನು ನೀಡಿ "ಇದು ದೇಶಸೇವೆ ಮಾತ್ರವಲ್ಲ, ಈಶಸೇವೆಯೂ ಹೌದು" ಎಂದರು. ಸಭೆಯಲ್ಲಿ ಚಪ್ಪಾಳೆಯ ಸುರಿಮಳೆ, ಹರ್ಷೋದ್ಗಾರ! ಶ್ರೀಗಳವರ ನಡೆಯನ್ನು ಅನೇಕರು ಅನುಸರಿಸಿ ತಮ್ಮ ಬಳಿ ಇದ್ದ ಅಮೂಲ್ಯ ವಸ್ತುಗಳನ್ನು ಸರ್ಕಾರಕ್ಕೆ ದೇಣಿಗೆಯಾಗಿ ನೀಡಿದರು. ಜನರು ಶ್ರೀಗಳಿಗೆ 'ಬಂಗಾರದ ಸ್ವಾಮಿಗಳು' ಎಂದು ಕರೆದು ಮನದುಂಬಿ ಪ್ರಶಂಸಿಸಿದರು.

❑



ಅನ್ನ ದೇವರು

ಬಾನಾಡಿಗಳೆಲ್ಲ ತಮ್ಮ ಪಯಣ ಮುಗಿಸಿ ಮುಸ್ಸಂಜೆ ತಮ್ಮ ಗೂಡುಗಳಿಗೆ ಹಿಂದಿರುಗುತ್ತಿದ್ದ ಸಮಯ. ಅವುಗಳ ಚಿಲಿಪಿಲಿ ಮಠದ ವಾತಾವರಣಕ್ಕೆ ಅದ್ವಿತೀಯವಾದ ಆಧ್ಯಾತ್ಮಿಕ ಪರಿವೇಷವನ್ನು ನಿರ್ಮಿಸಿದ್ದವು. ದೂರದ ಬಳ್ಳಾರಿಯಿಂದ ಬಂದ ನನಗೆ ರಾಜೇಂದ್ರ ಶ್ರೀಗಳನ್ನು ಕಂಡು, ಮಾತನಾಡಿಸಿ, ಅವರ ಆಶೀರ್ವಾದ ಪಡೆಯುವುದು ಮುಖ್ಯ ಉದ್ದೇಶವಾಗಿತ್ತು. ಸರಿಸುಮಾರು ಸಂಜೆ 5.30. ಶ್ರೀಮಠದಲ್ಲಿ ಹೆಚ್ಚೇನೂ ಭಕ್ತರಿರಲಿಲ್ಲ. ನಾನು ಬಂದಿರುವುದನ್ನು ತಿಳಿದ ರಾಜೇಂದ್ರ ಶ್ರೀಗಳು ನನ್ನನ್ನು ಒಳಕರೆದರು. "ಯಾವಾಗ ಬಂದಿರಿ" ಎಂದರು. ನಾನು "ಬೆಳಗ್ಗೆ ಬಂದೆ, ಸ್ನೇಹಿತರನ್ನು, ಸಂಬಂಧಿಕರನ್ನು ನೋಡಿಕೊಂಡು, ಸ್ವಲ್ಪ ಸ್ವಂತ ಕಾರ್ಯಗಳಿದ್ದವು, ಅವುಗಳನ್ನೆಲ್ಲ ಮುಗಿಸಿಕೊಂಡು ತಮ್ಮ ದರ್ಶನ ಮಾಡೋಣವೆಂದು ಬಂದೆ" ಎಂದೆ. "ತಮ್ಮ ವಕೀಲ ವೃತ್ತಿ ಹೇಗಿದೆ" ಎಂದರು ಶ್ರೀಗಳು. "ಚೆನ್ನಾಗಿದೆ, ಬಳ್ಳಾರಿಯಲ್ಲಿ ಭೂವ್ಯವಹಾರಕ್ಕೆ ಸಂಬಂಧಿಸಿದ ಮೊಕದ್ದಮೆಗಳೇ ಹೆಚ್ಚು ಬುದ್ಧಿ. ಸಣ್ಣಪುಟ್ಟ ವಿಷಯಕ್ಕೂ ಜನ ಪೊಲೀಸ್ ಠಾಣೆ, ಕೋರ್ಟುಗಳಿಗೆ ಬರುತ್ತಾರೆ. ವಿವೇಕ ಕಡಿಮೆ ತಮ್ಮಲ್ಲೇ ಕುಳಿತು ಬಗೆಹರಿಸಿಕೊಳ್ಳ ಬಹುದಾದ ಎಷ್ಟೋ ವಿಷಯಗಳನ್ನು ಪ್ರತಿಷ್ಠೆಗೆ ಬಿದ್ದು ಕಟಕಟೆಗೆ ಬರುತ್ತಾರೆ" ಎಂದೆ. "ತಮ್ಮ 'ರೈತ ಪತ್ರಿಕೆ' ಹೇಗೆ ನಡೆಯುತ್ತಿದೆ. ಪ್ರಸಾರ ಚೆನ್ನಾಗಿದೆಯೇ" ಎಂದು ವಿಚಾರಿಸಿದರು ಶ್ರೀಗಳು. "ಪರವಾಗಿಲ್ಲ ಬುದ್ಧಿ, ಪ್ರಸಾರ ಅಷ್ಟೇನೂ ಚೆನ್ನಾಗಿಲ್ಲ" ಎಂದೆ, "ಬೇಜಾರೇನೂ ಇಲ್ಲ, ರೈತರೇ ಈ ದೇಶದ ಬೆನ್ನೆಲುಬು. ಅವರ ಕೃಷಿ ಬದುಕು ಸಮೃದ್ಧವಾಗಬೇಕು. ಆಧುನಿಕ ಕೃಷಿ ಬೇಸಾಯದ ತಿಳುವಳಿಕೆ ಅವರಿಗೆ ದೊರೆಯಬೇಕು. ಹೊಸ ಹೊಸ ಸಾಧನ–ಸಲಕರಣೆಗಳ ಪರಿಚಯವಾಗಬೇಕು. ಅದಕ್ಕಾಗಿ ಪತ್ರಿಕೆಯನ್ನು ಅನೇಕ ಬಾರಿ ನನ್ನನ್ನು ಭೇಟಿಯಾದ ರೈತರಿಗೆ ಉಚಿತವಾಗಿಯೇ ನೀಡುತ್ತಿದ್ದೇವೆ" ಎಂದೆ.

"ತಮ್ಮ ಕರ್ನಾಟಕ ಏಕೀಕರಣದ ಹೋರಾಟ ಸರಿಯಾದ ದಿಕ್ಕಿನಲ್ಲಿ ನಡೆಯುತ್ತಿದೆ. ಆದಷ್ಟು ಬೇಗ ಅದು ಸಂಪನ್ನಗೊಳ್ಳಬೇಕು. ಎಲ್ಲ ಕನ್ನಡಿಗರೂ ಒಂದೇ ಸೂರಿನಡಿ ಬಾಳುವಂತಾಗಬೇಕು" ಎಂದು ತಮ್ಮ ಸದಾಶಯವನ್ನು ಶ್ರೀಗಳು ವ್ಯಕ್ತಪಡಿಸಿದರು. ಬಳ್ಳಾರಿ, ರಾಯಚೂರು, ಗದಗ, ಬೀದರ್ ಹೀಗೆ ಅನೇಕ ಕಡೆಗಳಲ್ಲಿ ವೀರಶೈವ–ಲಿಂಗಾಯತ ಮಠಗಳ ಸ್ವಾಮಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದ ರಾಜೇಂದ್ರ



ಶ್ರೀಗಳಿಗೆ ನಾಡಿನಾದ್ಯಂತ ನಡೆಯುತ್ತಿದ್ದ ವಿಕೀಕರಣ ಹೋರಾಟದ ಎಲ್ಲ ಮಾಹಿತಿಯೂ ಇತ್ತು. ನನ್ನ ಹಾಗೂ ಗುರುಗಳ ಸಂಭಾಷಣೆ ನನ್ನ ವೃತ್ತಿಯಿಂದ ಮೊದಲುಗೊಂಡು ಎಲ್ಲ ವಿಷಯಗಳ ಬಗ್ಗೆ ಗಾಢವಾದ ವಿಚಾರ ವಿನಿಮಯ ಜರುಗುತ್ತಿರುವಾಗಲೇ, ಯಾರೋ ಮಠದ ಒಬ್ಬಾತ (ಆತನ ಪರಿಚಯವಿರಲಿಲ್ಲ ನನಗೆ) ಬಂದು ಶ್ರೀಗಳ ಕಿವಿಯಲ್ಲಿ ಏನೋ ಹೇಳಿದ. ತಕ್ಷಣಕ್ಕೆ ಮಾತು ಬದಲಾಯಿಸಿದ ಶ್ರೀಗಳು, "ಚೆನ್ನಬಸಪ್ಪನವರೆ ತಾವು ಇಂದು ಮೈಸೂರಿನಲ್ಲೇ ಉಳಿಯುತ್ತಿದ್ದೀರ" ಎಂದರು. ಹಾಗೆ ಕೇಳುವಾಗ ಅವರಲ್ಲಿ ಒಂದು ಬಗೆಯ ವಿಚಿತ್ರ ದುಗುಡವಿತ್ತು. ಆ ವ್ಯಕ್ತಿ ಹೇಳಿದ ಯಾವುದೇ ವಿಷಯದಿಂದಲೇ ಆ ದುಗುಡ ಉಂಟಾದದು ಎನ್ನುವುದು ನನಗೆ ಗೊತ್ತಾಯಿತು. ಶ್ರೀಗಳ ಮಾತಿಗೆ ನಾನು "ಹೌದು ಬುದ್ಧಿ" ಎಂದೆ. "ಸರಿ, ಹಾಗಾದರೆ ನಾಳೆ ಬೆಳಗ್ಗೆ ತಮ್ಮನ್ನು ಭೇಟಿಯಾಗುತ್ತೇವೆ" ಎಂದು ಎದ್ದು ಹೊರಟೇ ಬಿಟ್ಟರು. ನನಗೆ ಏನೊಂದೂ ತಿಳಿಯದಾಯಿತು.

ಮಾರನೆಯ ದಿನ ಬೆಳಗ್ಗೆ ನಿಗದಿತ ವೇಳೆಗೆ ಶ್ರೀಮಠಕ್ಕೆ ತೆರಳಿ, ಶ್ರೀಗಳನ್ನು ಭೇಟಿಯಾದೆ ಪೂಜೆ, ಪ್ರಸಾದ ಸ್ವೀಕರಿಸಿ ನನಗಾಗಿ ಕಾಯುತ್ತಿದ್ದಂತೆ ತೋರಿತು. ಶ್ರೀಮಠದ ಮುಂದೆ ಮೂಟೆ ತುಂಬಿದ್ದ ಎಂಟ್ಹತ್ತು ಎತ್ತಿನ ಗಾಡಿಗಳು ನಿಂತಿದ್ದವು. ಶ್ರೀಗಳ ಕಾಲಿಗೆ ನಮಸ್ಕರಿಸಿದೆ. "ಪ್ರಸಾದವಾಯಿತೆ" ಎಂದರು. "ಆಯಿತು" ಎಂದೆ. "ನಿಮಗಾಗಿಯೇ ಕಾಯುತ್ತಿದ್ದೆ" ಎಂದರು. "ಅಯ್ಯೋ ತಾವೇಕೆ ನನಗಾಗಿ ಕಾಯಬೇಕು ಬುದ್ಧಿ, ಅಂತಹ ಮಹತ್ವದ ಯಾವ ಕಾರ್ಯವೂ ನನಗಿಲ್ಲ, ಕೇವಲ ತಮ್ಮನ್ನು ಕಾಣುವುದಕ್ಕಾಗಿ ಬಂದಿದ್ದೆ, ಅಷ್ಟೆ" ಎಂದೆ. "ಇಲ್ಲ ಇಲ್ಲ, ನಿನ್ನೆ ದಿನ ತಾವು ನನ್ನನ್ನು ಕಾಣಲು ಬಂದು, ತಮ್ಮ ಯೋಗಕ್ಷೇಮವನ್ನು ಸಂಪೂರ್ಣವಾಗಿ ವಿಚಾರಿಸದೆ ಅರ್ಧಕ್ಕೇ ಹೊರಟುಬಿಡಬೇಕಾಯಿತು. ಅದು ನನಗೆ ಸೂಕ್ತವೆನಿಸಲಿಲ್ಲ" ಎಂದರು. ಶ್ರೀಗಳ ಮಾತು ನನ್ನನ್ನು ಗಾಢ ಮೌನಕ್ಕೆ, ಒಂದು ತೆರನಾದ ದಿವ್ಯಾನುಭೂತಿಗೆ ತಳ್ಳಿತ್ತು. ಒಂದು ಭವ್ಯ ಮಠದ ಮಠಾಧಿಪತಿಗಳು ಸಾಮಾನ್ಯನಾದ ನನ್ನಂಥವನ ಬಗ್ಗೆ ಹೊಂದಿರುವ ಆಲೋಚನಾ ಕ್ರಮ, ನನ್ನನ್ನು ನಿಬ್ಬೆರಗುಗೊಳಿಸಿತ್ತು. ಸಾವರಿಸಿಕೊಂಡು "ತಾವು ನಿನ್ನೆ ಅಷ್ಟೊಂದು ದುಗುಡದಲ್ಲಿ ತೆರಳಿದಿರಲ್ಲ, ಏನಾಯಿತು ಬುದ್ಧಿ, ಯಾರಿಗಾದರೂ ಅಪಾಯ ಸಂಭವಿಸಿತೇ ಅಥವಾ ಯಾರಾದರು ನಿಧನರಾಗಿದ್ದರೆ" ಎಂದೆ ಸಹಜ ಕುತೂಹಲದಿಂದ. ಅದಕ್ಕೆ ಶ್ರೀಗಳು "ಇಲ್ಲ ಚೆನ್ನಬಸಪ್ಪನವರೆ, ನಿನ್ನೆ ದಿನ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ ಪ್ರಸಾದಕ್ಕೆ ಬೇಕಾದ ದವಸಧಾನ್ಯಗಳು ಮುಗಿದುಹೋಗಿದ್ದವು. ರಾತ್ರಿಗೆ



ಏನೂ ಇರಲಿಲ್ಲ. ಈ ವಿಚಾರವನ್ನು ನಿನ್ನೆಯೇ ನನ್ನ ಗಮನಕ್ಕೆ ತಂದಿದ್ದರು. ಕೆಲಸಗಳ ಗಲಾಟೆಯಲ್ಲಿ ಅದು ಮರೆತುಹೋಗಿತ್ತು. ಆತ ಮತ್ತೆ ನೆನಪಿಸಿದಾಗ ಗಾಬರಿಯಾಯಿತು. ಅದಕ್ಕಾಗಿ ತಮ್ಮ ಯೋಗಕ್ಷೇಮದ ಮಾತನ್ನು ಅರ್ಧಕ್ಕೇ ನಿಲ್ಲಿಸಬೇಕಾಯಿತು. ರಾತ್ರಿ ಶ್ರೀರಂಗಪಟ್ಟಣದ ಹಳ್ಳಿಗಳಿಗೆ ತೆರಳಿ ಧಾನ್ಯವನ್ನು ಸ್ವೀಕರಿಸಿ ಬರಬೇಕಾಯಿತು. ಎಲ್ಲವೂ ಮುಗಿದು ಶ್ರೀಮಠಕ್ಕೆ ತಲುಪಿದಾಗ ಬೆಳಗಿನ ಜಾವ ಮೂರು ಗಂಟೆ. ತಮ್ಮನ್ನು ಬರಹೇಳಿದ್ದೆವಲ್ಲ ಎಂದು ಬಂದ ಕೂಡಲೇ ಉಳಿದ ಎಲ್ಲ ಕಾರ್ಯ ಮುಗಿಸಿ, ಪೂಜೆ ಮುಗಿಸಿ ನಿಮಗಾಗಿ ಕಾಯುತ್ತಿದ್ದೆವು" ಎಂದರು. "ಇಷ್ಟೆಲ್ಲ ಅವಸರದಿಂದ ಇದನ್ನೆಲ್ಲಾ ಮಾಡಬೇಕಾಗಿತ್ತೆ ಬುದ್ಧಿ, ರಾತ್ರಿ ತಮ್ಮ ಪೂಜೆ ಪ್ರಸಾದವೂ ಇಲ್ಲದೆ ಇವೆಲ್ಲ ಬೇಕಿತ್ತೆ" ಎಂದೆ. "ಚೆನ್ನಬಸಪ್ಪನವರೆ, ನಮ್ಮ ಒಬ್ಬರ ಹಸಿವಿನ ಬಗ್ಗೆ ತಾವು ಇಷ್ಟೊಂದು ಯೋಚಿಸುತ್ತಿದ್ದೀರಿ. ಆದರೆ ನಮ್ಮನ್ನೇ ನಂಬಿ, ಇಲ್ಲಿಗೆ ಓದಲು ಬಂದಿರುವ ವಿದ್ಯಾರ್ಥಿಗಳು ರಾತ್ರಿ ಹಸಿದಿದ್ದಾರೆ ಎಂದು ಯೋಚಿಸಿ. ಅನ್ನವೇ ನಿಜವಾದ ದೇವರಲ್ಲವೇ? ಅದನ್ನು ಸ್ವೀಕರಿಸಿದಾಗ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಮೂಡುವ ಆನಂದವೇ ಪೂಜೆಯಲ್ಲವೇ? ಉಳಿದಂತೆ ನಾವು ಮಾಡುವುದು ಕೇವಲ ತೋರಿಕೆಯ ಪೂಜೆ ಅಷ್ಟೆ" ಎಂದರು.

ಒಂದು ಸಂಪ್ರದಾಯಸ್ಥ ಅಧಿಪತಿಗಳಾಗಿದ್ದ ಅವರಾಡಿದ ಆ ಮಾತು ನನ್ನನ್ನು ದಿಗ್ಭ್ರಮೆಗೊಳಿಸಿತ್ತು. ನಾನು ಬದುಕಿನುದ್ದಕ್ಕೂ ರಾಜೇಂದ್ರ ಶ್ರೀಗಳನ್ನು ದೇವರಂತೆ ಕಂಡದ್ದು ಈ ಕಾರಣದಿಂದಲೇ, ಅವರ ಆ ಭೂತದಯೆಯೇ ನಮ್ಮ ನಾಡಿನ ಸಂತ ಸಂಪ್ರದಾಯದ ಮಹಾಮಾರ್ಗವಾಗಿ ಕಂಡಿತ್ತು ನನಗೆ. ಮನಸ್ಸು ಧನ್ಯತೆಯಲ್ಲಿ ಮಿಂದೆದ್ದಿತ್ತು.

❑

- ಕಾಯಕಕ್ಕೆ ಮಹತ್ವ ದೊರೆತಾಗ ರಾಷ್ಟ್ರಹಿತಸಾಧನೆಯೂ, ಮುಕ್ತಿಸಾಧನೆಯೂ ಏಕಕಾಲದಲ್ಲೇ ದೊರಕುವುದು.
- ದುಡಿಯದೇ ಸುಖ ಬಯಸುವ ಮನೋಭಾವವನ್ನು ಬಿಟ್ಟು, ಅವರವರ ಪಾಲಿನ ಕರ್ತವ್ಯಗಳನ್ನು ಶ್ರದ್ಧೆಯಿಂದ ನಿರ್ವಹಿಸಿದರೆ ಸಮಸ್ಯೆಗಳು ಉದ್ಭವಿಸುವುದಿಲ್ಲ.

– ಪರಮಪೂಜ್ಯ ಜಗದ್ಗುರು
ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು



ವಾತ್ಸಲ್ಯಮಯಿ

ನನಗೆ ಒದಗಿಬಂದ ಧರ್ಮಸಂಕಟ ಬೇರೆ ಯಾರಿಗೂ ಒದಗಬಾರದು. ಏನು ಮಾಡಬೇಕೆಂದು ತೋಚದೆ, ದಾರಿಕಾಣದೆ ಕಂಗಾಲಾಗಿ ಕುಳಿತೆ. ನಾನು ಕೆಲಸ ಮಾಡುತ್ತಿದ್ದ ಪ್ರಾಚ್ಯವಿದ್ಯಾ ಸಂಶೋಧನ ಸಂಸ್ಥೆಯಲ್ಲಿ ಯಾವುದೋ ಒಂದು ಹಸ್ತಪ್ರತಿಯನ್ನು ಪರಿಶೀಲಿಸಿದ ಆತ್ಮೀಯ ಗೆಳೆಯ ಮೂರ್ತಿಯವರು ನನ್ನನ್ನು ಗಮನಿಸಿ, "ಏಕೆ, ಇಷ್ಟೊಂದು ಚಿಂತೆಯಲ್ಲಿದ್ದೀರಿ" ಎಂದರು. ನಾನು ಅವರೊಂದಿಗೆ ಗಾಢವಾದ ಸ್ನೇಹ ಹೊಂದಿದ್ದರಿಂದ "ಅಯ್ಯೋ, ನನಗೊಂದು ಧರ್ಮಸಂಕಟ ಎದುರಾಗಿದೆ. ಏನು ಮಾಡಲೂ ತೋಚದೆ ಹೀಗಿದ್ದೇನೆ" ಎಂದೆ. ಅವರು ತಾವು ಅಧ್ಯಯನ ಮಾಡುತ್ತಿದ್ದ ಸಂಶೋಧನ ಗ್ರಂಥದ ಪರಿಶೀಲನೆಯನ್ನೇ ಬಿಟ್ಟು, ನನ್ನ ಸಮಸ್ಯೆಯತ್ತ ಗಮನ ಹರಿಸಿದರು. "ನಿಮ್ಮನ್ನು ನೋಡಿದರೆ ಬೆಳಗ್ಗೆ ತಿಂಡಿ, ರಾತ್ರಿ ಊಟವನ್ನೂ ಮಾಡಿಲ್ಲವೆನಿಸುತ್ತದೆ. ಬನ್ನಿ, ಮೊದಲು ತಿಂಡಿ ತಿಂದು ಬರೋಣ" ಎಂದು ಒತ್ತಾಯದಿಂದ ಬಲ್ಲಾಳ್ ಸರ್ಕಲ್ ಹೋಟೆಲೊಂದಕ್ಕೆ ಕರೆದುಕೊಂಡು ಹೋದರು. ನಡುವೆ ದಾರಿಯಲ್ಲೇ ನನ್ನ ಸಮಸ್ಯೆಯನ್ನು ಕೆದಕೆದಕಿ ಕೇಳಿದರು. ಗದ್ಯಂತರವಿಲ್ಲದೆ ನಾನು ಹೇಳಬೇಕಾಯಿತು.

"ನಿಮಗೆ ತಿಳಿಯದ್ದು ಏನಿದೆ?" ನಾನು ಬೆಂಗಳೂರಿನಲ್ಲಿ ಇಂಟರ್‌ಮೀಡಿಯೆಟ್ ಮುಗಿಸಿ ಮಹಾರಾಜ ಕಾಲೇಜಿನಲ್ಲಿ ಎಂಎ ವ್ಯಾಸಂಗ ಮಾಡಬೇಕೆಂದು ಬಯಸಿದವನು. ನನಗೆ ಓದುವ ಹಂಬಲವಿತ್ತೇ ಹೊರತು ಆರ್ಥಿಕ ಚೈತನ್ಯವಿರಲಿಲ್ಲ. ಕಡುಬಡತನದಲ್ಲಿದ್ದ ನನಗೆ ಉಚಿತ ವಿದ್ಯಾರ್ಥಿನಿಲಯದಲ್ಲಿ ಊಟದ ವ್ಯವಸ್ಥೆ ಮಾಡಿ. ನನ್ನ ಜೀವನ ಇಂದು ಸರಿದಾರಿಯಲ್ಲಿ ನಡೆಯುವುದಕ್ಕೆ ಪೂಜ್ಯ ರಾಜೇಂದ್ರ ಸ್ವಾಮೀಜಿಯವರೇ ಕಾರಣ. ಅವರಿಲ್ಲದಿದ್ದರೆ ನನ್ನ ಗತಿ ಏನಾಗುತ್ತಿತ್ತು ಎಂದು ದೇವರೇ ಬಲ್ಲ. ಇದು ತಮಗೆ ತಿಳಿಯದ್ದೇನಲ್ಲ". ಅಷ್ಟರಲ್ಲಿ ನಡುವೆ ಬಾಯಿ ಹಾಕಿದ ಮೂರ್ತಿಯವರು, "ಅಯ್ಯೋ ಬಿಡಿ, ನಿಮಗೆ ಮಾತ್ರವೇ ಅಲ್ಲ, ನನಗೂ ನನ್ನಂತಹ ಅನೇಕರಿಗೂ ಅವರೇ ಆಶ್ರಯದಾತರು. ಈಗೇಕೆ ಆ ಮಾತು?" ಎಂದರು. "ಅಯ್ಯೋ ಕೇಳಿ, ನಾನು ಎಂಎ ಮುಗಿಸಿ, ಪ್ರಾಚ್ಯವಿದ್ಯಾ ಸಂಶೋಧನಾ ಸಂಸ್ಥೆಯಲ್ಲಿ ಕೆಲಸ ಸಿಕ್ಕ ಮೇಲೆ ನನ್ನ ಮೊದಲನೆಯ ಮಗನನ್ನು ಬಿಇ ಕಾಲೇಜಿಗೆ ಸೇರಿಸಬೇಕಾಗಿತ್ತು. ಅವನೋ ಜೆಸಿಯಲ್ಲಿಯೇ ಓದಬೇಕು ಅಂತ ಹಠ. ನನ್ನ ಬಳಿ ಹಣವಿರಲಿಲ್ಲ. ಆಗ ಶ್ರೀಗಳ ಬಳಿ ಹೋಗಿ ಎಲ್ಲ ವಿಚಾರಗಳನ್ನೂ ತಿಳಿಸಿದೆ. ಅವರು ಆಯ್ತು ಸೀಟು ಕೊಡೋಣ ಹೋಗು" ಎಂದರು.

"ಶ್ರೀಗಳ ಮಾತನ್ನು ನಂಬಿ ನಾವು ಬೇರೆ ಕಾಲೇಜಿಗೆ ಅರ್ಜಿಯನ್ನೂ ಹಾಕಲಿಲ್ಲ. ನಿಮಗೆ ಗೊತ್ತಲ್ಲ, ಈಗ ಇಂಜಿನಿಯರಿಂಗ್ ಸೀಟಿಗೆ ಎಷ್ಟು ಬೇಡಿಕೆ ಇದೆ" ಎಂದ



ನನ್ನ ಮಾತಿಗೆ ಮೂರ್ತಿ "ಹೌದ್ಹೌದು" ಎಂದು ದನಿಗೂಡಿಸಿದರು. ಜೆಸಿಯಲ್ಲಿ ಮೊದಲನೆಯ ಪಟ್ಟಿ ಪ್ರಕಟವಾಯಿತು, ಅದರಲ್ಲಿ ನನ್ನ ಮಗನ ಹೆಸರಿರಲಿಲ್ಲ. ನನಗೆ ಆತಂಕ ಹೆಚ್ಚಾಯ್ತು. ಒಂದು ವರ್ಷ ವ್ಯರ್ಥವಾಗುವುದಲ್ಲ ಎಂಬ ಚಿಂತೆ ಆವರಿಸಿತು. ಪ್ರತಿನಿತ್ಯ ಶ್ರೀಗಳನ್ನು ಭೇಟಿಯಾಗಿ ವಿಚಾರಿಸುತ್ತಿದ್ದೆ. ಪ್ರತಿ ಬಾರಿಯೂ ಎಂದಿನಂತೆ 'ಹೋಗು' ಎಂದಷ್ಟೇ ಉತ್ತರಿಸುತ್ತಿದ್ದರು. ಕೊನೆಗೊಂದು ದಿನ ನನ್ನ ಮಗನಿಗೆ ಸೀಟು ಸಿಕ್ಕಿದೆ ಎಂದೂ, ತಕ್ಷಣ ಸೇರಿಕೊಳ್ಳಬೇಕು ಎಂಬ ಸೂಚನೆ ಬಂತು. ಆ ಸಂತೋಷದಲ್ಲಿ ಶ್ರೀಗಳನ್ನು ಭೇಟಿಯಾದೆ. "ಆಯ್ತು, ಒಳ್ಳೆಯದಾಗಲಿ. ಸಂಸ್ಥೆಗೆ ಏನು ಕೊಡುತ್ತೀಯಾ?" ಎಂದರು. ಆಗ "ನನ್ನ ಬಳಿ ಏನು ಇದೆ, ಬುದ್ಧಿ?" ಎಂದೆ. "ಅಯ್ಯೋ ದಡ್ಡ, ಸರ್ಕಾರದ ನಿಯಮದಂತೆ ಫೀಜ್ ಕಟ್ಟಬೇಕು ಕಣೋ, ಅದಾದರೂ ಗೊತ್ತಿದೆಯೆ" ಎಂದರು. "ಇಲ್ಲ ಬುದ್ದಿ" ಎಂದೆ, "ಅಯ್ಯೋ ದಡ್ಡ ದಡ್ಡ. ಸರ್ಕಾರ ನಿಗದಿಪಡಿಸಿರುವ ಶುಲ್ಕವನ್ನು ಕೊಟ್ಟು ಕಾಲೇಜಿಗೆ ಸೇರಿಸು, ಹೋಗು" ಎಂದರು. ನಾನು ಅವರನ್ನೇ ತದೇಕದೃಷ್ಟಿಯಿಂದ ನೋಡುತ್ತಾ ನಿಂತೆ. ನನ್ನ ಮನಸ್ಸನ್ನು ಅರಿತಂತೆ ಶ್ರೀಗಳೇ ನನಗೆ ಪತ್ರವೊಂದನ್ನು ನೀಡಿ, "ಇದನ್ನು ತೆಗೆದುಕೊಂಡು ಹೋಗಿ ಪ್ರಿನ್ಸಿಪಾಲ್ ಅವರಿಗೆ ಕೊಡು" ಎಂದರು. ಮಾತನಾಡಲು ಏನೂ ತೋಚದೆ, ಆ ಲಕೋಟೆಯನ್ನು ಹಿಡಿದು, "ಮೂರ್ತಿ ನಿನಗೇ ಗೊತ್ತಲ್ಲ" ಆವತ್ತು ನಿನ್ನ ಬಳಿ ಸಾಲ ಪಡೆದು ಹೋಗಿದ್ದೆನಲ್ಲ, ಅದು ನನ್ನ ಮಗನ ಫೀಜ್‌ಗಾಗಿ. ಪ್ರಾಚಾರ್ಯರನ್ನು ಭೇಟಿ ಮಾಡಿ ಲಕೋಟೆ ನೀಡಿದೆ. ಅವರು ಅದನ್ನು ತೆರೆದು ಓದಿ, "ಆಯ್ತು ಹೋಗಿ ನಿಮ್ಮ ಮಗನ ಅಡ್ಮಿಷನ್ ಮಾಡಿಸಿ" ಎಂದರು. "ಸಾರ್, ಫೀಜ್ ಎಷ್ಟು" ಎಂದೆ, ಅವರು "ಏನೂ ಇಲ್ಲ ಬಿಡಿ. ನೀವು ಕಟ್ಟಬೇಕಾದ ಫೀಜ್ ಅನ್ನು ಸಂಸ್ಥೆಯೇ ಕಟ್ಟಿದೆಯಂತೆ. ಶ್ರೀಗಳು ಪತ್ರ ಬರೆದಿದ್ದಾರೆ" ಎಂದರು. ನನಗೆ ಆದ ಸಂತೋಷಕ್ಕೆ ಪಾರವೇ ಇರಲಿಲ್ಲ!". ಮೂರ್ತಿಯವರು "ಅದೆಲ್ಲ ಗೊತ್ತಿರುವ ವಿಚಾರನೇ ತಾನೆ. ನಾನು ಕೊಟ್ಟ ಸಾಲವನ್ನು ನೀನು ಅದೇ ದಿನ ವಾಪಸ್ಸು ತಂದುಕೊಟ್ಟಾಗಲೇ ಇದನ್ನೆಲ್ಲ ಹೇಳಿದ್ದೆಯಲ್ಲ, ಈಗೇಕೆ ಮತ್ತೆ ಅದನ್ನು ನೆನಪಿಸಿ ಕೊಳ್ಳುತ್ತಿದ್ದೀಯಾ" ಎಂದರು.

"ಮೂರ್ತಿ, ನಾನು ಸ್ವಾಮೀಜಿಯವರ ಋಣಭಾರದಿಂದ ಇಷ್ಟೊಂದು ಒದ್ದಾಡುತ್ತಿರುವಾಗ, ಈಗ ನನ್ನ ಎರಡನೆಯ ಮಗನೂ ಜೆಸಿ ಕಾಲೇಜಿಗೇ ಸೇರಬೇಕೆಂದು ಹಠ ಹಿಡಿದಿದ್ದಾನೆ. ಎಷ್ಟು ಹೇಳಿದರೂ ಕೇಳುತ್ತಿಲ್ಲ. ಮೂರು ದಿನದಿಂದ ಅವನು ಊಟ ಮಾಡಿಲ್ಲ. ನಾನೂ ಮಾಡಿಲ್ಲ. ಮನೆಯಲ್ಲಿ ಇದೇ ದೊಡ್ಡ ಸಮಸ್ಯೆ. ಏನು ಮಾಡುವುದು ಮೂರ್ತಿ, ಕಬ್ಬು ಸಿಹಿಯಾಗಿದೆ ಎಂದು ಯಾರೂ ಬೇರುಸಹಿತ ತಿನ್ನುವುದಿಲ್ಲ. ನಾನು ಯಾವ ಮುಖವಿಟ್ಟುಕೊಂಡು ಮತ್ತೆ ಸ್ವಾಮೀಜಿಗಳ ಬಳಿ ಹೋಗಿ ನಮ್ಮ ಎರಡನೇ ಮಗನಿಗೆ ಸೀಟು ಕೇಳಲಿ, ಹೇಳು" ಎಂದೆ.



ಅಷ್ಟರಲ್ಲಿ ಹೋಟೆಲ್ ಬಂತು. ಇಬ್ಬರು ತಿಂಡಿ ತಿಂದು, ಕಾಫಿ ಕುಡಿಯುವರೆಗೂ ಮೌನವಾಗಿದ್ದೆವು. ನನ್ನ ನೋವು ಮೂರ್ತಿಯನ್ನು ಆವರಿಸಿತ್ತು. ಕೊನೆಗೆ ಮೂರ್ತಿ "ಒಂದು ಉಪಾಯ ಮಾಡೋಣ" ಎಂದರು. "ಏನು" ಎಂದೆ, "ನೋಡು, ನಿನ್ನ ಮಗನನ್ನು ನನ್ನ ಜೊತೆ ಕಳುಹಿಸು. ಅವರು ಇವನನ್ನು ನೋಡಿಲ್ಲ ತಾನೇ". "ಇಲ್ಲ" ಎಂದೆ. "ಸರಿ ಹಾಗಿದ್ದರೆ ಸೀಟು ಕೊಡಿಸುತ್ತೇನೆ. ಬಿಡು" ಎಂದರು. ಹೇಗೆಂದು ಕೇಳಿದೆ "ನಿನಗೆ ಅದೆಲ್ಲಾ ಆಮೇಲೆ ಗೊತ್ತಾಗುತ್ತದಲ್ಲ" ಎಂದರು.

ಸರಿ. ಮೂರ್ತಿಯವರು ನನ್ನ ಮಗನಿಗೆ ಸೀಟು ದೊರಕುವಂತೆ ಮಾಡಿದರು. ನಮ್ಮ ಮನೆಯಲ್ಲಿ ನೆಮ್ಮದಿ ನೆಲೆಸಿತು. ನಾನು ಮೂರ್ತಿಗೆ ಒತ್ತಾಯ ಮಾಡಿ 'ಸೀಟು ಹೇಗೆ ಲಭ್ಯವಾಯಿತು' ಎಂದು ಕೇಳಿದೆ. ಆಗ ಮೂರ್ತಿ "ನಾನು ನಿನ್ನ ಮಗನನ್ನು ಕರೆದುಕೊಂಡು ಶ್ರೀಗಳ ಬಳಿ ಹೋದೆ. ಇವನು ನಮ್ಮ ಹುಡುಗ. ಇವನಿಗೆ ತಮ್ಮ ಇಂಜಿನಿಯರಿಂಗ್ ಕಾಲೇಜಿನಲ್ಲಿ ಸೀಟು ಬೇಕು" ಎಂದೆ. "ನೀವು ಯಾವತ್ತೂ ಏನೂ ಕೇಳಿದವರಲ್ಲ. ಆಯ್ತು. ಈಗಲೇ ಕರೆದುಕೊಂಡು ಹೋಗಿ ಸೇರಿಸಿ" ಎಂದರು. ಅಷ್ಟೇ. ಮೂರ್ತಿಯವರ ಮಾತು ಕೇಳಿ ಆಶ್ಚರ್ಯದಿಂದ ನಾನು ಮೂಕನಾದೆ. ಶ್ರೀಮಠಕ್ಕೆ ಎಷ್ಟೊಂದು ಜನ ಭಕ್ತರಿದ್ದಾರೆ. ಎಲ್ಲರನ್ನೂ ಸ್ವಾಮೀಜಿಯವರು ಒಂದೇ ರೀತಿ ಕಾಣುತ್ತಿದ್ದಾರಲ್ಲ! ತನ್ನ ಎಲ್ಲ ಮಕ್ಕಳನ್ನೂ ಒಂದೇ ರೀತಿಯಲ್ಲಿ ಕಾಣುವುದು ತಾಯಿಯ ವಾತ್ಸಲ್ಯಕ್ಕೆ ಮಾತ್ರ ಸಾಧ್ಯ" ಎಂದುಕೊಂಡು ನನ್ನ ಮನಸ್ಸು ತುಂಬಿ ಬಂತು.

ಅನಂತರದಲ್ಲಿ ಕಾಲೇಜಿನ ಪ್ರಾಚಾರ್ಯರಾದ ಪ್ರೊ. ಧನಂಜಯರವರು ಶ್ರೀಗಳನ್ನು ಭೇಟಿಯಾಗಿ "ಬುದ್ಧಿ, ನೀವು ಮೂರ್ತಿಯವರ ಹುಡುಗ ಎಂದು ಸೀಟು ನೀಡಿದಿರಲ್ಲ, ಅವರು ಆರಾಧ್ಯರ ಎರಡನೇ ಮಗ. ಮೊದಲ ಮಗನಿಗೆ ಉಚಿತ ಸೀಟು ಪಡೆದು ಈಗ ಹೀಗೆ ಮಾಡಿದ್ದಾರೆ ಎಷ್ಟು ಸಣ್ಣ ಜನ" ಎಂದರಲ್ಲದೆ. "ಆ ಹುಡುಗನನ್ನು ತೆಗೆದು ಹಾಕೋಣ" ಎಂದರಂತೆ. ಆಗ ಶ್ರೀಗಳು "ರೀ, ನನಗೆ ಆರಾಧ್ಯರಿಗೆ ಎಷ್ಟು ಮಕ್ಕಳು. ಯಾರ್ಯಾರು ಎಂದೆಲ್ಲ ತಿಳಿದಿದೆ. ಸ್ವತಃ ಎರಡನೆಯ ಮಗನಿಗೆ ಸೀಟು ಕೇಳಬಾರದು ಎನ್ನುವ ಅವನ ಸ್ವಾಭಿಮಾನ ಮತ್ತು ಬಡತನವನ್ನು ನಾವು ಹಂಗಿಸಬಾರದು. ಬಡತನಕ್ಕೆ ಸ್ವಾಭಿಮಾನ ಹೆಚ್ಚು. ನಮಗೆ ಆ ಹುಡುಗನ ಓದುವ ಹಂಬಲ ದೊಡ್ಡದೇ ಹೊರತು ಮಿಕ್ಕ ಸಂಗತಿಗಳಲ್ಲ. ಹೋಗಿ ಕೆಲಸ ಮಾಡಿ, ನನಗೆ ಹೇಳಿದ್ದನ್ನು ಬೇರೆ ಯಾರಿಗೂ ಹೇಳಬೇಡಿ" ಎಂದು ತಾಕೀತು ಮಾಡಿದರು. ಅಷ್ಟೇ ಅಲ್ಲ ನಾನು ಎದುರಾದಾಗಲೂ ಎಂದೂ ಆ ವಿಷಯವನ್ನು ಪ್ರಸ್ತಾಪಿಸುತ್ತಿರಲಿಲ್ಲ. ನಾನು ದೇವರನ್ನು ನಂಬಿದವನು, ಆದರೆ ಕಂಡವನಲ್ಲ. ಅವನೂ ಸಹ ಶ್ರೀಗಳಷ್ಟು ವಾತ್ಸಲ್ಯಮಯಿಯಾಗಿ ಇರುತ್ತಿದ್ದನೋ ಏನೋ ತಿಳಿದಿಲ್ಲ".

❑



ಇವ ನಮ್ಮವ

ಕಾಲೇಜಿನ ಪ್ರಾಚಾರ್ಯರು ನನ್ನನ್ನು ಕರೆದು, "ಗೋವಿಂದರಾಜು, ನಾಳೆ ಬೆಳಗ್ಗೆ ನೀವು ಕಾಲೇಜಿಗೆ ಬರುವುದು ಬೇಡ, ಬುದ್ಧಿಯವರ ಜೊತೆ ಎಲ್ಲಿಗೋ ಹೋಗಬೇಕಂತೆ. ನಾಳೆ ಬೆಳಗ್ಗೆ ಎಂಟು ಗಂಟೆ ಹೊತ್ತಿಗೆ ಮಠಕ್ಕೆ ಹೋಗಿ. ಸರಿಯಾದ ಸಮಯಕ್ಕೆ ಹೋಗಿ, ನಿಮಗಾಗಿ ಬುದ್ಧಿಯವರು ಕಾಯುತ್ತಿರುತ್ತಾರೆ" ಎಂದರು. ನನಗೆ ಶ್ರೀಮಠದ ಸಂಪರ್ಕ ಮೊದಲಿನಿಂದಲೂ ಇದೆ. ಮೂಲತಃ ತಮಿಳುನಾಡಿವನಾದ ನಾನು, ಶ್ರೀಗಳವರು ನೀಲಗಿರಿಗೆ ಬಂದಿದ್ದಾಗ ಆಕಸ್ಮಿಕವಾಗಿ ಪರಿಚಯವಾಗಿ, ನನ್ನ ಕಷ್ಟಗಳನ್ನು ಹೇಳಿಕೊಂಡಾಗ, "ನೀನು ಮೈಸೂರಿಗೆ ಬರುತ್ತೀಯಾ, ನಮ್ಮ ಸಂಸ್ಥೆಯಲ್ಲಿ ಕೆಲಸ ಕೊಡುತ್ತೇವೆ" ಎಂದರು. 'ಅರಸುತ್ತ ಇದ್ದವನಿಗೆ ಅಮೃತಬಳ್ಳಿಯೇ ಕಾಲಿಗೆ ಬಂದು ತೊಡರಿದಂತೆ, ಬಡವನಿಗೆ ಅಕ್ಷಯಪಾತ್ರೆ ದೊರೆತಂತೆ ಆಯಿತು. ತಕ್ಷಣ ಅವರ ಪಾದ ಹಿಡಿದು "ಯಾವಾಗ ಬರಲಿ ಸ್ವಾಮೀಜಿ" ಎಂದೆ. "ಇವತ್ತೇ ಹೊರಡು" ಎಂದರು. ಅಂದೇ ಸಂಜೆ ಬಸ್ಸಿನಲ್ಲಿ ಹೊರಟು, ಸಂಸಾರ ಸಮೇತ ಮೈಸೂರು ತಲುಪಿದೆ. ನನಗೆ ಮೈಸೂರು ಹೊಸದಾಗಿದ್ದುದರಿಂದ ಅವರಿವರನ್ನು ವಿಚಾರಿಸಿ ಶ್ರೀಮಠವನ್ನು ತಲುಪಿದೆ.

ನನಗೆ ಕನ್ನಡ ಮಾತನಾಡಲು ಬರುತ್ತಿತ್ತು. ಮಠದ ಬಾಗಿಲಿನಲ್ಲಿ ನಿಂತಿದ್ದ ಸೇವಕರೊಬ್ಬರು ನನ್ನ ಇಡೀ ಕುಟುಂಬವನ್ನು ಕಂಡು 'ಏನು' ಎಂದು ವಿಚಾರಿಸಿದರು. ನಾನು "ಸ್ವಾಮಿಗಳನ್ನು ಕಾಣಬೇಕು" ಎಂದೆ. "ಯಾಕೆ" ಎಂದರು. "ಕೆಲಸ ಕೊಡುತ್ತೇನೆ ಬಾ ಎಂದಿದ್ದಾರೆ" ಎಂದೆ. "ಹೋಗು ಹೋಗು. ನಿನ್ನನ್ನು ನೋಡಿದರೆ ಕೊಂಗನಂತೆ ಕಾಣುತ್ತೀಯ, 'ನಿನಗೆ ಕೆಲಸ ಕೊಡುತ್ತೇನೆ' ಎಂದು ಬುದ್ಧಿಯವರು ಹೇಳಿದ್ದಾರಾ? ಅದು ಸರಿ, ಮೊದಲಿಗೆ ನೀನು ಬುದ್ಧಿಯವರ ಮುಖವನ್ನಾದರೂ ನೋಡಿದ್ದೀಯಾ" ಎಂದು ವ್ಯಂಗ್ಯವಾಗಿ ಕೇಳಿದರು. ಆಗ ನಾನು ನೀಲಗಿರಿಯಲ್ಲಿ ನಡೆದ ಎಲ್ಲ ವಿಚಾರವನ್ನೂ ಅವನಿಗೆ ತಿಳಿಸಿದೆ. ಸ್ವಾಮಿಗಳು ಊಟಿಗೆ ಹೋಗಿದ್ದ ವಿಚಾರ ಆತನಿಗೆ ಗೊತ್ತಿದ್ದುದರಿಂದ, ನನ್ನ ಮಾತು ಆತನಿಗೆ ನಿಜವೆನಿಸಿತು. ಆದರೂ ನನ್ನ ವೇಷ ಗೊಂದಲ ಸೃಷ್ಟಿಸಿತು. "ಆಯ್ತು ಇರು. ಕೇಳಿಕೊಂಡು ಬರುತ್ತೇನೆ" ಎಂದು ಒಳಗೆ ಹೋಗಿ ಬಂದು, ಗೇಟು ತೆರೆದು, "ಇಲ್ಲಿ ನಲ್ಲಿಯಲ್ಲಿ ಮುಖ ತೊಳೆದುಕೊಂಡು, ಪ್ರಸಾದ ಮಾಡಿ, ಆಮೇಲೆ



ಬುದ್ಧಿಯವರನ್ನು ನೋಡಿ" ಎಂದು ಗೌರವದಿಂದ ಹೇಳಿದರು. ಅಂತೆಯೇ ಶ್ರೀಗಳನ್ನು ಕಂಡೆ. ಶ್ರೀಗಳವರು ನನಗೆ ರಾಮಾನುಜ ರಸ್ತೆಯ ಪದವಿ ಕಾಲೇಜಿನಲ್ಲಿ ಭೌತಶಾಸ್ತ್ರ ಅಧ್ಯಾಪಕನ ಕೆಲಸ ನೀಡಿದರು. ಅಂದಿನಿಂದ ನನ್ನ ಬದುಕೇ ಬದಲಾಯಿತು. ನನ್ನ ಮತ್ತು ಸ್ವಾಮಿಗಳ ನಡುವೆ ಅವಿನಾಭಾವ ಸಂಬಂಧ ಏರ್ಪಟ್ಟಿತು. ತಮಿಳುನಾಡಿಗೆ ಹೋದಾಗಲೆಲ್ಲ ನನ್ನನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದರು. ತಮಿಳಿನವರು ಯಾರಾದರೂ ಶ್ರೀಮಠಕ್ಕೆ ಬಂದರೆ ಆಗಲೂ ನನ್ನನ್ನು ಕರೆಸುತ್ತಿದ್ದರು. ಕಾರಣ ನನಗೆ ತಮಿಳು, ಕನ್ನಡ ಎರಡೂ ಬರುತ್ತಿತ್ತು. ಹೀಗಾಗಿ ನನ್ನನ್ನು ಕರೆಸುವುದು ವಾಡಿಕೆಯಾಗಿತ್ತು.

ಆದರೆ "ನಿಮಗಾಗಿ ಶ್ರೀಗಳು ಕಾಯುತ್ತಿರುತ್ತಾರೆ" ಎಂಬ ಮಾತಿನಿಂದ ಸ್ವಲ್ಪ ಆಶ್ಚರ್ಯ, ಗಾಬರಿ ಎರಡೂ ಆಯ್ತು. ಸರಿ, ಶ್ರೀಗಳ ಇಚ್ಛೆಯಂತೆ ಬೆಳಗ್ಗೆ 8 ಗಂಟೆಗೆ ಶ್ರೀಮಠಕ್ಕೆ ಹೋದೆ. ಆಶ್ಚರ್ಯವೆಂದರೆ ಶ್ರೀಗಳು "ಬಾ ಬಾ, ನಿನಗೇ ಕಾಯುತ್ತಿದ್ದೆ" ಎಂದವರೆ "ಬೇಗನೆ ಕಾರು ಹತ್ತು" ಎಂದರು. ನನಗೆ ಏನೂ ತೋಚಲಿಲ್ಲ; ಅವರು ಹೇಳಿದಂತೆ ಮಾಡಿದೆ. ಕಾರಿನ ಹಿಂಬದಿಯ ಸೀಟಿನಲ್ಲಿ ಶ್ರೀಗಳ ಜೊತೆ ಜ್ಯೋತಿಷಿಗಳೊಬ್ಬರು ಕುಳಿತಿದ್ದರು. ಅರಮನೆಯಿಂದ ಬಂದ ಇನ್ನೊಂದು ಕಾರಿನಲ್ಲಿ ಮತ್ತೆ ಕೆಲವರು ಜನರಿದ್ದರು. ಡ್ರೈವರ್ ಪಕ್ಕದ ಸೀಟಿನಲ್ಲಿ ನಾನು ಕುಳಿತಿದ್ದೆ. ಕಾರು ಅರಮನೆಯ ದಕ್ಷಿಣ ದ್ವಾರದಿಂದ ಅರಮನೆ ಪ್ರವೇಶಿಸಿತು. ಶ್ರೀಗಳು ತಮ್ಮ ಜೊತೆಯಲ್ಲಿದ್ದ ಜ್ಯೋತಿಷಿಗಳನ್ನು ಕರೆದುಕೊಂಡು ಅರಮನೆಯ ಒಳಗೆ ನಡೆದರು. ನಾನು ಅದೇ ಮೊದಲ ಬಾರಿಗೆ ಅರಮನೆಯ ಒಳಪ್ರವೇಶ ಮಾಡುತ್ತಿದ್ದೆ. ಅದುವರೆಗೆ ಹೊರಗಿನಿಂದ ಮಾತ್ರ ನೋಡಿ ಸಂತಸಪಟ್ಟಿದ್ದ ನನಗೆ, ಅರಮನೆಯೊಳಕ್ಕೆ ಹೋದದ್ದು, ಸಂತಸವನ್ನು ಇನ್ನಷ್ಟು ಹೆಚ್ಚಿಸಿತು. ಮಹಾರಾಜ ಜಯಚಾಮರಾಜ ಒಡೆಯರ್‌ರವರು ನಾವು ಹೋಗುವುದನ್ನೇ ಎದುರು ನೋಡುತ್ತಿದ್ದವರಂತೆ ಕಂಡರು. ಸ್ವಾಮಿಗಳು ಜ್ಯೋತಿಷಿಗಳನ್ನು ಪರಿಚಯಿಸಿ ಇವರು ತಮಿಳುನಾಡಿನ ವೈದ್ಯೇಶ್ವರ ದೇವಸ್ಥಾನದಿಂದ ಬಂದಿದ್ದಾರೆ ಎಂದರು. ನನ್ನನ್ನು ತೋರಿಸಿ "ಈತ ಗೋವಿಂದರಾಜು ಅಂತ. ನಮ್ಮ ಕಾಲೇಜಿನಲ್ಲಿ ಕೆಲಸ ಮಾಡಿಕೊಂಡಿದ್ದಾರೆ. ನಮಗೆ ತಮಿಳು ಬರುವುದಿಲ್ಲವಾದುದರಿಂದ ಈತನೇ ನಮಗೆ ದುಬಾಷಿ. ಹಾಗಾಗಿ ನಮ್ಮ ಜೊತೆಯಲ್ಲಿಯೇ ಇರುತ್ತಾರೆ" ಎಂದು ಸ್ವಲ್ಪ ನನ್ನ ಬಗ್ಗೆ ಹೆಚ್ಚಾಗಿಯೇ ಪರಿಚಯಿಸಿದರು. ಮಹಾರಾಜರು ಆಗ ತಮಿಳುನಾಡಿನ ರಾಜಪ್ರಮುಖರಾಗಿದ್ದರು.



ಜ್ಯೋತಿಷಿಗಳು ಮಹಾರಾಜರ ಜಾತಕವನ್ನು ನೋಡಿ "ನೀವು ರಾಜಪ್ರಮುಖರಾಗಿ ಇದೇ ಪದವಿಯಲ್ಲಿ ಮುಂದುವರೆದರೆ, ನೀವು ರಾಷ್ಟ್ರಪತಿಗಳಾಗುತ್ತೀರಿ. ಆದರೆ ನಿಮ್ಮ ಜಾತಕದಲ್ಲಿ ಗ್ರಹಸ್ಥಿತಿಗಳು ಪ್ರತಿಕೂಲವಾಗಿವೆ. ನಿಮ್ಮ ಮನಸ್ಸನ್ನು ತಲ್ಲಣಗೊಳಿಸುತ್ತಿವೆ. ವೈಯಕ್ತಿಕ ಬದುಕು ಹಾಗೂ ಸಾರ್ವಜನಿಕ ಬದುಕಿನಲ್ಲಿ ಅನೇಕ ತೊಂದರೆಗಳು ಎದುರಾಗುತ್ತವೆ. ಅದನ್ನು ಮೀರಿ ನಿಲ್ಲುವ ಶಕ್ತಿಯನ್ನು ನೀವು ಪಡೆಯಬೇಕು. ಆದರೆ ಅದು ಅಷ್ಟು ಸುಲಭವಲ್ಲ" ಎಂದೂ ತಿಳಿಸಿದರು. ಪರಿಹಾರಕ್ಕಾಗಿ ಎರಡು ವಜ್ರದ ಹರಳು ಹಾಗೂ ಒಂದು ನೀಲಿ ಹರಳನ್ನು ಧರಿಸಿಕೊಳ್ಳುವಂತೆ ಸೂಚಿಸಿದರು. ಆದರೆ ಶುದ್ಧವಾಗಿರುವ ನೀಲವನ್ನೇ ಧರಿಸಬೇಕೆಂದೂ, ಅದು ಮದರಾಸಿನಲ್ಲಿ ಮಾತ್ರ ದೊರೆಯುತ್ತದೆ ಎಂದೂ ಹೇಳಿದರು. ಶ್ರೀಗಳು "ತೊಂದರೆಯಿಲ್ಲ. ತರಿಸಿದರಾಯಿತು, ಬಿಡಿ" ಎಂದರು.

ಮಾರನೆಯ ದಿನ ನನ್ನನ್ನು ಕರೆಸಿ, ನೀಲಿ ಹರಳನ್ನು ತರುವಂತೆ ಹೇಳಿ, ಮದರಾಸಿಗೆ ಹೋಗಲು ಸೂಚಿಸಿದರು. "ಆ ಹರಳಿಗೆ ಮೂರು ಸಾವಿರ ರೂಪಾಯಿ. ದುಡ್ಡು ಜೋಪಾನ" ಎಂದು ಹೇಳಿ ನನ್ನ ಕೈಗೆ ಮೂರು ಸಾವಿರ ರೂಪಾಯಿಗಳನ್ನು ಹಾಗೂ ಪ್ರಯಾಣದ ವೆಚ್ಚವನ್ನು ನೀಡಿದರು. ನಾನು "ತಮ್ಮ ಕಡೆಯವರೊಬ್ಬರನ್ನು ನನ್ನ ಜೊತೆ ಕಳುಹಿಸಿಕೊಡಿ, ಬುದ್ಧಿ" ಎಂದೆ. "ಯಾಕೆ?" ಎಂದರು. "ಹರಳಿನ ಬೆಲೆ ಅವರಿಗೂ ತಿಳಿದಿರಲಿ ಬುದ್ಧಿ, ನಾಳೆ ಮೋಸವಾಯಿತು ಎಂದಾಗಬಾರದು, ಅದೂ ಅಲ್ಲದೆ ಮೂರು ಸಾವಿರ ರೂಪಾಯಿ ಅನ್ನೋದು ದೊಡ್ಡ ದುಡ್ಡು, ಬುದ್ಧಿ" ಎಂದೆ. "ದಡ್ಡ ದಡ್ಡ. ನೀನು ನಮ್ಮ ಸಂಸ್ಥೆಯಲ್ಲಿದ್ದೀಯೆ, ಅಂದ ಮೇಲೆ ನೀನು ನಮ್ಮವನೇ ಅಲ್ವ. ನಮ್ಮ ಸಂಸ್ಥೆಯಲ್ಲಿರುವವರೆಲ್ಲ ನಮ್ಮವರೇ ಕಣೋ. ಹೋಗು, ಹೋಗು" ಎಂದು ಕಳುಹಿಸಿದರು. ಮದರಾಸಿಗೆ ತೆರಳಿ, ಶುದ್ಧ ನೀಲದ ಹರಳನ್ನು ತಂದುಕೊಟ್ಟೆ. ಅಕ್ಕಸಾಲಿಯನ್ನು ಕರೆಸಿ, ವಜ್ರದ ಹರಳುಗಳ ಮಧ್ಯದಲ್ಲಿ ಆ ನೀಲ ಮಣಿಯನ್ನು ಸೇರಿಸಿ ಬಂಗಾರದ ಉಂಗುರ ಮಾಡಿಸಿ ಬುದ್ಧಿಯವರು ಅದನ್ನು ಮಹಾರಾಜರಿಗೆ ನೀಡಿದರು. ಅವರು "ನೀನು ನಮ್ಮವನು" ಎಂದ ಆ ಮಾತು ಆ ವಜ್ರದ ಹರಳು ಹಾಗೂ ನೀಲಕ್ಕಿಂತಲೂ ಅತ್ಯಮೂಲ್ಯವಾದ ಮಾತಾಗಿ ನನ್ನ ಮನಸನ್ನು ಸದಾ ಆವರಿಸಿತು.

❑



ಶ್ರೀರಾಜೇಂದ್ರಾಷ್ಟಕಮ್

ಅನಾಥನಾಥಂ ನಯನಾಭಿರಾಮಂ ಗುರುಪ್ರಕಾಂಡಂ ಕರುಣಾವತಾರಮ್ ।
ಯೊಗೀಶ್ವರಂ ಸರ್ವಜನಾಭಿವಂದ್ಯಂ ರಾಜೇಂದ್ರವರ್ಯಂ ಪ್ರಣತೋಽಸ್ಮಿ ನಿತ್ಯಮ್ ॥ 1 ॥

ಅನಾಥರಿಗೆ ಒಡೆಯರಾದ (ಅನಾಥರನ್ನು ಸಲಹುವ), ನಯನಮನೋಹರರಾದ, ಗುರುಶ್ರೇಷ್ಠರಾದ, ಕರುಣೆಯ ಅವತಾರದಂತಿರುವ ಯೋಗಿಶ್ರೇಷ್ಠರಾದ ಎಲ್ಲ ಜನರಿಂದಲೂ ವಂದಿತರಾದ ರಾಜೇಂದ್ರಗುರುಗಳನ್ನು ಸದಾ ನಮಸ್ಕರಿಸುತ್ತೇನೆ.

ದಾರಿದ್ರ್ಯದುಃಖೇನ ನಿಪೀಡಿತಾನಾಂ ಸಾಮಾಜಿಕಾನಾಂ ಸುಖದಂ ಶರಣ್ಯಮ್ ।
ನಿಸ್ಸ್ವಾರ್ಥತಾಯಾಃ ಪುರುಷಾಕೃತಿಂ ತಂ ರಾಜೇಂದ್ರವರ್ಯಂ ಪ್ರಣತೋಽಸ್ಮಿ ನಿತ್ಯಮ್ ॥ 2 ॥

ಬಡತನದ ದುಃಖದಿಂದ ಪೀಡಿತರಾದ ಸಮಾಜದ ಜನರಿಗೆ ಸುಖವನ್ನು ನೀಡುವ, ಶರಣುಹೊಂದಲು ಯೋಗ್ಯರಾದ ನಿಸ್ಸ್ವಾರ್ಥತೆಯ ಮೂರ್ತಸ್ವರೂಪರಾದ ರಾಜೇಂದ್ರ ಗುರುಗಳನ್ನು ಸದಾ ನಮಸ್ಕರಿಸುತ್ತೇನೆ.

ಸುಜೀವನಾರ್ಥಂ ಮತಿರೇವ ಮುಖ್ಯಾ ಮತೇರ್ಮಲಂ ಕ್ಷಾಲಯಿತುಂ ಸಮರ್ಥಾಮ್ ।
ವಿದ್ಯಾಂ ವಿತೀರ್ಯೈವ ಜಗತ್ಪ್ರಸಿದ್ಧಂ ರಾಜೇಂದ್ರವರ್ಯಂ ಪ್ರಣತೋಽಸ್ಮಿ ನಿತ್ಯಮ್ ॥ 3 ॥

ಉತ್ತಮ ಜೀವನಕ್ಕಾಗಿ ಬುದ್ಧಿಯೇ ಮುಖ್ಯ. ಅಂಥ ಬುದ್ಧಿಯ ಮಲಿನತೆಯನ್ನು ತೊಳೆದುಹಾಕಲು ಸಮರ್ಥವಾದ ವಿದ್ಯೆಯನ್ನು ವಿತರಿಸಿಯೇ ಜಗತ್ಪ್ರಸಿದ್ಧರಾದ ರಾಜೇಂದ್ರಗುರುಗಳನ್ನು ಸದಾ ನಮಸ್ಕರಿಸುತ್ತೇನೆ.

ಮಾತೃಸ್ವಭಾವೇನ ಮಹಾಮಹಿಮ್ನಾ ಜನಾನ್ ಸಮುದ್ಧರ್ತುಮಿಹಾಗತಂ ತಮ್ ।
ಶ್ರೀವೀರಶೈವಂ ಸುಜನೈಃ ಸುಸೇವ್ಯಂ ರಾಜೇಂದ್ರವರ್ಯಂ ಪ್ರಣತೋಽಸ್ಮಿ ನಿತ್ಯಮ್ ॥ 4 ॥

ಮಾತೃಸ್ವಭಾವದಿಂದ ಮಹಾಮಹಿಮೆಯಿಂದ ಜನರನ್ನು ಉದ್ಧಾರಮಾಡಲು ಭೂಮಿಗೆ ಬಂದ ವೀರಶೈವಶ್ರೇಷ್ಠರಾದ, ಸಜ್ಜನರಿಂದ ಸೇವಿತರಾದ ರಾಜೇಂದ್ರಗುರುಗಳನ್ನು ಸದಾ ನಮಸ್ಕರಿಸುತ್ತೇನೆ.

ದಾರಿದ್ರ್ಯನಾಶಸ್ಯ ಸುನಿಶ್ಚಯೇನ ಸರ್ವಂ ಸಮರ್ಪ್ಯಾತ್ರ ಜಗದ್ಧಿತಾರ್ಥಮ್ ।
ಔದ್ಯೋಗಿಕಕ್ರಾಂತಿಕರಂ ಸುಧೀಂದ್ರಂ ರಾಜೇಂದ್ರವರ್ಯಂ ಪ್ರಣತೋಽಸ್ಮಿ ನಿತ್ಯಮ್ ॥ 5 ॥



ಬಡತನವನ್ನು ಹೋಗಲಾಡಿಸುವ ದೃಢ ನಿರ್ಧಾರದಿಂದ ಜಗತ್ತಿನ ಹಿತಕ್ಕಾಗಿ ತಮ್ಮದೆಲ್ಲವನ್ನೂ ಸಮಾಜಕ್ಕೆ ಸಮರ್ಪಿಸಿ ಉದ್ಯೋಗಕ್ಷೇತ್ರದಲ್ಲಿ ಮಹಾಕ್ರಾಂತಿ ಮಾಡಿದ ಶ್ರೇಷ್ಠ ಜ್ಞಾನಿಗಳಾದ ರಾಜೇಂದ್ರಗುರುಗಳನ್ನು ಸದಾ ನಮಸ್ಕರಿಸುತ್ತೇನೆ.

ಕಾರ್ಯಪ್ರಧಾನಂ ಖಲು ಸರ್ವಮೇತತ್ ಕೈವಲ್ಯಹೇತುರ್ಭವತೀತಿ ಮತ್ವಾ।
ಲೀಲಾಪ್ರಕಾರಾರ್ಜಿತಸರ್ವಕಾರ್ಯಂ ರಾಜೇಂದ್ರವರ್ಯಂ ಪ್ರಣತೋಽಸ್ಮಿ ನಿತ್ಯಮ್ ॥ 6 ॥

ಈ ಪ್ರಪಂಚದಲ್ಲಿ ಎಲ್ಲವೂ ಕಾರ್ಯಪ್ರಧಾನವಾದುದರಿಂದ ಇದೇ ಮೋಕ್ಷಕ್ಕೆ ಕಾರಣ ಎಂದು ತಿಳಿದು ಎಲ್ಲ ಸಮಾಜಕ್ಕೆ ಹಿತವಾದ ಕಾರ್ಯಗಳನ್ನು ಶ್ರಮವಿಲ್ಲದೆ ಮಾಡಿದ ರಾಜೇಂದ್ರಗುರುಗಳನ್ನು ಸದಾ ನಮಸ್ಕರಿಸುತ್ತೇನೆ.

ಸಮಾನಭಾವೇನ ಜನೈಃ ಸುಸೇವ್ಯಂ ಜನಾನ್ ಸಮತ್ವೇನ ಚ ಮನ್ಯಮಾನಮ್।
ಕಾಷಾಯವಸ್ತ್ರಂ ಧೃತಧರ್ಮನೇತ್ರಂ ರಾಜೇಂದ್ರವರ್ಯಂ ಪ್ರಣತೋಽಸ್ಮಿ ನಿತ್ಯಮ್ ॥ 7 ॥

ಸಮಭಾವದಲ್ಲಿ ಜನರಿಂದ ಭಜಿಸಲ್ಪಡುವ ಮತ್ತು ಜನರನ್ನು ಸಮಭಾವದಿಂದ ನೋಡುವ ಕಾಷಾಯವಸ್ತ್ರವನ್ನು (ಕಾವಿಬಟ್ಟೆಯನ್ನು) ಧರಿಸಿದ, ಧರ್ಮವೇ ಕಣ್ಣಾಗಿ ಉಳ್ಳ ರಾಜೇಂದ್ರ ಗುರುಗಳನ್ನು ಸದಾ ನಮಸ್ಕರಿಸುತ್ತೇನೆ.

ರುದ್ರಾಕ್ಷಮಾಲಾಕಲಿತಂ ಸುದೇಹಂ ಭಸ್ಮಪ್ರಭಾಸಂ ಸ್ಮಿತಚಾರುವಕ್ತ್ರಮ್।
ಸುತ್ತೂರುಪೀಠಸ್ಯ ಗುರುಂ ಗುಣೇಶಂ ರಾಜೇಂದ್ರವರ್ಯಂ ಪ್ರಣತೋಽಸ್ಮಿ ನಿತ್ಯಮ್ ॥ 8 ॥

ರುದ್ರಾಕ್ಷಿಮಾಲೆಯನ್ನು ಧರಿಸಿದ, ಸುಂದರಮೂರ್ತಿಯಾದ, ಭಸ್ಮದಿಂದ ಶೋಭಿತರಾದ, ನಗುಮೊಗದ, ಸುಂದರ ಮುಖವುಳ್ಳ ಸುತ್ತೂರುಪೀಠದ ಗುರುಗಳಾದ, ಗುಣಗಳ ಆಗರವಾದ ರಾಜೇಂದ್ರಗುರುಗಳನ್ನು ಸದಾ ನಮಸ್ಕರಿಸುತ್ತೇನೆ.

ರಾಜೇಂದ್ರಸ್ಯಾಷ್ಟಕಂ ಯಸ್ತು ಭಕ್ತಿಶ್ರದ್ಧಾಸಮನ್ವಿತಃ।
ಪ್ರಾತಃಕಾಲೇ ಪಠೇನ್ನಿತ್ಯಂ ಗುರುಕಾರುಣ್ಯಭಾಗ್ಭವೇತ್ ॥

ಯಾವನು ಈ ರಾಜೇಂದ್ರಾಷ್ಟಕವನ್ನು ಭಕ್ತಿ, ಶ್ರದ್ಧೆಗಳುಳ್ಳವನಾಗಿ ಪ್ರತಿನಿತ್ಯ ಬೆಳಗ್ಗೆ ಪಠಿಸುವನೋ ಅವನು ಗುರುವಿನ ಕಾರುಣ್ಯವನ್ನು ಹೊಂದುವನು.

ಇತಿ ಶ್ರೀಕೃಷ್ಣವಿರಚಿತಂ ಶ್ರೀರಾಜೇಂದ್ರಾಷ್ಟಕಂ ಸಂಪೂರ್ಣಮ್

ರಚನೆ : ವಿವರಣೆ
ಡಾ. ಶ್ರೀಕೃಷ್ಣ ಗಣಪತಿ ಭಟ್
ಶಿಕ್ಷಕರು, ಕೆಎಸ್ಎಸ್ ಸಂಸ್ಕೃತ ಪಾಠಶಾಲೆ, ಮೈಸೂರು



ವಾರ್ತಾವಿಹಾರ

ಕುಮಾರಸ್ವಾಮಿ ವಿರಕ್ತಮಠ

ವಿವೇಕ ಸ್ಮಾರಕ ಯುವಕರಲ್ಲಿ ಆತ್ಮವಿಶ್ವಾಸ, ನೈತಿಕ ಪ್ರಜ್ಞೆ ಬೆಳೆಸಲಿ

ವಿವೇಕ ಸ್ಮಾರಕವು ಯುವಕರಲ್ಲಿ ಆತ್ಮವಿಶ್ವಾಸ, ನೈತಿಕ ಪ್ರಜ್ಞೆ ಬೆಳೆಸುವ ಕೇಂದ್ರ ಆಗಲಿ ಎಂದು ಪರಮಪೂಜ್ಯ ಜಗದ್ಗುರುಗಳವರು ಮೈಸೂರಿನಲ್ಲಿ ಆಗಸ್ಟ್ 1ರಂದು ಲೋಕಾರ್ಪಣೆ ಗೊಂಡ ವಿವೇಕ ಸ್ಮಾರಕದ ಸ್ಮೃತಿ ಸಂಸ್ಮರಣೆ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಸ್ವಾಮಿ ವಿವೇಕಾನಂದರ ಆದರ್ಶ, ಆತ್ಮವಿಶ್ವಾಸ ಹಾಗೂ ರಾಷ್ಟ್ರಪ್ರೇಮದ ಸಂದೇಶವನ್ನು ಯುವಜನರಿಗೆ ತಲುಪಿಸುವ ಉದ್ದೇಶದಿಂದ ನಿರ್ಮಿಸ ಲಾಗಿರುವ ವಿವೇಕ ಸ್ಮಾರಕವು ಸಮಾಜಕ್ಕೆ ಅರ್ಥಪೂರ್ಣ ಕೊಡುಗೆಯಾಗಿದೆ ಎಂದು ಹೇಳಿದರು.

ಸಚಿವರಾದ ಡಾ. ಯತೀಂದ್ರ ಸಿದ್ದರಾಮಯ್ಯನವರು ಶ್ರೀ ರಾಮಕೃಷ್ಣ ಆಶ್ರಮವು ಸ್ವಾಮಿ ವಿವೇಕಾನಂದರ ಚಿಂತನೆ, ಬೋಧನೆಗಳನ್ನು ವಿಶ್ವದಲ್ಲಿ ಪಸರಿಸುವ ಕೆಲಸವನ್ನು ನಿರಂತರವಾಗಿ ಮಾಡುತ್ತಿದ್ದು, ಸಮಾಜಕ್ಕೆ ಸದಾ ಸ್ಫೂರ್ತಿದಾಯಕವಾಗಿದೆ. ಇಲ್ಲಿ ವಿದ್ಯಾರ್ಥಿಗಳಿಗೆ ಮೌಲ್ಯಾಧಾರಿತ ಶಿಕ್ಷಣವನ್ನು ನೀಡುವ ಉದ್ದೇಶ ಹೊಂದಲಾಗಿದೆ. ನಾಯಕತ್ವ ಗುಣ, ಉತ್ತಮ ಚಾರಿತ್ರ್ಯ ರೂಪಿಸುವುದು ಹಾಗೂ ವ್ಯಕ್ತಿತ್ವ ವಿಕಸನದೊಂದಿಗೆ ಆಧ್ಯಾತ್ಮಿಕ ಜ್ಞಾನವೂ ಲಭಿಸುವುದು ವಿಶೇಷ ಎಂದು ತಿಳಿಸಿದರು.

ಮೈಸೂರು ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಶ್ರೀ ಸ್ವಾಮಿ ಮುಕ್ತಿದಾನಂದಜಿ, ಶ್ರೀ ಡಿ. ನಾಗಭೂಷಣ್, ಶ್ರೀ ಎಂ.ಪಿ. ಶ್ಯಾಮ್‌ರವರು ಮಾತನಾಡಿದರು. ಶ್ರೀ ಸ್ವಾಮಿ ಯುಕ್ತೇಶಾನಂದಜಿ ಸ್ವಾಗತಿಸಿದರು. ಶ್ರೀ ಸ್ವಾಮಿ ಮಹಿಪಾಲನಂದಜಿ ವಂದಿಸಿದರು.

ಸಮಾಜದ ಉನ್ನತಿಗೆ ಬನ್ನಂಜೆಯವರ ಕೊಡುಗೆ ಅಪಾರ

ಶ್ರೀ ಬನ್ನಂಜೆ ಗೋವಿಂದಾಚಾರ್ಯರು ಸಮಾಜದ ಉನ್ನತಿಗಾಗಿ ಶ್ರಮಿಸಿದರು. ವೈಚಾರಿಕ ಪ್ರಜ್ಞೆ ಮೂಡಿಸುವ ಮೂಲಕ ಸಮಾಜವನ್ನು ಎಚ್ಚರಿಸಿದರು ಎಂದು ಪರಮಪೂಜ್ಯ ಜಗದ್ಗುರುಗಳವರು ಆಗಸ್ಟ್ 1ರಂದು ಬೆಂಗಳೂರಿನಲ್ಲಿ ಬನ್ನಂಜೆ ಗೋವಿಂದಾಚಾರ್ಯ ಪ್ರತಿಷ್ಠಾನ ಗಾಯನ ಸಮಾಜದಲ್ಲಿ ಆಯೋಜಿಸಿದ್ದ ಬನ್ನಂಜೆ 90ರ ವಿಶ್ವನಮನ ಯಾತ್ರೆಯ ಸಮಾರೋಪ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ



ಮಾತನಾಡುತ್ತಾ ತಿಳಿಸಿದರು. ಜಗತ್ತಿನ, ವಿಶೇಷವಾಗಿ ದೇಶದ ಪ್ರಮುಖ ವಿದ್ವಾಂಸರಲ್ಲಿ ಬನ್ನಂಜೆ ಗೋವಿಂದಾಚಾರ್ಯರು ಒಬ್ಬರಾಗಿದ್ದರು. ಸಾಹಿತ್ಯ, ಸಮಾಜದ ಉನ್ನತಿಗಾಗಿ ಅರ್ಪಿಸಿಕೊಂಡಿದ್ದ ಮಹಾನ್ ವ್ಯಕ್ತಿತ್ವ ಅವರದು. ಉಡುಪಿ ಅಷ್ಟಮಠಗಳ ಮಾರ್ಗದರ್ಶಕ ರಾಗಿದ್ದರು. ವೈಚಾರಿಕ ಪ್ರಜ್ಞೆ ಬೆಳೆಸಿಕೊಂಡಿದ್ದು ಸಮಾಜವನ್ನು ಎಚ್ಚರಿಸಲು ಕವಿತ್ವವನ್ನು ಸಮರ್ಪಕವಾಗಿ ಬಳಸಿಕೊಂಡಿದ್ದರು. ಬನ್ನಂಜೆ ಗೋವಿಂದಾಚಾರ್ಯರ ಬರಹವು ಶಾಸ್ತ್ರಪ್ರಜ್ಞೆ ಮತ್ತು ಪ್ರತಿಭೆಗಳ ಸಂಗಮವಾಗಿತ್ತು. ಹಲವು ಭಾಷೆಗಳಲ್ಲಿ ಪ್ರಖರ ಪಾಂಡಿತ್ಯ ಹೊಂದಿದ್ದರು. 'ತುಳು ನನ್ನ ಮಾತೃ ಭಾಷೆ, ಕನ್ನಡ ನನ್ನ ತಂದೆ ಭಾಷೆ ಹಾಗೂ ಸಂಸ್ಕೃತ ನನ್ನ ಭಾಷೆ' ಎಂದು ಆಚಾರ್ಯರು ಹೇಳುತ್ತಿದ್ದರು. ಚಲನಚಿತ್ರ ಕ್ಷೇತ್ರಕ್ಕೂ ಅವರ ಕೊಡುಗೆ ಅಪಾರವಾಗಿದೆ. 25 ಸಾವಿರ ಗಂಟೆಗಳ ಸುದೀರ್ಘ ಪ್ರವಚನ ನೀಡಿದ್ದಾರೆ. ಸಾಹಿತಿ, ನಾಟಕಕಾರ, ಅನುವಾದಕ, ಪತ್ರಕರ್ತ, ಪ್ರವಚನಕಾರ ಸೇರಿದಂತೆ ಹಲವು ವಿಧಗಳಲ್ಲಿ ಬನ್ನಂಜೆ ಗೋವಿಂದಾಚಾರ್ಯರು ಸೇವೆ ಸಲ್ಲಿಸಿದ್ದಾರೆ. ಅವರು ಸತ್ಯಾನ್ವೇಷಣೆ ಗಾಗಿ ದುಡಿಯುತ್ತಿದ್ದರು. ಆನೆ ನಡೆದದ್ದೇ ದಾರಿ ಎಂಬಂತೆ ಅವರು ವಿದ್ವತ್ತಿನ ದಾರಿಯಲ್ಲಿ ನಡೆದರು ಎಂದು ಹೇಳಿದರು.

ಉಡುಪಿಯ ಪುತ್ತಿಗೆ, ಸಿರಿಗೆರೆ, ಹರಿಹರಪುರ, ಸೋಸಲೆ ಮಠಗಳ ಶ್ರೀಗಳು, ಸಂಗೀತ ವಿದ್ವಾನ್ ವಿದ್ಯಾಭೂಷಣ, ಶ್ರೀಮತಿ ವಿನಯಾ ಪ್ರಸಾದ್, ವೀಣಾ ಬನ್ನಂಜೆ ಉಪಸ್ಥಿತರಿದ್ದರು. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಭಾರತೀಯ ಧರ್ಮ ಮಾನವೀಯ ಮೌಲ್ಯಗಳಿಂದ ಕೂಡಿದೆ

ಭಾರತದ ಸನಾತನ ಧರ್ಮ ಮಾನವೀಯ ಮೌಲ್ಯಗಳಿಂದ ರೂಪುಗೊಂಡಿದೆ ಎಂದು ಕರ್ನಾಟಕ ಉಚ್ಚ ನ್ಯಾಯಾಲಯದ ಗೌರವಾನ್ವಿತ ನ್ಯಾಯಾಧೀಶರಾದ ಶ್ರೀ ಇ.ಎಸ್. ಇಂದ್ರೇಶ್‌ರವರು ಆಗಸ್ಟ್ 2ರಂದು ಮಲೆ ಮಹದೇಶ್ವರ ಬೆಟ್ಟದ ಶ್ರೀ ಸಾಲೂರು ಬೃಹನ್ಮಠದಲ್ಲಿ ಮೈಸೂರು–ಚಾಮರಾಜನಗರ ಜಿಲ್ಲಾ ವೀರಶೈವ–ಲಿಂಗಾಯತ ಮಠಾಧಿಪತಿಗಳ ಗೋಷ್ಠಿಯಿಂದ ಮಠಾಧೀಶರು, ಮಾತಾಜಿಯವರು, ಸಾಧಕರು ಹಾಗೂ ಜಿಜ್ಞಾಸುಗಳಿಗೆ ಆಯೋಜಿಸಿರುವ ಶ್ರೀ ಮಲೆ ಮಹದೇಶ್ವರರು ಮತ್ತು ಸಮಕಾಲೀನರು ಕುರಿತ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡುತ್ತಾ ತಿಳಿಸಿದರು. ಸನಾತನ ಧರ್ಮ ಶಾಶ್ವತವಾದುದು. ಅದಕ್ಕೆ ಎಂದೂ ಅಂತ್ಯವಿಲ್ಲ. ನಮ್ಮ ದೇಶದಲ್ಲಿ ವಿಭಿನ್ನವಾದ ಸಂಸ್ಕೃತಿ, ಸಂಪ್ರದಾಯ ಪದ್ಧತಿಗಳಿವೆ. ಅವೆಲ್ಲವನ್ನೂ ನಮ್ಮ ಮುಂದಿನ ಪೀಳಿಗೆಗೆ ತಲುಪಿಸಬೇಕಿದೆ. ಪ್ರತಿಯೊಬ್ಬ ಮನುಷ್ಯನ ಪರಮ ಗುರಿ ಮೋಕ್ಷ ಸಾಧನೆಯೇ ಆಗಿದೆ. ಅದಕ್ಕೆ ಸನ್ಮಾರ್ಗದ



ನಡೆ ಅಗತ್ಯ. ನಡೆ ಮತ್ತು ನುಡಿಗಳು ಒಂದಾಗಿರಬೇಕು. ಈ ನಿಟ್ಟಿನಲ್ಲಿ ಮಠಗಳು ಪ್ರಮುಖ ಪಾತ್ರವನ್ನು ವಹಿಸುತ್ತಿವೆ. ಶಿಕ್ಷಣದ ಜೊತೆಗೆ ಸಂಸ್ಕೃತಿ ಮತ್ತು ಸಂಸ್ಕಾರವನ್ನು ನೀಡುತ್ತಿರುವ ಮಠಗಳ ಕಾರ್ಯ ಶ್ಲಾಘನೀಯವಾದುದು ಎಂದು ಹೇಳಿದರು.

ದಿವ್ಯ ಸಾನ್ನಿಧ್ಯ ವಹಿಸಿದ್ದ ಶ್ರೀ ಸುತ್ತೂರು ಮಠದ ಪರಮಪೂಜ್ಯ ಜಗದ್ಗುರುಗಳವರು ಶ್ರೀ ಮಲೆ ಮಹದೇಶ್ವರರು ಸರ್ವವನ್ನೂ ತೊರೆದು ವೈರಾಗ್ಯ ಸ್ವೀಕರಿಸಿದ ಮಹಾಪುರುಷರು. ಶ್ರೀ ಮಲೆ ಮಹದೇಶ್ವರರು ಮತ್ತು ಸಮಕಾಲೀನ ಶರಣರು ಕತ್ತಲೆ ರಾಜ್ಯವನ್ನು ಪ್ರಕಾಶಮಾನವಾಗಿ ಬೆಳೆಗಿಸಿದವರು. ತಪಶ್ಶಕ್ತಿಯಿಂದ ಈ ಭಾಗದ ಜನರ ಜೀವನವನ್ನು ಪಾವನಗೊಳಿಸಿದವರು. ಭಗವಂತ ಹೇಗಿದ್ದಾನೆಂಬುದು ಮನುಷ್ಯನ ಕಲ್ಪನಾಶಕ್ತಿಗೆ ಸೇರಿದುದು. ಮನುಷ್ಯ ಭಾವಿಸಿದ ಹಾಗೆ ಭಗವಂತ ಇರುತ್ತಾನೆ. ಮಂಟೇಸ್ವಾಮಿ, ಸಿದ್ಧಪ್ಪಾಜಿ, ಘನಲಿಂಗ ಶಿವಯೋಗಿಗಳು, ನಿಜಗುಣ ಶಿವಯೋಗಿಗಳು ಸೇರಿದಂತೆ ಹಲವಾರು ಶರಣರ ಕುರಿತಾಗಿ ಈ ವಿಚಾರ ಸಂಕಿರಣದಲ್ಲಿ ಚಿಂತನ–ಮಂಥನ ಮಾಡಲಾಗವುದು. ಗೋಷ್ಠಿಯಿಂದ 2007ರಿಂದಲೂ ಮೌಲಿಕವಾದ ವಿಷಯಗಳ ಕುರಿತು ವಿಚಾರ ಸಂಕಿರಣಗಳನ್ನು ಏರ್ಪಡಿಸಿಕೊಂಡು ಬರಲಾಗುತ್ತಿದೆ ಎಂದು ಹೇಳಿದರು.

ಹುಬ್ಬಳ್ಳಿ ಶ್ರೀ ಮೂರುಸಾವಿರ ಮಠದ ಜಗದ್ಗುರು ಶ್ರೀ ಗುರುಸಿದ್ಧ ರಾಜಯೋಗೀಂದ್ರ ಮಹಾಸ್ವಾಮಿಗಳವರು ಹಿಂದೆ ಎಲ್ಲ ಮಠಗಳಲ್ಲಿಯೂ ಶಿವಾನುಭವ ಕಾರ್ಯಕ್ರಮಗಳು ಜರುಗುತ್ತಿದ್ದವು. ಮಠಾಧಿಪತಿಗಳೆಲ್ಲರೂ ಶಿವಾನುಭಾವಿಗಳಾಗಿರುತ್ತಿದ್ದರು. ಆದರೆ ಇಂದಿನ ಆಧುನಿಕ ಶಿಕ್ಷಣ ಪದ್ಧತಿಯಿಂದ ಪಾರಂಪರಿಕ ಶಿಕ್ಷಣದ ಮೌಲ್ಯಗಳು ಗೌಣವಾಗುತ್ತಿವೆ. ನಾನು ಯಾರು ಎಂಬುದನ್ನು ಅರಿಯಬೇಕಾದುದು ಅಧ್ಯಾತ್ಮದ ಮೊದಲು ಮೆಟ್ಟಿಲು. ಶ್ರೀ ಮಲೆ ಮಹದೇಶ್ವರರು ಮಹಾಯೋಗಿಗಳು. ಅವರ ಯೋಗಿಕಶಕ್ತಿ ಅದ್ಭುತವಾಗಿತ್ತು. ಸಕಲ ಜೀವರಾಶಿಗಳ ಮೇಲೂ ದಯೆಯನ್ನು ಹೊಂದಿದ್ದರು. ಪೂಜ್ಯ ಸುತ್ತೂರು ಶ್ರೀಗಳ ಮಾರ್ಗದರ್ಶನದಲ್ಲಿ ಮೈಸೂರು ಮತ್ತು ಚಾಮರಾಜನಗರ ಮಠಾಧಿಪತಿಗಳ ಗೋಷ್ಠಿಯಿಂದ ಇಂತಹ ಅತ್ಯಮೂಲ್ಯವಾದ ಚಿಂತನವನ್ನು ಆಯೋಜಿಸಿರುವುದು ಮಾದರಿಯಾದುದು ಎಂದು ತಿಳಿಸಿದರು.

ತುಮಕೂರು ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ಮಠಾಧಿಪತಿಗಳ ಸಂಘಟನೆ ಇಡೀ ರಾಜ್ಯಕ್ಕೆ ಮಾದರಿಯಾಗಿರುವುದು ಹೆಮ್ಮೆಯ ಸಂಗತಿ. ಇದು ರಾಜೇಂದ್ರ ಶ್ರೀಗಳವರ ದೂರದೃಷ್ಟಿಯ ಫಲವಾಗಿದೆ. ಅವರು ಬಹುದೊಡ್ಡ ತ್ಯಾಗಮೂರ್ತಿಗಳು. ಅವರು ಸಮಾಜಕ್ಕೆ ನೀಡಿದ



ಕೊಡುಗೆಗಳಲ್ಲಿ ಈ ಮಠಾಧಿಪತಿಗಳ ಗೋಷ್ಠಿ ಕೀರಿಟವಿದ್ದಂತೆ. ತನ್ನನ್ನು ತಾನು ಅರಿಯವುದು ಕಠಿಣವಾದುದು. ಇನ್ನೊಬ್ಬರಿಗೆ ಉಪದೇಶ ಮಾಡುವುದು ಸುಲಭವಾದುದು. ಜ್ಞಾನ ಹಂಚಿದಷ್ಟು ಹೆಚ್ಚುತ್ತದೆ. ಇಂತಹ ವಿಚಾರ ಸಂಕಿರಣಗಳು ಜೀವನದಲ್ಲಿ ಮಹತ್ವದ ಪ್ರಭಾವ ಬೀರುತ್ತವೆ ಎಂದರು.

ಶಾಸಕರಾದ ಶ್ರೀ ಹೆಚ್.ಎಂ. ಗಣೇಶ್ ಪ್ರಸಾದ್‌ರವರು ಕು. ಹೆಚ್.ಎಸ್. ಅಂಬಿಕಾರವರು ಸಂಪಾದಿಸಿರುವ ಹುಲಿಯೂರುದುರ್ಗದ ಶ್ರೀ ಸಿದ್ಧಗಂಗಾ ಮಠದಲ್ಲಿ ನೆರವೇರಿದ ಎಡೆಯೂರು ಶ್ರೀ ತೋಂಟದ ಸಿದ್ಧಲಿಂಗೇಶ್ವರರು ವಿಷಯ ಕುರಿತಾದ ಆರನೆಯ ವಿಚಾರ ಸಂಕಿರಣದ ಕೃತಿಯನ್ನು ಬಿಡುಗಡೆ ಮಾಡಿ ಮಕ್ಕಳಲ್ಲಿ, ಯುವಕರಲ್ಲಿ ಧಾರ್ಮಿಕ ಪ್ರಜ್ಞೆಯನ್ನು ಉಂಟುಮಾಡಬೇಕಾಗಿದೆ ಎಂದು ತಿಳಿಸಿದರು. ಮಾಜಿ ಶಾಸಕರಾದ ಶ್ರೀಮತಿ ಪರಿಮಳಾ ನಾಗಪ್ಪ, ಕೊಳ್ಳೇಗಾಲ ಮಾನಸ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿಗಳಾದ ಡಾ. ಎಸ್. ದತ್ತೇಶ್ ಕುಮಾರ್ ಹಾಗೂ ಹನೂರು ಜನಧ್ವನಿ ಟ್ರಸ್ಟ್ ಅಧ್ಯಕ್ಷರಾದ ಶ್ರೀ ವೆಂಕಟೇಶ್‌ರವರುಗಳು ಉಪಸ್ಥಿತರಿದ್ದರು. ಕೆಸ್ತೂರು ಮಠದ ಶ್ರೀ ತೋಂಟದಾರ್ಯ ಸ್ವಾಮಿಗಳು ಪ್ರಾರ್ಥಿಸಿದರು. ಸಾಲೂರು ಮಠದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು ಸ್ವಾಗತಿಸಿದರು. ಗೋಷ್ಠಿಯ ಕಾರ್ಯದರ್ಶಿಗಳಾದ ಶ್ರೀ ಇಮ್ಮಡಿ ಉದ್ದಾನ ಸ್ವಾಮಿಗಳು ಪ್ರಾಸ್ತಾವಿಕ ಮಾತುಗಳನ್ನಾಡಿದರು. ಕುರುಬೂರು ಮಠದ ಶ್ರೀ ಮಲ್ಲಿನಾಥ ಶಿವಾಚಾರ್ಯ ಸ್ವಾಮಿಗಳು ವಂದಿಸಿದರು. ನವಿಲೂರು ಮತ್ತು ಚುಂಚನಹಳ್ಳಿ ಮಠದ ಶ್ರೀ ಚನ್ನಬಸವ ಸ್ವಾಮಿಗಳು ಕಾರ್ಯಕ್ರಮ ನಿರೂಪಿಸಿದರು.

ಅಂತರಂಗದ ಸಾಕ್ಷಾತ್ಕಾರಕ್ಕೆ ಭಜನೆ ಅವಶ್ಯಕ

ಅಂತರಂಗದ ಸಾಕ್ಷಾತ್ಕಾರಕ್ಕೆ ಭಜನೆ ಅವಶ್ಯಕ ಎಂದು ಪರಮಪೂಜ್ಯ ಜಗದ್ಗುರುಗಳವರು ಸುತ್ತೂರು ಶ್ರೀಕ್ಷೇತ್ರದಲ್ಲಿ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ಭಜನಾ ಕಾರ್ಯಗಾರದಲ್ಲಿ ಆಗಸ್ಟ್ 2ರಂದು ಆಶೀರ್ವಚನ ನೀಡುತ್ತಾ ತಿಳಿಸಿದರು. ಭಜನೆಯು ಪಾರಂಪರಿಕವಾಗಿ ಬಂದ ಕಲೆಯಾಗಿದೆ. ಮಾನವನನ್ನು ಲೌಕಿಕ ಬದುಕಿನಿಂದ ಆಧ್ಯಾತ್ಮಿಕತೆಯ ಕಡೆಗೆ ಕೊಂಡೊಯ್ಯುವ ದಿವ್ಯಶಕ್ತಿಯಾಗಿದೆ. ಶಂಕರಾಚಾರ್ಯ, ರಾಮಾನುಜಾಚಾರ್ಯ, ಬಸವಣ್ಣ ಹಾಗೂ ದಾಸ ಪರಂಪರೆಯಿಂದ ಇದು ಬೆಳೆದು ಬಂದಿದೆ. ಭಜನೆಯ ಹಾಡುಗಾರಿಕೆಯಲ್ಲಿ ಕರ್ನಾಟಕ ಹಾಗೂ ಹಿಂದುಸ್ತಾನಿ ಸಂಗೀತದ ಸಮ್ಮಿಲನವಿದ್ದು ಎಲ್ಲರ ಮಾನಸಿಕ ಶಾಂತಿ ಹಾಗೂ ಸಂತೋಷಕ್ಕೆ ಕಾರಣವಾಗಿದೆ ಎಂದು ತಿಳಿಸಿದರು.



ಧಾರವಾಡದ ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎನ್.ಬಿ. ಪ್ರಕಾಶ್ ರವರು ಭಜನಾ ಕಾರ್ಯಗಾರವನ್ನು ಉದ್ಘಾಟಿಸಿ ಭಜನೆಯು ಗ್ರಾಮೀಣ ಜನರಲ್ಲಿ ಒಗ್ಗಟ್ಟು ಹಾಗೂ ಸಹಕಾರ ಮನೋಭಾವ ತರುತ್ತದೆ. ಮನಸ್ಸಿನ ಲೌಕಿಕ ಚಿಂತನೆಗಳನ್ನು ದೂರವಿರಿಸಿ ದೈವೀ ಭಾವನೆಯನ್ನು ಮೂಡಿಸುತ್ತದೆ. ಇದು ಪಾರಂಪರಿಕ ಸಂಸ್ಕೃತಿಯನ್ನು ಎತ್ತಿ ಹಿಡಿಯುವ ಜನಪದ ಕಲೆಯಾಗಿದೆ ಎಂದು ನುಡಿದರು.

ದಾವಣಗೆರೆ ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಬಿ. ಇ. ರಂಗಸ್ವಾಮಿ ಯವರು ಭಜನಾ ಪರಿಕರಗಳನ್ನು ವಿತರಿಸಿ, ಸಮೂಹ ಮಾಧ್ಯಮಗಳು ಬರುವ ಮೊದಲು ಗ್ರಾಮೀಣ ಭಾಗದಲ್ಲಿ ನಾಟಕ, ವೀರಗಾಸೆ, ಕೋಲಾಟ ಹಾಗೂ ದೇವಾಲಯಗಳಲ್ಲಿ ನಡೆಯುತ್ತಿದ್ದ ಭಜನೆಗಳು ಜನರಿಗೆ ಮನೋರಂಜನೆಯನ್ನು ನೀಡುತ್ತಿದ್ದವು. ಭಜನೆ ಜಾತಿ, ಮತ, ಧರ್ಮದ ಭೇದವಿಲ್ಲದೆ ಜಾತ್ಯತೀತ ಮನೋಭಾವವನ್ನು ಉಂಟುಮಾಡುವ ಸಾಧನವಾಗಿದೆ ಎಂದು ತಿಳಿಸಿದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯಮಟ್ಟದ ಉಪಾಧ್ಯಕ್ಷರಾದ ಶ್ರೀ ಕೆ. ರಘುರಾಮ್ ವಾಜಪೇಯಿಯವರು ಭಜನೆಯ ಮೂಲಕ ಭಗವಂತನಿಗೆ ನವವಿಧ ಭಕ್ತಿಯನ್ನು ಸಲ್ಲಿಸಿ ಬ್ರಹ್ಮಾನಂದ ಪಡೆದು ಸಂತೋಷಪಡಬಹುದು. ಪ್ರಕೃತಿಯು ಸಂಗೀತ, ತಾಳ, ಲಯದೊಂದಿಗೆ ಸೃಷ್ಟಿಯಾಗಿದೆ. ಗಿಡ ಮರ ಬಳ್ಳಿಗಳಲ್ಲಿ, ಬೀಸುವ ಗಾಳಿಯಲ್ಲಿ, ಪಕ್ಷಿ ಹಾಗೂ ಜೀವ ಸಂಕುಲಗಳಲ್ಲಿ ಸಂಗೀತ ತುಂಬಿದೆ. ಇಂತಹ ಭವ್ಯ ಪರಂಪರೆಯನ್ನು ಉಳಿಸಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದರು.

ಮೈಸೂರು ಮಹಾನಗರಪಾಲಿಕೆಯ ಹೆಚ್ಚುವರಿ ಆಯುಕ್ತರಾದ ಶ್ರೀಮತಿ ಬಿ.ಎನ್. ವೀಣಾರವರು ಭಜನೆಯು ಭಕ್ತಿಯನ್ನು ವ್ಯಕ್ತಪಡಿಸುವ ವಿಶೇಷ ಸಾಧನವಾಗಿದೆ. ದೇಹ ಮತ್ತು ಆತ್ಮದ ಸಂಯಮಕ್ಕೆ ಭಜನೆ ಬಹಳ ಸಹಕಾರಿಯಾಗಿದೆ. ಸಂಗೀತ ಪರಂಪರೆಯನ್ನು ಪ್ರಾರಂಭಿಸಿದ ಪುರಂದರದಾಸರು ಹಾಗೂ ವಾದಿರಾಜರ ಕೀರ್ತನೆಗಳನ್ನು ಸಮಾಜಕ್ಕೆ ಪರಿಚಯಿಸಿದ ಕೀರ್ತಿ ಭಜನಾ ಪರಂಪರೆಗೆ ಸಲ್ಲುತ್ತದೆ ಎಂದು ನುಡಿದರು.

ವಿಶ್ರಾಂತ ಪ್ರಾಧ್ಯಾಪಕರಾದ ಡಾ. ಕೆ. ಅನಂತರಾಮುರವರು ಭಜನೆಯು ಮನಸ್ಸಿಗೆ ಶಾಂತಿ, ದೇವರಲ್ಲಿ ಭಕ್ತಿ ಹಾಗೂ ಸಮಾಜದಲ್ಲಿ ಒಗ್ಗಟ್ಟು ಮೂಡಿಸಲು ಸಹಕಾರಿಯಾಗಿದೆ. ಆಧ್ಯಾತ್ಮಿಕ ಉನ್ನತಿಗೆ ಮತ್ತು ಮನಸ್ಸಿನ ಆರೋಗ್ಯಕ್ಕೆ ನೆರವಾಗುತ್ತದೆ. ಭಗವಂತನ ಸೇವೆ ಮಾಡಲು ಇರುವ ಒಂದು ವಾಙ್ಮಯ ಕ್ರಿಯೆಯಾಗಿದೆ. ದಾಸರು, ಸಂತರು ಭಗವಂತನನ್ನು ಒಲಿಸಿಕೊಳ್ಳಲು ಈ ಮಾರ್ಗವನ್ನು ಅನುಸರಿಸಿದರು. ಸುತ್ತೂರು ಶ್ರೀಮಠವು ನಾಡಿನ



ಸಂಸ್ಕೃತಿಯನ್ನು ಸಂರಕ್ಷಿಸಲು ಸಂಗೀತ, ನಾಟಕ, ಭಜನೆ, ಧ್ಯಾನ ಮುಂತಾದ ಹಲವಾರು ಕಾರ್ಯಕ್ರಮಗಳನ್ನು ಏರ್ಪಡಿಸುವುದರ ಮೂಲಕ ಆಧ್ಯಾತ್ಮಿಕ ಉನ್ನತಿಗೆ ಶ್ರಮಿಸುತ್ತಿದೆ ಎಂದು ತಿಳಿಸಿದರು.

ನಂತರ ಭಜನಾ ಪ್ರಾತ್ಯಕ್ಷಿಕೆ, ನೃತ್ಯ ತರಬೇತಿ ಕಾರ್ಯಕ್ರಮಗಳು ಜರುಗಿದವು. ಶ್ರೀಮತಿ ಭಾಗ್ಯಲಕ್ಷ್ಮಿ ಹಾಗೂ ಶ್ರೀಮತಿ ಕೆ. ಜಯಶ್ರೀ ಪ್ರಾರ್ಥಿಸಿದರು. ಪ್ರೊ. ಡಿ.ಎಸ್. ಸದಾಶಿವಮೂರ್ತಿ ಸ್ವಾಗತಿಸಿದರು. ಶ್ರೀ ಆರ್. ಎಸ್. ಕುಮಾರ್ ವಂದಿಸಿದರು, ಶ್ರೀಮತಿ ಎಸ್. ಸವಿತ ಕಾರ್ಯಕ್ರಮ ನಿರೂಪಿಸಿದರು.

ಮಲೆ ಮಹದೇಶ್ವರರು ಆಧ್ಯಾತ್ಮಿಕ ಸ್ಫೂರ್ತಿಯ ದೈವಿಕ ಮೂರ್ತಿಗಳು

ಮಲೆ ಮಹದೇಶ್ವರರು ಆಧ್ಯಾತ್ಮಿಕ ಸ್ಫೂರ್ತಿಯ ದೈವಿಕ ಮೂರ್ತಿಗಳು ಎಂದು ಮೈಸೂರು ಶ್ರೀ ಕುಂದೂರು ಮಠದ ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು ಆಗಸ್ಟ್ 3ರಂದು ಮಲೆ ಮಹದೇಶ್ವರ ಬೆಟ್ಟದ ಶ್ರೀ ಸಾಲೂರು ಮಠದಲ್ಲಿ ಮೈಸೂರು ಚಾಮರಾಜನಗರ ವೀರಶೈವ–ಲಿಂಗಾಯತ ಮಠಾಧಿಪತಿಗಳ ಗೋಷ್ಠಿಯಿಂದ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಆಯೋಜಿಸಿರುವ ವಿಚಾರ ಸಂಕಿರಣದ ಮೊದಲ ಗೋಷ್ಠಿಯಲ್ಲಿ ಶ್ರೀ ಮಹದೇಶ್ವರರ ಜೀವನ ಮತ್ತು ಸಾಹಿತ್ಯ ಕುರಿತು ಮಾತನಾಡುತ್ತಾ ತಿಳಿಸಿದರು. ಮಹದೇಶ್ವರರ ಕುರಿತಾದ ಬಹುತೇಕ ಸಾಹಿತ್ಯ ಜನಪದರಿಂದಲೇ ಸೃಷ್ಟಿಯಾಗಿದೆ. ಅವರ ಕುರಿತಾಗಿ ಶಿಲಾ ಶಾಸನಗಳು ಮತ್ತು ತಾಮ್ರ ಶಾಸನಗಳಲ್ಲಿಯೂ ಉಲ್ಲೇಖಗಳಿವೆ. ಹರದನಹಳ್ಳಿ ಮತ್ತು ಹೈದರಾಲಿಯ ಶಾಸನಗಳು ಇದರಲ್ಲಿ ಪ್ರಮುಖವಾದವು. ಶಿಷ್ಟ ಸಾಹಿತ್ಯದಲ್ಲಿ ಮಹದೇಶ್ವರರ ಕುರಿತು ಹಲವಾರು ಗ್ರಂಥಗಳಿವೆ. ಮಹದೇಶ್ವರರ ಸಾಂಗತ್ಯ, ರಾಜಾವಳಿ ಕಥೆ, ಶ್ರೀ ಸುತ್ತೂರು ವೀರಸಿಂಹಾಸನ ಗುರುಪರಂಪರೆ, ನಿರಂಜನವಂಶ ರತ್ನಾಕರ ಕೃತಿಗಳಲ್ಲಿ ಮಹದೇಶ್ವರರ ಜೀವನದ ಕುರಿತಾಗಿ ಉಲ್ಲೇಖಗಳಿವೆ. ತಮಿಳು ಸಾಹಿತ್ಯದಲ್ಲಿ ಮಹದೇಶ್ವರರನ್ನು ನಿರ್ಮಾಯ ಗಣೇಶ್ವರ ಎಂದು ಕರೆಯಲಾಗಿದೆ. ಆಧುನಿಕ ಸಾಹಿತ್ಯದಲ್ಲಿ ಮಲೆಯೂರು ಗುರುಸ್ವಾಮಿಯವರ ಮಹಾಯಾತ್ರಿಕ ಕಾದಂಬರಿಯಲ್ಲಿ ಮಹದೇಶ್ವರರ ಅತ್ಯಂತ ವಿಶಿಷ್ಟವಾಗಿ ಚಿತ್ರಿಸಲಾಗಿದೆ. ದಕ್ಷಿಣ ಕರ್ನಾಟಕದ ಬಹುತೇಕ ಜಾನಪದ ಸಾಹಿತ್ಯ ಮಹದೇಶ್ವರರ ಕುರಿತಾಗಿಯೇ ಇದೆ. ಹುಟ್ಟಿದ್ದು ಉತ್ತರ ದೇಶ, ಬೆಳದಿದ್ದು ಕತ್ತಲ ರಾಜ್ಯದಲ್ಲಿ ಎಂದು ಜಾನಪದ ಸಾಹಿತ್ಯದಲ್ಲಿ ಇದೆ. ಬಹುತೇಕ ಗ್ರಂಥಗಳಲ್ಲಿ ಶ್ರೀಶೈಲದಿಂದ ಬಂದರು ಎಂಬ ಉಲ್ಲೇಖವಿದೆ. ಮಹದೇಶ್ವರರು ಕತ್ತಲ ರಾಜ್ಯದಲ್ಲಿ ಸಂಚರಿಸಿ ತಪಶ್ಶಕ್ತಿಯಿಂದ ಜನರನ್ನು ಮೂಡನಂಬಿಕೆಗಳಿಂದ ಹೊರತಂದರು. ಸಿದ್ಧನಂಜ ದೇಶಿಕೇಂದ್ರ



ಮಹಾಸ್ವಾಮಿಗಳವರ ಕಾಲದಲ್ಲಿ ಮಹದೇಶ್ವರರು ಸುತ್ತೂರು ಮಠಕ್ಕೆ ಬಂದು ರಾಗಿ ಬೀಸುವ ಕಾಯಕ ಮಾಡಿದ ಐತಿಹ್ಯವಾಗಿ ಶ್ರೀಮಠದಲ್ಲಿ ರಾಗಿ ಬೀಸುವ ಕಲ್ಲನ್ನು ನೋಡಬಹುದಾಗಿದೆ. ಮಹದೇಶ್ವರರು ಇಲ್ಲಿನ ಎಪ್ಪತ್ತೇಳು ಮಲೆಗಳಲ್ಲಿ ಸಂಚರಿಸಿ ಪವಾಡಗಳನ್ನು ಮಾಡಿದರು. ಜನರಲ್ಲಿ ಜಾಗೃತಿ ಮೂಡಿಸಿದರು. ವಜ್ರಮಲೆಯಲ್ಲಿ ಸಾಲೂರು ಮಠವನ್ನು ಸ್ಥಾಪಿಸಿದರು. ಬೆಟ್ಟದಲ್ಲಿ ನಿರ್ವಿಕಲ್ಪ ಸಮಾಧಿಯಾದರು. ತಮಿಳುನಾಡು, ಕರ್ನಾಟಕ, ಕೇರಳ, ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶಗಳಿಂದ ಮಲೆ ಮಹದೇಶ್ವರ ಬೆಟ್ಟಕ್ಕೆ ಭಕ್ತಾದಿಗಳು ಸಹಸ್ರಾರು ಸಂಖ್ಯೆಯಲ್ಲಿ ಬರುತ್ತಾರೆ ಎಂದು ಹೇಳಿದರು.

ಬೆಂಗಳೂರು ಬೇಲಿಮಠದ ಶ್ರೀ ಶಿವರುದ್ರ ಸ್ವಾಮಿಗಳು ಶರಣ ಪರಂಪರೆಯಲ್ಲಿ ಅವರ ಕುರಿತಾದ ಲೌಕಿಕ ಜೀವನದ ಬಗ್ಗೆ ಹುಡುಕದೇ ಅವರ ಅನುಭಾವಿಕ ನೆಲೆಯನ್ನು ಕಂಡುಕೊಳ್ಳುವುದು ಬಹಳ ಮುಖ್ಯ. 12ನೇ ಶತಮಾನದಲ್ಲಿ ಕಲ್ಯಾಣ ಭಕ್ತಿಯ ಬೀಡಾಗಿತ್ತು. ಅಲ್ಲಿನ ಶರಣರೆಲ್ಲ ಸರ್ವಾಂಗ ಲಿಂಗಿಗಳಾಗಿದ್ದರು. ಕಲ್ಯಾಣ ಕ್ರಾಂತಿಯ ನಂತರ ಹಲವಾರು ಶರಣರು ಕತ್ತಲೆಯ ರಾಜ್ಯದ ಕಡೆಗೆ ಬಂದರು. ಅನೇಕರು ಇಲ್ಲಿನ ಕಾವೇರಿ ತೀರದಲ್ಲಿ ನೆಲೆಸಿದರು. ಅವರು ಇಲ್ಲಿನ ಜನರ ಅಂತರಂಗವನ್ನು ಬೆಳಗಿಸಿದರು. ಇಲ್ಲಿನ ಭಕ್ತರ ಅಂತರಂಗದ ಭಾವನೆಯಲ್ಲಿಯೇ ಮಹದೇಶ್ವರರನ್ನು ಅರಿಯಬಹುದಾಗಿದೆ ಎಂದು ತಿಳಿಸಿದರು.

ಮುಡಿಗುಂಡದ ಶ್ರೀ ಶ್ರೀಕಂಠ ಸ್ವಾಮಿಗಳು ಎರಡನೆಯ ಗೋಷ್ಠಿಯಲ್ಲಿ ಶ್ರೀ ಮಹದೇಶ್ವರರ ಸಮಕಾಲೀನರು ಮತ್ತು ಇತರ ಶರಣರು ಕುರಿತು ಮಾತನಾಡುತ್ತಾ ಶರಣರ ಚಿಂತನೆಗಳನ್ನು ಕೇವಲ ವೈಚಾರಿಕ ನೆಲೆಯಲ್ಲಿ ಮಾತ್ರ ನೋಡದೆ ಅನುಭಾವದ ನೆಲೆಯಲ್ಲಿಯೂ ನೋಡಬೇಕು. ಮಹದೇಶ್ವರರ ಸಮಕಾಲೀನರಾದ ಕೊಂಗಳ್ಳಿ ಶ್ರೀ ಮಲ್ಲಿಕಾರ್ಜುನ, ಮಾರ್ಟಳ್ಳಿಯ ಶ್ರೀ ಬ್ರಹ್ಮೇಶ್ವರರು, ಬರಗೂರಿನ ಶ್ರೀ ಬಂದೇಶ್ವರರು, ಗೇರುಮಾಳದ ಶ್ರೀ ಜಡೆಸ್ವಾಮಿ, ಹೊಂಡರಬಾಳು ಸಿದ್ದೇಶ್ವರರು, ವೀರೇಶ್ವರರು, ಬೊಮ್ಮೇಶ್ವರರು ಮೊದಲಾದವರು ಅಜ್ಞಾನದ ಕತ್ತಲೆಯನ್ನು ಹೋಗಲಾಡಿಸಿ ಸಮಾಜದ ಕಟ್ಟಕಡೆಯ ಜನರನ್ನು ಮೇಲೆತ್ತುವ ಕಾರ್ಯವನ್ನು ಮಾಡಿದರು. ಇವರೆಲ್ಲರೂ ಸತ್ಯವನ್ನು ಪ್ರಮಾಣೀಕರಿಸಿ ನೋಡಿದವರು. ಮೂಲ ಸೌಕರ್ಯಗಳು ಇಲ್ಲದಿದ್ದ ಆ ದಿನಮಾನದಿಂದ ಬೆಟ್ಟದ ಜನರು ಇಂದಿಗೂ ಮಹದೇಶ್ವರರನ್ನೇ ನಂಬಿ ಬದುಕುತ್ತಿದ್ದಾರೆ ಎಂದು ತಿಳಿಸಿದರು.

ಬೆಂಗಳೂರು ಶ್ರೀ ಪವಾಡ ಬಸವಣ್ಣದೇವರ ಮಠದ ಶ್ರೀ ಸಿದ್ಧಲಿಂಗ ಸ್ವಾಮಿಗಳು ಮಠಾಧಿಪತಿಗಳ ಗೋಷ್ಠಿಯಿಂದ ಏರ್ಪಡಿಸಿರುವ ವಿಚಾರ ಸಂಕಿರಣ ಒಳ್ಳೆಯ ಕಾರ್ಯವಾಗಿದೆ. ಇದರ ಮೂಲಕ ಮತ್ತೆ ನಾವು ಶರಣರನ್ನು ನೆನೆಯುವ ಅವಕಾಶ



ದೊರೆತಿದೆ. ಅವರ ಕಾಯಕ, ದಾಸೋಹ ಸೇವೆಗಳನ್ನು ಚಿಂತನ ಮಂಥನ ಮಾಡಲು ಇದು ಉತ್ತಮ ವೇದಿಕೆಯಾಗಿದೆ ಎಂದರು.

ಮೈಸೂರು ವಿಶ್ವವಿದ್ಯಾನಿಲಯದ ಗಣಕ ವಿಜ್ಞಾನ ವಿಭಾಗದ ಹಿರಿಯ ಪ್ರಾಧ್ಯಾಪಕರಾದ ಡಾ. ಡಿ.ಎಸ್. ಗುರುರವರು ಮೂರನೆಯ ಗೋಷ್ಠಿಯಲ್ಲಿ ಶ್ರೀ ಕಂಬಳೀಶ್ವರರು, ಶ್ರೀ ಕೆಂಡಗಣ್ಣ ಸ್ವಾಮಿಗಳು ಮತ್ತು ಶ್ರೀ ಗುರುಮಲ್ಲೇಶ್ವರರ ಜೀವನ ಮತ್ತು ಸಾಹಿತ್ಯ ಕುರಿತು ಮಾತನಾಡುತ್ತಾ ಕಾಯಕದ ಮಲ್ಲಯ್ಯನ ಹೆಸರಿನ ಮಲ್ಲನಮೂಲೆಯ ಶ್ರೀ ಗುರು ಕಂಬಳೀಶ್ವರರು ಪ್ರತಿನಿತ್ಯ ದಾಸೋಹವನ್ನು ಏರ್ಪಡಿಸಿಕೊಂಡು ಬಂದವರು. ಕಾಯಕ ಜೀವಿಗಳು, ದಾಸೋಹಿಗಳು, ಶಿವಯೋಗ ನಿಷ್ಠರಾಗಿದ್ದವರು. ಸರಳ ಜೀವನವನ್ನು ಬೋಧಿಸಿದವರು. ಶ್ರೀ ಕೆಂಡಗಣ್ಣ ಸ್ವಾಮಿಗಳು ಹಾವೇರಿ ಜಿಲ್ಲೆಯ ಶಿಗ್ಗಾಂವಿಯ ರಾಜಮನೆತನದವರು. ಆಧ್ಯಾತ್ಮದ ಒಲವು ಹೊಂದಿ ಬಂಕಾಪುರದ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳ ಮಾರ್ಗದರ್ಶನದಲ್ಲಿ ಹೊನ್ನಾಳಿ, ಶಿವಗಂಗೆ, ಸಿದ್ಧಗಂಗೆ, ಬೇಲಿಮಠಗಳಲ್ಲಿ ಸಂಚರಿಸಿ ಶಿವಯೋಗ, ಹಠಯೋಗ, ಮಂತ್ರಯೋಗ, ಲಯಯೋಗ ಮತ್ತು ರಾಜಯೋಗಗಳಲ್ಲಿ ಸಿದ್ಧಿಯನ್ನು ಸಾಧಿಸಿ ಜನರ ಶ್ರೇಯೋಭಿವೃದ್ಧಿಗೆ ಶ್ರಮಿಸಿದರು. ಶಿವಮೊಗ್ಗದ ಚವುಳಂಗದಿಂದ ದೇವನೂರಿಗೆ ಬಂದ ಶ್ರೀ ಗುರುಮಲ್ಲೇಶ್ವರರು ಈ ಭಾಗದಲ್ಲಿ ದಾಸೋಹದ ಸಂಸ್ಕೃತಿಯನ್ನು ಪಸರಿಸಿದವರಲ್ಲಿ ಪ್ರಮುಖರು. ಕಾಯಕ ದಾಸೋಹದ ನಿಜಾಚರಣೆಯನ್ನು ಜಾರಿಗೆ ತಂದವರು. ಕಂತೆಭಿಕ್ಷದ ಮೂಲಕ ದಾಸೋಹವನ್ನು ನಡೆಸಿಕೊಂಡು ಬಂದವರು. ಮುನ್ನೂರಕ್ಕೂ ಹೆಚ್ಚು ದಾಸೋಹ ಮಠಗಳು ಮತ್ತು ಭಜನಾ ಸಂಘಗಳು ಅವರ ಹೆಸರಿನಲ್ಲಿ ನಡೆಯುತ್ತಿವೆ. ಅವರು ಶ್ರಮದ ಬೆಲೆಯನ್ನು ತಿಳಿಸಿಕೊಟ್ಟರು. ದೇವದಾಸಿ ಪದ್ಧತಿಯನ್ನು ನಿರ್ಮೂಲನೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಬಸವತತ್ತ್ವವನ್ನು ಅವರು ತಮ್ಮ ಕಾಯಕದ ಮೂಲಕ ಜಾರಿಗೆ ತಂದರು ಎಂದು ತಿಳಿಸಿದರು.

ಬಳ್ಳಾರಿಯ ಶ್ರೀ ಕಲ್ಯಾಣಸ್ವಾಮಿ ಮಠದ ಶ್ರೀ ಕಲ್ಯಾಣ ಸ್ವಾಮಿಗಳು ಇಲ್ಲಿ ಚಿಂತನ ಮಂಥನಕ್ಕಾಗಿ ಆಯ್ಕೆಯಾಗಿರುವ ವಿಷಯಗಳು ಅತ್ಯಂತ ಮೌಲ್ಯಯುತವಾದುವು. ಅದನ್ನು ಇಲ್ಲಿ ನೆರೆದಿರುವ ಮಠಾಧಿಪತಿಗಳೆಲ್ಲರೂ ಸದುಪಯೋಗಪಡಿಸಿಕೊಳ್ಳಬೇಕು ಎಂದು ಹೇಳಿದರು.

'ಸಮಾಜಸೇವೆ ಮತ್ತು ಅಧ್ಯಾತ್ಮ ಸಾಧನೆ : ಮಠಾಧಿಪತಿಗಳ ಜೀವನ ಸಮನ್ವಯ' ವಿಷಯ ಕುರಿತು ನಡೆದ ಸಂವಾದ ಗೋಷ್ಠಿಯಲ್ಲಿ ಇಳಕಲ್ಲಿನ ಶ್ರೀ ಗುರುಮಹಾಂತ ಸ್ವಾಮಿಗಳು ಅಧ್ಯಕ್ಷತೆ ವಹಿಸಿದ್ದರು. ಪಡಗೂರು ಶ್ರೀಗಳು, ಅರಮೇರಿ ಶ್ರೀಗಳು, ಬೀದರಿನ



ಡಾ. ಮಾತೆ ಗಂಗಾಂಬಿಕೆಯವರು ಸಂವಾದಕಾರರಾಗಿದ್ದರು. ಚಿತ್ರದುರ್ಗದ ಡಾ. ಶ್ರೀ ಬಸವಕುಮಾರ ಸ್ವಾಮಿಗಳು ಸಮನ್ವಯಕಾರರಾಗಿದ್ದರು.

ಹುಬ್ಬಳ್ಳಿ ಮತ್ತು ಗದಗ ಜಗದ್ಗುರುಗಳು; ಪಾಂಡೋಮಟ್ಟಿ, ಹಾವೇರಿ ಶ್ರೀಗಳು, ಮಾಜಿ ಶಾಸಕರಾದ ಶ್ರೀ ಆರ್. ನರೇಂದ್ರ ಉಪಸ್ಥಿತರಿದ್ದರು. ದಂಡಿಕೆರೆ, ಚಿಕ್ಕ ಇಂದುವಾಡಿ, ಶಿರಮಳ್ಳಿ ಹಾಗೂ ಅಂಕನಹಳ್ಳಿಯ ಶ್ರೀಗಳವರು ಗೋಷ್ಠಿಗಳನ್ನು ನಿರ್ವಹಿಸಿದರು. ಗೋಷ್ಠಿಗಳ ನಂತರ ಪ್ರಶ್ನೋತ್ತರಕ್ಕೆ ಅವಕಾಶ ನೀಡಲಾಗಿತ್ತು. ರಾಜ್ಯದ ವಿವಿಧ ಜಿಲ್ಲೆಗಳಿಂದ 250ಕ್ಕೂ ಹೆಚ್ಚು ಮಠಾಧಿಪತಿಗಳು, ಮಾತಾಜಿಗಳು, ಆಧ್ಯಾತ್ಮಿಕ ಜಿಜ್ಞಾಸುಗಳು ಪಾಲ್ಗೊಂಡಿದ್ದರು.

ಆಧ್ಯಾತ್ಮಿಕ ಸಾಹಿತ್ಯಕ್ಕೆ ನಿಜಗುಣ ಶಿವಯೋಗಿಗಳ ಕೊಡುಗೆ ಅಪಾರವಾದುದು

ಆಧ್ಯಾತ್ಮಿಕ ಸಾಹಿತ್ಯಕ್ಕೆ ನಿಜಗುಣ ಶಿವಯೋಗಿಗಳ ಕೊಡುಗೆ ಅಪಾರವಾದುದು ಎಂದು ಉಪ್ಪಿನ ಬೆಟಗೇರಿ ಮಠದ ಶ್ರೀ ಕುಮಾರ ವಿರೂಪಾಕ್ಷ ಸ್ವಾಮಿಗಳು ಆಗಸ್ಟ್ 4ರಂದು ಮಲೆ ಮಹದೇಶ್ವರ ಬೆಟ್ಟದ ಶ್ರೀ ಸಾಲೂರು ಮಠದಲ್ಲಿ ಮೈಸೂರು ಚಾಮರಾಜನಗರ ವೀರಶೈವ–ಲಿಂಗಾಯತ ಮಠಾಧಿಪತಿಗಳ ಗೋಷ್ಠಿಯಿಂದ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಆಯೋಜಿಸಿರುವ ವಿಚಾರ ಸಂಕಿರಣದ ನಾಲ್ಕನೆಯ ಗೋಷ್ಠಿಯಲ್ಲಿ ಶ್ರೀ ನಿಜಗುಣ ಶಿವಯೋಗಿಗಳ ಜೀವನ ಮತ್ತು ಸಾಹಿತ್ಯ ಕುರಿತು ಮಾತನಾಡುತ್ತಾ ತಿಳಿಸಿದರು. ನಿಜಗುಣರು ಗುರುಲಿಂಗಜಂಗಮ ಪ್ರೇಮಿಗಳಾಗಿದ್ದವರು. ಅಪಾರ ಜ್ಞಾನವುಳ್ಳ ಅಧ್ಯಯನಶೀಲರಾಗಿದ್ದರು. ತಮಿಳುನಾಡಿನ ತಿರುವಳ್ಳುವರಂತೆ, ಆಂಧ್ರದ ವೇಮನರಂತೆ, ಮಹಾರಾಷ್ಟ್ರದ ಸಂತ ತುಕಾರಾಮರಂತೆ, ಉತ್ತರ ಭಾರತದ ಕಬೀರರಂತೆ ಕನ್ನಡದಲ್ಲಿ ನಿಜಗುಣ ಶಿವಯೋಗಿಗಳು ಪ್ರಸಿದ್ಧರು. ಕನ್ನಡ ಸಾಹಿತ್ಯದ ಅಲಂಕಾರ ಶಾಸ್ತ್ರದಲ್ಲಿ ನೃಪತುಂಗನಂತೆ, ಚಂಪೂಕವಿಗೆ ಆದಿಕವಿ ಪಂಪನಂತೆ, ರಗಳೆಗೆ ಹರಿಹರನಂತೆ, ಷಟ್ಪದಿಗೆ ರಾಘವಾಂಕನಂತೆ ಹಾಡುಗಬ್ಬಗಳಿಗೆ ನಿಜಗುಣ ಶಿವಯೋಗಿಗಳು ಮೊದಲಿಗರು. ನಿಜಗುಣರು ಕೊಳ್ಳೇಗಾಲ ಪ್ರದೇಶದಲ್ಲಿ ರಾಜರಾಗಿದ್ದವರು. ಜೀವನದ ಬಗ್ಗೆ ವೈರಾಗ್ಯ ಹೊಂದಿ ಚಿಲಕವಾಡಿಯ ಶಂಭುಲಿಂಗಬೆಟ್ಟದಲ್ಲಿ ಅನೇಕ ವರ್ಷಗಳ ಕಾಲ ಸಾಧನೆಯನ್ನು ಗೈದರು. ಸಾವಿರಾರು ಗ್ರಂಥಗಳನ್ನು ಅಧ್ಯಯನ ಮಾಡಿ ವಿವೇಕ ಚಿಂತಾಮಣಿಯಂತಹ ಅದ್ಭುತ ಗ್ರಂಥವನ್ನು ರಚಿಸಿದರು. ಅದು ಸಂಸ್ಕೃತ, ತಮಿಳು, ತೆಲಗು, ಮರಾಠಿ ಭಾಷೆಗಳಿಗೂ ಅನುವಾದಗೊಂಡಿದೆ. ಅದರ ಜೊತೆಗೆ ಕೈವಲ್ಯ ಪದ್ಧತಿ, ಪರಮಾರ್ಥ ಪ್ರಕಾಶಿಕೆ, ಪರಮಾರ್ಥ ಗೀತೆ, ಅನುಭವಸಾರ, ಪರಮಾನುಭವ ಬೋಧೆ ಹಾಗೂ ಅರವತ್ಮೂರು ಪುರಾತನರ ತ್ರಿವಿಧಿಗಳಂತಹ ಶ್ರೇಷ್ಠ ಗ್ರಂಥಗಳನ್ನು ರಚಿಸಿದ್ದಾರೆ ಎಂದು ಹೇಳಿದರು.



ಹುಲಿಯೂರುದುರ್ಗದ ಶ್ರೀ ಸಿದ್ಧಲಿಂಗ ಶಿವಾನಂದ ಸ್ವಾಮಿಗಳು ನಿಜಗುಣ ಶಿವಯೋಗಿಗಳ ಷಟ್‌ಶಾಸ್ತ್ರ ಗ್ರಂಥಗಳನ್ನು ಸಾಧಕರೆಲ್ಲರೂ ಅಧ್ಯಯನವನ್ನು ಮಾಡಲೇ ಬೇಕು. ಅವರು ರಚಿಸಿರುವ ಸಾಹಿತ್ಯ ಇತರ ಭಾಷೆಗಳಿಗೂ ಅನುವಾದಗೊಂಡಿರುವುದೇ ಅದು ಎಷ್ಟು ಅಮೂಲ್ಯವಾಗಿದೆ ಎಂದು ತಿಳಿದು ಬರುತ್ತದೆ ಎಂದರು.

ವಿಶ್ರಾಂತ ಪ್ರಾಧ್ಯಾಪಕರಾದ ಡಾ. ಹೆಚ್.ಟಿ. ಶೈಲಜಾರವರು ಐದನೆಯ ಗೋಷ್ಠಿಯಲ್ಲಿ ಶ್ರೀ ಘನಲಿಂಗ ಶಿವಯೋಗಿಗಳ ಜೀವನ ಮತ್ತು ಸಾಹಿತ್ಯ ಕುರಿತು ಮಾತನಾಡುತ್ತಾ ಘನಲಿಂಗ ಶಿವಯೋಗಿಗಳು ಸುತ್ತೂರು ಪೀಠದ ಹನ್ನೊಂದನೆಯ ಪೀಠಾಧಿಪತಿ ಗಳಾಗಿದ್ದವರು. 15 ಮತ್ತು 16ನೇ ಶತಮಾನದಲ್ಲಿ ಎಡೆಯೂರು ಶ್ರೀ ಸಿದ್ಧಲಿಂಗೇಶ್ವರ ರೊಂದಿಗೆ ನೂರೊಂದು ವಿರಕ್ತರೊಂದಿಗೆ ಮನುಕುಲಕ್ಕೆ ಧಾರ್ಮಿಕ ಪ್ರಜ್ಞೆಯನ್ನು ಮೂಡಿಸುವ ಕೆಲಸವನ್ನು ಮಾಡಿದರು. ಘನಲಿಂಗ ಶಿವಯೋಗಿಗಳು ಸಿದ್ಧಲಿಂಗೇಶ್ವರರ ಒಡನಾಡಿಗಳಾಗಿದ್ದವರು. ಅವರು ರಚಿಸಿರುವ ಅರವತ್ತಾರು ವಚನಗಳಿಗೆ ಕನ್ನಡ ಸಾಹಿತ್ಯದಲ್ಲಿ ಮಹತ್ತರ ಸ್ಥಾನವಿದೆ. ಅವುಗಳನ್ನು ಅಧ್ಯಯನ ಮಾಡಿದರೆ ಅವರ ಬದುಕಿನ ಅನೇಕ ವಿಚಾರಗಳನ್ನು ಕಂಡುಕೊಳ್ಳಬಹುದಾಗಿದೆ. ಅವರು ಸ್ವಯಂ ಸಾಧಕರು ಮತ್ತು ಅನುಭಾವಿಗಳಾಗಿದ್ದವರು. ಅವರ ವಚನಗಳು ತಾತ್ತ್ವಿಕ ಮತ್ತು ಸೈದ್ಧಾಂತಿಕ ವಿಷಯಗಳನ್ನು ಒಳಗೊಂಡಿವೆ. ಬಾಲ್ಯದಿಂದಲೇ ವಿರಕ್ತ ಭಾವವನ್ನು ಹೊಂದಿದ್ದವರು. ಅಧ್ಯಾತ್ಮ ಗಟ್ಟಿಗೊಂಡ ಶಿವಯೋಗ ಸಾಧಕರಾಗಿದ್ದರು. ವಚನ ಸಾಹಿತ್ಯದಲ್ಲಿ ಅವರ ಹೆಸರು ಅಜರಾಮರವಾಗಿದೆ. ಎಡೆಯೂರು ಶ್ರೀ ಸಿದ್ಧಲಿಂಗೇಶ್ವರರೊಂದಿಗೆ ಜೀವಿತದ ಅವಧಿಯವರೆಗೂ ಧರ್ಮ ಪ್ರಚಾರದಲ್ಲಿ ತೊಡಗಿಕೊಂಡು ಕಗ್ಗರೆಯಲ್ಲಿ ಐಕ್ಯರಾದರು. ರಾಜೇಂದ್ರ ಶ್ರೀಗಳು, ಶ್ರೀ ಬಸವಲಿಂಗ ಶಾಸ್ತ್ರಿಗಳು, ಡಾ. ಫ.ಗು. ಹಳಕಟ್ಟಿಯವರು, ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು ಅವರ ವಚನಗಳನ್ನು ಸಂಪಾದಿಸಿದ್ದಾರೆ. ಶ್ರೀ ಎಲ್. ಬಸವರಾಜುರವರು ಅವರ ವಚನಗಳನ್ನು ವ್ಯಾಖ್ಯಾನಿಸಿದ್ದಾರೆ. ಅವರ ಎಲ್ಲ ವಚನಗಳಲ್ಲಿಯೂ ಘನವಾದ ಮತ್ತು ಗಹನವಾದ ಚಿಂತನೆಗಳನ್ನು ಕಾಣಬಹುದು ಎಂದು ತಿಳಿಸಿದರು.

ಕನಕಪುರ ಶ್ರೀ ಮರಳೇಗವಿಮಠದ ಶ್ರೀ ಮುಮ್ಮಡಿ ಶಿವರುದ್ರ ಸ್ವಾಮಿಗಳು ಪೂಜ್ಯ ಸುತ್ತೂರು ಶ್ರೀಗಳವರ ಮಾರ್ಗದರ್ಶನದಲ್ಲಿ ಮಠಾಧಿಪತಿಗಳ ಗೋಷ್ಠಿಯ ಮೂಲಕ ಎಲ್ಲರಲ್ಲಿಯೂ ಅರಿವನ್ನು ಮೂಡಿಸುವ ಕಾರ್ಯವನ್ನು ಇಂತಹ ವಿಚಾರ ಸಂಕಿರಣಗಳ ಮೂಲಕ ಮಾಡುತ್ತಿರುವುದು ಮಾದರಿಯಾಗಿದೆ. ಇಲ್ಲಿ ಮಂಡನೆಯಾಗುವ ವಿಚಾರಗಳನ್ನು



ಎಲ್ಲರೂ ಅರಿಯುವ ಕೆಲಸವನ್ನು ಮಾಡಿದಾಗ ಈ ವಿಚಾರ ಸಂಕಿರಣದ ಕಾರ್ಯ ಸಾರ್ಥಕವಾಗುತ್ತದೆ ಎಂದು ಹೇಳಿದರು.

ಶೇಗುಣಸಿ ಡಾ. ಶ್ರೀ ಮಹಾಂತಪ್ರಭು ಸ್ವಾಮಿಗಳು ಆರನೆಯ ಗೋಷ್ಠಿಯಲ್ಲಿ ಶ್ರೀ ಮುಪ್ಪಿನ ಷಡಕ್ಷರಿಗಳ ಜೀವನ ಮತ್ತು ಸಾಹಿತ್ಯ ಕುರಿತು ಮಾತನಾಡುತ್ತಾ ಕನ್ನಡದ ಅಪರೂಪದ ಕವಿಗಳಲ್ಲಿ ಒಬ್ಬರಾಗಿದ್ದ ಮುಪ್ಪಿನ ಷಡಕ್ಷರಿಗಳು 15ನೇ ಶತಮಾನದಲ್ಲಿದ್ದರು ಎಂದು ತಿಳಿದುಬರುತ್ತದೆ. ಅವರ ಎಪತ್ತಾರು ಕೈವಲ್ಯ ಪದಗಳನ್ನು ಶ್ರೀ ಹರ್ಡೇಕರ್ ಮಂಜಪ್ಪನವರು ಸಂಪಾದಿಸಿದರು. ಧಾರವಾಡ ಮುರುಘಾಮಠದ ಶ್ರೀ ಮೃತ್ಯುಂಜಯಪ್ಪ ಗಳವರು 'ಸುಬೋಧ ಸಾರ' ಎಂಬ ಶಿರ್ಷಿಕೆಯಲ್ಲಿ ಪ್ರಕಟಿಸಿದ್ದರು. ನಂತರದಲ್ಲಿ ಅವರ ಕುರಿತು ಹೆಚ್ಚಿನ ಅಧ್ಯಯನ ನಡೆಸಿ ಅವರ ಎಂಬತ್ತಾರು ಪದ್ಯಗಳನ್ನು ಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು "ಕೈವಲ್ಯ ಪದಗಳು" ಎಂಬ ಶೀರ್ಷಿಕೆಯಲ್ಲಿ ಸಂಪಾದಿಸಿ ಕನ್ನಡ ಸಾರಸ್ವತ ಲೋಕಕ್ಕೆ ಅಮೂಲ್ಯವಾದ ಕೊಡುಗೆ ನೀಡಿದ್ದಾರೆ. ಮುಪ್ಪಿನ ಷಡಕ್ಷರಿಗಳು ಹರಿ ಮತ್ತು ಹರ ಇಬ್ಬರಲ್ಲಿ ಯಾರು ಸರ್ವೋತ್ತಮರು ಎಂಬ ಪ್ರಶ್ನೆಗಳು ಎದ್ದಾಗ ಅವರಿಬ್ಬರಿಗಿಂತ ಗುರು ಸರ್ವೋತ್ತಮ ಎಂದರು. ಅವರ ಮೇಲೆ ವಚನ ಸಾಹಿತ್ಯ ಬಹಳಷ್ಟು ಪ್ರಭಾವ ಬೀರಿತ್ತು. ನಿರಂತರ ಸಂಚಾರಿಗಳಾಗಿದ್ದ ಶರಣರ ಹುಟ್ಟಿನ ಬಗ್ಗೆ ಹೆಚ್ಚು ಯೋಚಿಸದೆ, ಅವರ ಸಂದೇಶಗಳ ಬಗ್ಗೆ ಹೆಚ್ಚಿನ ಚಿಂತನೆ ಮಾಡಬೇಕು. ಭಗವಂತ ನಮ್ಮ ಜೊತೆಗಿದ್ದರೆ ಏನನ್ನಾದರೂ ಸಾಧಿಸಬಹುದು. ಹಿಂದೆ ಭಗವಂತನೊಂದಿಗೆ ಅದ್ಭುತವಾದ ಸಂಬಂಧವನ್ನು ಸಾಧಿಸಿದ್ದ ಯೋಗಿಗಳಿಗೆ ಎಲ್ಲವೂ ಸಾಧ್ಯವಾಗುತ್ತಿತ್ತು. ಮುಪ್ಪಿನ ಷಡಕ್ಷರಿಗಳು ಅತ್ಯಂತ ವಿನೀತಭಾವವುಳ್ಳವರಾಗಿದ್ದರು. ಅವರ ತಮ್ಮ ಕೃತಿಗಳ ಮೂಲಕ ಮೌಲ್ಯಯುತವಾದ ಚಿಂತನೆಗಳನ್ನು ನೀಡಿದ್ದಾರೆ. ಲೋಕರೂಢಿಗಳ ಬಗ್ಗೆ ಅದ್ಭುತವಾಗಿ ಚಿತ್ರಿಸಿದ್ದಾರೆ ಎಂದು ತಿಳಿಸಿದರು.

ಹಾವೇರಿ ಶ್ರೀ ಹುಕ್ಕೇರಿಮಠದ ಶ್ರೀ ಸದಾಶಿವ ಸ್ವಾಮಿಗಳು ಸಾಹಿತ್ಯ ಪರಂಪರೆಯಲ್ಲಿ ಕನ್ನಡ ಭಾಷೆಗೆ ವಿಶೇಷವಾದ ಸ್ಥಾನವಿದೆ. ವಿಶ್ವ ಸಾಹಿತ್ಯಕ್ಕೆ ಕನ್ನಡ ನೀಡಿದ ಅಮೂಲ್ಯ ಕೊಡುಗೆಯೆಂದರೆ ಅದು ವಚನ ಸಾಹಿತ್ಯ. ಸ್ವಂತ ಅಸ್ತಿತ್ವ ಹೊಂದಿರುವ ಕನ್ನಡ ಭಾಷೆ ತನ್ನ ಅಸ್ಮಿತೆಯನ್ನು ಉಳಿಸಿಕೊಂಡಿರುವ ಸುಂದರವಾದ ಭಾಷೆ. ಅದರಲ್ಲೂ ಹಳಗನ್ನಡ ಮತ್ತು ನಡುಗನ್ನಡ ವಿಶೇಷವಾದ ಅನುಭಾವ ಸಾಹಿತ್ಯವನ್ನು ಒಳಗೊಂಡಿದೆ. ಮುಪ್ಪಿನ ಷಡಕ್ಷರಿಗಳ ಕಿಂಕರಭಾವ ಬಹಳ ದೊಡ್ಡದು. ಗುರುಸೇವೆಯನ್ನು ಮಾಡಿದರೆ ತಪಸ್ಸಿನ



ಫಲ ದೊರೆಯುತ್ತದೆ ಎಂದು ಅವರು ಪದ್ಯಗಳಲ್ಲಿ ತಿಳಿಸಿದ್ದಾರೆ. ಮೈಸೂರು ಮತ್ತು ಚಾಮರಾಜನಗರದ ಭಾಗದಲ್ಲಿ ಆಧ್ಯಾತ್ಮಿಕ ಸಾಹಿತ್ಯ ಪರಂಪರೆಯು ಬಳುವಳಿಯಾಗಿ ಬಂದಿದೆ. ಅದಕ್ಕೆ ಇಲ್ಲಿನ ಪೂರಕವಾದ ಪರಿಸರವೂ ಕಾರಣವಾಗಿದೆ ಎಂದು ಹೇಳಿದರು.

ಕಪ್ಪಡಿ ಶ್ರೀ ಮಂಟೇಸ್ವಾಮಿ ಮಠದ ಎಂ.ಎಲ್. ವರ್ಚಸ್ವಿ ಶ್ರೀಕಂಠ ಸಿದ್ಧಲಿಂಗರಾಜೇ ಅರಸ್‌ರವರು ಏಳನೆಯ ಗೋಷ್ಠಿಯಲ್ಲಿ ಶ್ರೀ ಮಂಟೇಸ್ವಾಮಿ ಪರಂಪರೆಯ ಜೀವನ ಮತ್ತು ಸಾಹಿತ್ಯ ಕುರಿತು ಮಾತನಾಡುತ್ತಾ ಮಂಟೇಸ್ವಾಮಿಯವರು ನೀಲಗಾರ ಪರಂಪರೆಗೆ ಸೇರಿದವರು. ಕೋಡೆಕಲ್ ಬಸವಣ್ಣನವರ ಶಿಷ್ಯರಾಗಿದ್ದವರು. ನೀಲಗಾರ ಎಂದರೆ ನೀಲಕಂಠನಾದ ಶಿವನ ಆರಾಧಕರು ಮತ್ತು ಹಿಂದುಳಿದವರು ನಿರ್ವಹಿಸುವ ಕಸುಬಿನ ಆಧಾರದ ಮೇಲೂ ನೀಲಗಾರರು ಎಂದು ಗುರುತಿಸಲಾಗುತ್ತಿತ್ತು. ನೀಲಿಮಣಿ ಅಂದರೆ ರುದ್ರಾಕ್ಷಿಯನ್ನು ಕಟ್ಟುವವನು ನೀಲಗಾರ ಎನ್ನಲಾಗುತ್ತಿತ್ತು ಎಂಬ ಪ್ರತೀತಿ ಇದೆ. ಹಿಂದುಳಿದವರನ್ನು ಅತ್ಯುತ್ತಮ ಮಟ್ಟಕ್ಕೆ ತಂದವರು ಮಂಟೇಸ್ವಾಮಿಯವರು. 12ನೇ ಶತಮಾನದ ವಿಷಯಗಳಿಗೆ 15ನೇ ಶತಮಾನದಲ್ಲಿ ಪುನರುಜ್ಜೀವನ ದೊರೆಯಿತು ಎನ್ನಬಹುದಾಗಿದೆ. ಮಂಟೇಸ್ವಾಮಿಯ ಮಹಾಕಾವ್ಯದೊಂದಿಗೆ ಜನರ ನಂಬಿಕೆ ಮತ್ತು ಪರಂಪರೆಗಳ ಪದರುಗಳು ರೂಪುಗೊಂಡಿವೆ. ನೀಲಗಾರರು ಈ ಮಹಾಕಾವ್ಯವನ್ನು ಹಾಡಲು ಎಂಟರಿಂದ ಒಂಬತ್ತು ದಿನಗಳು ಬೇಕಾಗುತ್ತವೆ. ಮಂಟೇಸ್ವಾಮಿ ಪರಂಪರೆಯಲ್ಲೂ ಕೆಲವು ವಚನಗಳು ದೊರೆತಿವೆ. ಮಂಟೇಸ್ವಾಮಿಯವರ ಶಿಷ್ಯರಲ್ಲಿ ಸಿದ್ಧಪ್ಪಾಜಿ, ರಾಚಪ್ಪಾಜಿಯವರು ಪ್ರಮುಖರು. ದೊಡ್ಡಮ್ಮತಾಯಿಗೂ ಈ ಪರಂಪರೆಯಲ್ಲಿ ಬಹಳ ಮಹತ್ವದ ಸ್ಥಾನವಿದೆ. ನೀಲಗಾರರ ಪರಂಪರೆ ಜಾತ್ಯತೀತವಾದುದು. ದಾಸೋಹಕ್ಕೂ ಹೆಚ್ಚಿನ ಮಹತ್ವ ನೀಡಲಾಗಿದೆ. ಮಂಟೇಸ್ವಾಮಿಯವರು ಮಹದೇಶ್ವರರ ಸಮಕಾಲೀನ ರಾಗಿದ್ದರು. ಅವರು ಐಕ್ಯರಾದ ಸಂದರ್ಭದಲ್ಲಿ ಮಹದೇಶ್ವರರು ಬೊಪ್ಪೇಗೌಡನಪುರಕ್ಕೆ ಬಂದಿದ್ದರು ಎಂಬ ಐತಿಹ್ಯವಿದೆ ಈ ಕುರಿತು ಹೆಚ್ಚಿನ ಸಂಶೋಧನೆಗಳು ನಡೆಯಬೇಕಿದೆ ಎಂದು ತಿಳಿಸಿದರು.

ಶ್ರೀ ಬೇಬಿಮಠದ ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮಿಗಳು ಮಠಾಧಿಪತಿಗಳ ಗೋಷ್ಠಿಯಿಂದ ಆಯೋಜಿಸಿರುವ ಇಂತಹ ಚಿಂತನ–ಮಂಥನ ಕಾರ್ಯಕ್ರಮಗಳು ಜೀವನದಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಶರಣರೆಲ್ಲರೂ ಜಗತ್ತಿನ ಕಲ್ಯಾಣಕ್ಕಾಗಿ ಬಂದವರು. ಅವರಲ್ಲಿ ಮಹದೇಶ್ವರರು ಮತ್ತು ಸಮಕಾಲೀನ ಶರಣರು ಪ್ರಮುಖರು ಎಂದು ಹೇಳಿದರು.



ಹುಬ್ಬಳ್ಳಿ ಮತ್ತು ಗದಗ ಜಗದ್ಗುರುಗಳು, ಸಿದ್ಧಗಂಗಾ ಮಠದ ಕಿರಿಯ ಶ್ರೀಗಳು, ಕನಕಪುರ ಶ್ರೀಗಳು, ತಮಿಳುನಾಡಿನ ಮಾಜಿ ಶಾಸಕರಾದ ಶ್ರೀ ಜಿ.ಕೆ. ಮಣಿ ಉಪಸ್ಥಿತರಿದ್ದರು. ಚಿಲಕವಾಡಿ, ಬಸವೇಶ್ವರ ಮಠ, ಕಾರಾಪುರ ಮತ್ತು ಬೆಟ್ಟದಪುರ ಮಠಗಳ ಶ್ರೀಗಳು ಗೋಷ್ಠಿಗಳ ನಿರೂಪಣೆ ಮಾಡಿದರು. ಗೋಷ್ಠಿಗಳ ನಂತರ ಪ್ರಶ್ನೋತ್ತರಕ್ಕೆ ಅವಕಾಶ ನೀಡಲಾಗಿತ್ತು.

ಮಠಾಧಿಪತಿಗಳು ಲಿಂಗಾಂಗ ಸಾಮರಸ್ಯದೊಂದಿಗೆ ಸಮಾಜ ಸೇವೆಯಲ್ಲಿಯೂ ತೊಡಗಿಸಿಕೊಳ್ಳಬೇಕು

ಮಠಾಧಿಪತಿಗಳು ಲಿಂಗಾಂಗ ಸಾಮರಸ್ಯದೊಂದಿಗೆ ಸಮಾಜ ಸೇವೆಯಲ್ಲಿಯೂ ತೋಡಗಿಸಿಕೊಳ್ಳಬೇಕು ಎಂದು ಗದಗ ಶ್ರೀ ತೋಂಟದಾರ್ಯ ಮಠದ ಜಗದ್ಗುರು ಶ್ರೀ ತೋಂಟದ ಸಿದ್ಧರಾಮ ಮಹಾಸ್ವಾಮಿಗಳು ಆಗಸ್ಟ್ 4ರಂದು ಮಲೆ ಮಹದೇಶ್ವರ ಬೆಟ್ಟದ ಶ್ರೀ ಸಾಲೂರು ಬೃಹನ್ಮಠದಲ್ಲಿ ಮೈಸೂರು–ಚಾಮರಾಜನಗರ ಜಿಲ್ಲಾ ವೀರಶೈವ–ಲಿಂಗಾಯತ ಮಠಾಧಿಪತಿಗಳ ಗೋಷ್ಠಿಯಿಂದ ಮಠಾಧೀಶರು, ಮಾತಾಜಿಯವರು, ಸಾಧಕರು ಹಾಗೂ ಜಿಜ್ಞಾಸುಗಳಿಗೆ ಆಯೋಜಿಸಿದ್ದ ಶ್ರೀ ಮಲೆ ಮಹದೇಶ್ವರರು ಮತ್ತು ಸಮಕಾಲೀನರು ಕುರಿತ ವಿಚಾರ ಸಂಕಿರಣದ ಸಮಾರೋಪದಲ್ಲಿ ಮಾತನಾಡುತ್ತಾ ತಿಳಿಸಿದರು. ಮೂರು ದಿನಗಳ ಕಾಲ ನಡೆದ ವಿಚಾರ ಸಂಕಿರಣ ಅತ್ಯಂತ ಯಶಸ್ವಿಯಾಗಿ ನೆರವೇರಿದೆ. ಉತ್ತರ ಮತ್ತು ದಕ್ಷಿಣ ಕರ್ನಾಟಕದ ಮಠಾಧಿಪತಿಗಳನ್ನು ಇಲ್ಲಿ ಸಮನ್ವಯಗೊಳಿಸಲಾಗಿದೆ. ಮೌಲಿಕವಾದ ವಿಷಯಗಳ ಬಗ್ಗೆ ವಿಚಾರ ಮಂಡಿಸಲಾಗಿದೆ. ಧಾರ್ಮಿಕ, ಆಧ್ಯಾತ್ಮಿಕ ಮತ್ತು ಸಾಮಾಜಿಕ ವಿಚಾರಗಳ ಕುರಿತಾಗಿ ಗಹನವಾದ ಚಿಂತನ–ಮಂಥನ ಮಾಡಲಾಗಿದೆ. ಮೈಸೂರು ಮತ್ತು ಚಾಮರಾಜನಗರ ಮಠಾಧಿಪತಿಗಳ ಗೋಷ್ಠಿಯ ವ್ಯಾಪ್ತಿ ಎರಡು ಜಿಲ್ಲೆಗೆ ಸೇರಿರಬಹುದು, ಆದರೆ ಅದರ ಕಾರ್ಯಗಳು ಜಿಲ್ಲೆಗಳ ಗಡಿಯನ್ನು ಮೀರಿ ಹರಡಿವೆ. ಮಠಾಧಿಪತಿಗಳಾದವರಿಗೆ ಅವರ ಜವಾಬ್ದಾರಿ ಮತ್ತು ಕರ್ತವ್ಯಗಳನ್ನು ಇಲ್ಲಿ ನಡೆದಿರುವ ವಿಚಾರ ಸಂಕಿರಣ ಮತ್ತೊಮ್ಮೆ ನೆನಪಿಸಿದೆ. ಸುತ್ತೂರು ಜಗದ್ಗುರುಗಳವರ ಮಾರ್ಗದರ್ಶನದಲ್ಲಿ, ಶ್ರೀ ಸಾಲೂರು ಮಠದ ಶ್ರೀಗಳ ನೇತೃತ್ವದಲ್ಲಿ ಈ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿ ಜರುಗಿದೆ. ಸಮಾಜ ಮತ್ತು ಮಠಾಧಿಪತಿಗಳದು ಮೀನು ಮತ್ತು ನೀರಿನ ಸಂಬಂಧದಂತೆ, ಮೀನು ಹೇಗೆ ನೀರಿನಲ್ಲಿ ಈಜುತ್ತಾ ಅದನ್ನು ಸ್ವಚ್ಛಗೊಳಿಸುತ್ತದೆಯೋ ಹಾಗೆ ಸ್ವಾಮಿಗಳಾದವರು ಸಮಾಜದಲ್ಲಿನ ಕಲ್ಮಶಗಳನ್ನು ಸ್ವಚ್ಛಗೊಳಿಸುವ ಕಾರ್ಯವನ್ನು ಮಾಡಬೇಕು. ಹಾನಗಲ್ಲ ಶ್ರೀ ಕುಮಾರ ಸ್ವಾಮಿಗಳು



ಹಾಗೂ ಸುತ್ತೂರಿನ ಜಗದ್ಗುರು ರಾಜೇಂದ್ರ ಶ್ರೀಗಳಂತಹವರ ಬದುಕು ಮಠಾಧಿಪತಿಗಳಿಗೆ ಮಾದರಿಯಾದುದು. ಎಂದು ಹೇಳಿದರು.

ಪರಮಪೂಜ್ಯ ಜಗದ್ಗುರುಗಳವರು ಮೂರು ದಿನಗಳ ಕಾಲ ನಡೆದ ವಿಚಾರ ಸಂಕಿರಣದಲ್ಲಿ ಸಮಗ್ರವಾಗಿ ಎಲ್ಲ ಮಾಹಿತಿಗಳನ್ನು ಸಂಗ್ರಹಿಸಿ ವಸ್ತುನಿಷ್ಠವಾಗಿ ವಿಷಯಗಳನ್ನು ಮಂಡಿಸಲಾಗಿದೆ. ಮಹಾತ್ಮರನ್ನು ನೆನೆಯುವುದೇ ಜೀವನದ ಒಂದು ಪುಣ್ಯವಿಶೇಷ. ಶ್ರೀ ಮಹದೇಶ್ವರರು ಮತ್ತು ಸಮಕಾಲೀನರ ಸಾಧನೆಯ ತಪಶ್ಶಕ್ತಿಯ ಹಿಂದೆ ಅಪಾರ ಸಾಧನೆಯಿದೆ. ಪೂಜೆ ವೈಯಕ್ತಿಕ ಫಲ, ಸೇವೆ ಸಾರ್ವತ್ರಿಕ ಎಂಬಂತೆ ಸೇವಾಕಾರ್ಯಗಳಲ್ಲಿ ತೊಡಗಿಸಿಕೊಳ್ಳುವುದು ಅಗತ್ಯ. ವಿಚಾರ ಸಂಕಿರಣದಲ್ಲಿ ಎಲ್ಲರೂ ಅತ್ಯಂತ ಆಸಕ್ತಿಯಿಂದ ಭಾಗವಹಿಸಿದುದರಿಂದ ವಿಚಾರ ಸಂಕಿರಣ ಅರ್ಥಪೂರ್ಣವಾಗಿ ನೆರವೇರಿದೆ ಎಂದರು.

ಹುಬ್ಬಳ್ಳಿ ಶ್ರೀ ಮೂರುಸಾವಿರ ಮಠದ ಜಗದ್ಗುರು ಶ್ರೀ ಗುರುಸಿದ್ಧ ರಾಜಯೋಗೀಂದ್ರ ಮಹಾಸ್ವಾಮಿಗಳು ಈ ವಿಚಾರ ಸಂಕಿರಣದಲ್ಲಿ ತತ್ವ ಚಿಂತನೆಗಳ ಮೂಲಕ ಮಾನಸಿಕವಾಗಿ, ಬೌದ್ಧಿಕವಾಗಿ ಮತ್ತು ಭಾವನಾತ್ಮಕವಾಗಿ ಮಠಾಧಿಪತಿಗಳೆಲ್ಲರ ನೆತ್ತಿಗೂ ತೃಪ್ತಿಯಾದ ಪ್ರಸಾದ ದೊರೆತಿದೆ. ಇಲ್ಲಿ ವಿದ್ವತ್ ಪೂರ್ಣ ಪ್ರಬಂಧಗಳನ್ನು ಮಂಡಿಸಿದವರೆಲ್ಲರೂ ಬಹುತೇಕರು ಮಠಾಧಿಪತಿಗಳೇ ಆಗಿರುವುದು ವಿಶೇಷ ಎಂದರು.

ವಿಶ್ವ ಒಕ್ಕಲಿಗರ ಮಠದ ಶ್ರೀ ನಿಶ್ಚಲಾನಂದನಾಥ ಸ್ವಾಮಿಗಳು ಸುತ್ತೂರು ಶ್ರೀಗಳು ಜಾತ್ಯತೀತವಾಗಿ ಎಲ್ಲ ಮಠಾಧಿಪತಿಗಳಿಗೂ ಮಾರ್ಗದರ್ಶನ ಮಾಡುತ್ತಾ ಮಾತೃಸ್ಥಾನದಲ್ಲಿದ್ದಾರೆ. ಸಾಲೂರು ಮಠದ ಶ್ರೀಗಳು ಈ ಕಾರ್ಯಕ್ರಮವನ್ನು ಅತ್ಯಂತ ಅಚ್ಚುಕಟ್ಟಾಗಿ ಆಯೋಜಿಸಿ ವಿಚಾರ ಸಂಕಿರಣ ಯಶಸ್ವಿಯಾಗಲು ಶ್ರಮಿಸಿದ್ದಾರೆ ಎಂದರು.

ಸಿದ್ಧಗಂಗಾ ಮಠದ ಶ್ರೀ ಶಿವಸಿದ್ಧೇಶ್ವರ ಸ್ವಾಮಿಗಳು ಇದೊಂದು ಅರ್ಥಪೂರ್ಣ ವಿಚಾರ ಸಂಕಿರಣವಾಗಿದೆ. ಎಪತ್ತೇಳು ಮಲೆಯ ಮಧ್ಯೆ ಏಳನೆಯ ವಿಚಾರಸಂಕಿರಣ ಆಯೋಜನೆಗೊಂಡಿರುವುದು ಸಾರ್ಥಕದ ಸಂಗತಿ. ಇಲ್ಲಿ ಪಡೆದ ಜ್ಞಾನದಿಂದ ಜೀವನದಲ್ಲಿ ಹೊಸ ಚಿಂತನೆಗಳನ್ನು ಅಳವಡಿಸಿಕೊಂಡು ಜಾರಿಗೆ ತರಬೇಕು ಎಂದು ತಿಳಿಸಿದರು.

ಕನಕಪುರ ಮತ್ತು ಸಾಲೂರು ಮಠದ ಶ್ರೀಗಳು, ಮಾಜಿ ಶಾಸಕರಾದ ಶ್ರೀ ಜಿ.ಕೆ. ಮಣಿ, ಚಾಮುಲ್ ಅಧ್ಯಕ್ಷರಾದ ಶ್ರೀ ನಂಜುಂಡಸ್ವಾಮಿ, ಉದ್ಯಮಿಗಳಾದ ಶ್ರೀ ನಿಶಾಂತ್, ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಗಳಾದ ಶ್ರೀ ಪುರುಷೋತ್ತಮ್‌ರವರುಗಳು ಮಾತನಾಡಿದರು. ಹೊಂಡರಬಾಳು ಶ್ರೀಗಳು ಪ್ರಾರ್ಥಿಸಿದರು. ಮುಡಿಗುಂಡ ಶ್ರೀಗಳು



ಸ್ವಾಗತಿಸಿದರು. ಮೂಡಗೂರು ಶ್ರೀಗಳು ವರದಿ ಮಂಡಿಸಿದರು. ಅಜ್ಜೀಪುರ ಶ್ರೀಗಳು ವಂದಿಸಿದರು. ಗುಂಡೇಗಾಲದ ಶ್ರೀಗಳು ಕಾರ್ಯಕ್ರಮ ನಿರೂಪಿಸಿದರು.

ಭಗವಂತ ಮತ್ತು ಭಕ್ತರ ನಡುವಿನ ಸೇತುವೆಯೇ ಭಜನೆ

ಭಗವಂತ ಮತ್ತು ಭಕ್ತರ ನಡುವಿನ ಸೇತುವೆಯೇ ಭಜನೆಯಾಗಿದೆ ಎಂದು ಕನ್ನಡಪ್ರಭ ದಿನಪತ್ರಿಕೆಯ ಸಂಪಾದಕರು ಹಾಗೂ ಸಾಹಿತಿಗಳು ಆದ ಶ್ರೀ ಗಿರೀಶ್ ರಾವ್ ಹತ್ವಾರ್(ಜೋಗಿ)ರವರು ಸುತ್ತೂರು ಶ್ರೀಕ್ಷೇತ್ರದಲ್ಲಿ 6.8.2026ರಂದು ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಹಾಗೂ ಜೆಎಸ್ಎಸ್ ಮಹಾವಿದ್ಯಾಪೀಠಗಳ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಿದ್ದ ಭಜನಾ ಕಾರ್ಯಾಗಾರದ ಸಮಾರೋಪ ಸಮಾರಂಭದಲ್ಲಿ ಮಾತನಾಡುತ್ತಾ ತಿಳಿಸಿದರು. ಜನಪದರು ಭಗವಂತನಿಗೆ ಪ್ರೀತಿಯಿಂದ ಭಕ್ತಿಯನ್ನು ಭಜನೆಯ ಮೂಲಕ ಸಮರ್ಪಿಸುತ್ತಾರೆ. ಇದು ವಿಶಿಷ್ಟವಾದ ಸಂತೋಷದ ಅನುಭವವನ್ನು ಕೊಡುತ್ತದೆ. ಮನಸ್ಸಿನ ಎಲ್ಲಾ ದುಗುಡಗಳನ್ನು ದೂರ ಮಾಡಿ ಶಾಂತಿ, ನೆಮ್ಮದಿ ಪಡೆಯಲು ನಾವು ಭಜನೆಯನ್ನು ಮಾಡಬೇಕು. ಕಾವ್ಯದ ಭಾಷೆ, ದೈವತ್ವದ ಭಾಷೆ ಎರಡೂ ಒಂದೆ. ನಿರಾಕಾರ, ನಿರ್ಗುಣ ಹಾಗೂ ಅನಂತ ದೈವೀ ಸ್ವರೂಪದಲ್ಲಿ ನಂಬಿಕೆಯಿಡಬೇಕು ಎಂದು ತಿಳಿಸಿದರು.

ಕರ್ನಾಟಕ ಉಚ್ಚ ನ್ಯಾಯಾಲಯದ ಅಡ್ವೊಕೇಟ್ ಜನರಲ್‌ರವರ ಕಚೇರಿಯ ಆಡಳಿತಾಧಿಕಾರಿಗಳಾದ ಶ್ರೀಮತಿ ಶೈಲಜಾ ಪ್ರಿಯದರ್ಶಿನಿಯವರು ಯುವ ಪೀಳಿಗೆಯು ಭಜನೆಯ ಅಭ್ಯಾಸ ಮಾಡುತ್ತಿರುವುದು ನಮ್ಮ ಸುದೈವ. ಭಕ್ತಿಸುಧೆಯಿಂದ ಮೋಕ್ಷವನ್ನು ಪಡೆಯಬಹುದು. ದೇವರ ಆರಾಧನೆಯನ್ನು ಕಟ್ಟಿಕಡೆಯ ವ್ಯಕ್ತಿಗೂ ದೊರೆಯುವಂತೆ ಮಾಡುವ ಶಕ್ತಿ ಭಜನೆಗಿದೆ ಎಂದು ನುಡಿದರು.

ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಶ್ರೀ ಗುಂಡಪ್ಪಗೌಡರು ಪ್ರಾಚೀನ ಕಾಲದಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಪ್ರತಿನಿತ್ಯ ಜನರು ಕೃಷಿ ಚಟುವಟಿಕೆಗಳನ್ನು ಮುಗಿಸಿ ಸಂಜೆಯ ಸಮಯದಲ್ಲಿ ಭಜನೆ ಮಾಡುತ್ತಿದ್ದರು. ಭಜನೆಯನ್ನು ಹಾಡುವ ಹಾಗೂ ಆಲಿಸುವ ಸಂಸ್ಕೃತಿ ಜನರಲ್ಲಿತ್ತು. ಕಬೀರ್‌ದಾಸರು, ತ್ಯಾಗರಾಜರು, ಮೀರಾಬಾಯಿ ಮೊದಲಾದವರು ಭಜನೆಯ ಮೂಲಕ ದೇವರನ್ನು ಒಲಿಸಿಕೊಳ್ಳಲು ಪ್ರಯತ್ನಿಸಿದರು ಎಂದು ತಿಳಿಸಿದರು.

ಮಲೆಮಹದೇಶ್ವರ ಬೆಟ್ಟದ ಶ್ರೀ ಸಾಲೂರು ಬೃಹನ್ಮಠದ ಡಾ. ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು ಮಕ್ಕಳಲ್ಲಿ ಭಾರತೀಯ ಪರಂಪರೆಯ ಸಂಸ್ಕಾರವನ್ನು ಬಿತ್ತಿ ವ್ಯಕ್ತಿತ್ವದ ವಿಕಾಸಕ್ಕೆ ಸುತ್ತೂರು ಶ್ರೀಮಠವು ನೆರವಾಗುತ್ತಿದೆ. ಪ್ರಾಚೀನ ಭಾರತೀಯ ಕಲೆಗಳ ಅರ್ಥವನ್ನು



ತಿಳಿಸುವುದರ ಮೂಲಕ ಜನಸಾಮಾನ್ಯರಿಗೂ ಭಕ್ತಿಮಾರ್ಗ ದೊರೆಯುವಂತೆ ಮಾಡಿದೆ ಎಂದು ಶುಭ ಸಂದೇಶ ನೀಡುತ್ತಾ ತಿಳಿಸಿದರು.

ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಪರಮಪೂಜ್ಯ ಜಗದ್ಗುರುಗಳವರು ಲೌಕಿಕ ಜಂಜಾಟಗಳನ್ನು ಮರೆತು ಭಗವಂತನ ಸ್ಮರಣೆ ಮಾಡಿ ಭಾವಲೋಕದಲ್ಲಿ ವಿಹರಿಸಲು ಭಜನೆಯು ಸಹಕಾರಿಯಾಗಿದೆ. ಪುರಂದರದಾಸರು, ಕನಕದಾಸರು, ಅಕ್ಕಮಹಾದೇವಿ ಹಾಗೂ ಬಸವಣ್ಣನವರು ಭಗವಂತನಲ್ಲಿ ತಮ್ಮ ಮನಸ್ಸಿನ ಹಂಬಲವನ್ನು ಭಜನೆಯ ಮೂಲಕ ಸಮರ್ಪಿಸುತ್ತಿದ್ದರು. ನಿತ್ಯ ಮನೆಗಳಲ್ಲಿ ಭಜನೆ ಮಾಡುವ ಅಭ್ಯಾಸವನ್ನು ಬೆಳೆಸಿಕೊಂಡು ಮಾನಸಿಕ ಶಾಂತಿ ಪಡೆಯಬೇಕೆಂದು ತಿಳಿಸಿದರು.

ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಉಪ್ಪುಂದ ರಾಜೇಶ್ ಪಡಿಯಾರ್, ಶ್ರೀ ಶ್ರೀನಿವಾಸ್ ಯಲ್ಲಾಪಾಡಿರವರು ಶಿಬಿರದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಶಿಬಿರಾರ್ಥಿಗಳಾದ ಶ್ರೀ ಡಿ. ಟಿ. ಗೋಪಿನಾಥ್, ಶ್ರೀಮತಿ ಜಿ. ಸುಪ್ರಭ, ಚಿ. ತ್ರಿಗುಣರವರು ಅನಿಸಿಕೆಯನ್ನು ಹಂಚಿಕೊಂಡರು. ತರಬೇತಿ ಪಡೆದ ಕಲಾವಿದರು ಭಜನೆ, ಮಂಡಲ ಭಜನೆ ಹಾಗೂ ಭಜನೋತ್ಸವದ ಪ್ರದರ್ಶನ ನೀಡಿದರು. ಶ್ರೀ ಪಂಚಾಕ್ಷರಿಸ್ವಾಮಿ ಪ್ರಾರ್ಥಿಸಿದರು. ಡಾ. ಡಿ.ಎಂ. ಮಹೇಂದ್ರಮೂರ್ತಿ ಸ್ವಾಗತಿಸಿದರು. ಶ್ರೀ ಎ.ಎಂ. ಶಿವಕುಮಾರಸ್ವಾಮಿ ವರದಿ ಮಂಡಿಸಿದರು. ಶ್ರೀ ಆರ್.ಎಸ್. ಕುಮಾರ್ ವಂದಿಸಿದರು.

ಮನುಷ್ಯ ಜನ್ಮ ಅತ್ಯಂತ ಶ್ರೇಷ್ಠವಾದುದು

ಮನುಷ್ಯ ಜನ್ಮ ಅತ್ಯಂತ ಶ್ರೇಷ್ಠವಾದುದು ಅದನ್ನು ಪವಿತ್ರಗೊಳಿಸಿಕೊಳ್ಳುವುದು ಪ್ರತಿ ಮನುಷ್ಯನ ಕರ್ತವ್ಯವಾಗಿದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಆಗಸ್ಟ್ 8ರಂದು ಮಂಗಳೂರಿನಲ್ಲಿ ವಿಶೇಷಚೇತನ ಮಕ್ಕಳಿಗಾಗಿ ನಿರ್ಮಿಸಿರುವ ಸಾನ್ನಿಧ್ಯ ಅರ್ಜುನ್ ಶೆಟ್ಟಿ ಶಾಲೆ ಉದ್ಘಾಟನೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ತನ್ನಿಂದಲೇ ಆಯಿತು ಎಂಬ ಭಾವನೆ ಇದ್ದರೆ ಮಾಡಿದ ಸೇವೆ ಸಾರ್ಥಕವಾಗದು. ಶ್ರೀ ಸುಧೀರ್ ಶೆಟ್ಟಿಯವರು ಅವರ ತಂದೆಯ ಈ ಹೆಸರಿನಲ್ಲಿ ಈ ಶಾಲೆಯನ್ನು ನಿರ್ಮಿಸಿ ಶ್ರೀ ಅರ್ಜುನ್ ಶೆಟ್ಟಿಯವರ ಹೆಸರು ಶಾಶ್ವತವಾಗಿ ಉಳಿಯುವಂತೆ ಮಾಡಿದ್ದಾರೆ. ಸಾನ್ನಿಧ್ಯ ಇಂದು ರಾಜ್ಯದಲ್ಲೇ ಮಾದರಿ ಸಂಸ್ಥೆಯಾಗಿ ಬೆಳೆದಿದೆ. ಅನೇಕರ ಶ್ರಮದ ಫಲವಾಗಿ ಈ ಸಂಸ್ಥೆ ಸಾಕಷ್ಟು ಅಭಿವೃದ್ಧಿ ಹೊಂದಿದೆ. ಶಿಕ್ಷಣ ಸಂಸ್ಥೆಯನ್ನು ವ್ಯವಸ್ಥಿತವಾಗಿ ನಿರ್ಮಿಸಿದ್ದಾರೆ. ವಿಶೇಷಚೇತನ ವಿದ್ಯಾರ್ಥಿಗಳಿಗೆ ಅಗತ್ಯವಾದ ಕೌಶಲಯುತ ಶಿಕ್ಷಣವನ್ನು ನೀಡುತ್ತಿರುವುದು ಶ್ಲಾಘನೀಯ ಎಂದರು.



ಸಚಿವರಾದ ಶ್ರೀ ಯು.ಟಿ. ಖಾದರ್‌ರವರು ಸರ್ಕಾರದಿಂದ ಸಿಗಬಹುದಾದ ಎಲ್ಲ ಸವಲತ್ತುಗಳನ್ನು ವಿಶೇಷ ಮಕ್ಕಳಿಗೆ ಒದಗಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುವುದು. ವಿಶೇಷಚೇತನ ಮಕ್ಕಳಿಗೆ ಬೇಕಾದ ಚಿಕಿತ್ಸೆಗೆ ಸಂಬಂಧಿಸಿದಂತೆ ಸಮಿತಿ ರಚಿಸಿ ಅಗತ್ಯವಿರುವ ಚಿಕಿತ್ಸೆಗಳನ್ನು ಪಟ್ಟಿ ಮಾಡಿ ಸರ್ಕಾರದಿಂದ ಉಚಿತವಾಗಿ ಒದಗಿಸಲು ಕ್ರಮವಹಿಸಲಾಗುವುದು. ವಿಶೇಷಚೇತನ ಮಕ್ಕಳಿಗೆ ರಾಜ್ಯದಲ್ಲಿ ಮಿನಿ ಒಲಿಂಪಿಕ್ಸ್ ಆಯೋಜಿಸುವ ನಿಟ್ಟಿನಲ್ಲಿ ಮುಖ್ಯಮಂತ್ರಿಗಳು ಹಾಗೂ ಕ್ರೀಡಾ ಸಚಿವರೊಂದಿಗೆ ವಿಷಯ ಪ್ರಸ್ತಾಪಿಸಿದ್ದು, ಅವರಿಂದ ಸಕಾರಾತ್ಮಕ ಸ್ಪಂದನೆ ಸಿಕ್ಕಿದೆ. ಅದನ್ನು ಶೀಘ್ರ ಅನುಷ್ಠಾನಗೊಳಿಸಲಾಗುವುದು ಎಂದರು.

ಸಂಸದರಾದ ಕ್ಯಾ. ಬ್ರಿಜೇಶ್ ಚೌಟರವರು ಅರ್ಜುನ್ ಕೆಲಸ ಮಾಡುತ್ತಿರುವಾಗ ವಿಶೇಷ ಮಕ್ಕಳ ಆರೈಕೆ ಚಿಂತನೆ ಹೊಂದಿದ್ದರು. ಅವರ ಕುಟುಂಬಸ್ಥರಿಂದ ಆ ಕನಸು ನನಸಾಗಿದೆ. ಮಂಗಳೂರಿನ ಜನ ಎಷ್ಟೇ ಎತ್ತರಕ್ಕೆ ಏರಿದರೂ ತನ್ನ ಊರನ್ನು ಮರೆಯುವುದಿಲ್ಲ ಎನ್ನುವುದಕ್ಕೆ ಈ ಸೇವೆಯೆ ನಿದರ್ಶನ ಎಂದರು.

ಸಾನ್ನಿಧ್ಯ ಸಂಸ್ಥೆಯ ಆಡಳಿತಾಧಿಕಾರಿಗಳಾದ ಡಾ. ವಸಂತ್‌ಕುಮಾರ್ ಶೆಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ಸಿ.ಎ. ಸುಧೀರ್‌ಶೆಟ್ಟಿ ಸ್ವಾಗತಿಸಿದರು. ಶ್ರೀಮತಿ ವಿಜಯಾ ಎಸ್. ಶೆಟ್ಟಿ, ಶ್ರೀ ಜಗದೀಶ್ ಶೆಟ್ಟಿ ಉಪಸ್ಥಿತರಿದ್ದರು. ಶ್ರೀ ಮಹಾಬಲ ಮಾರ್ಲ ವಂದಿಸಿದರು. ಪ್ರೊ. ರಾಧಾಕೃಷ್ಣ ಕಾರ್ಯಕ್ರಮ ನಿರೂಪಿಸಿದರು.

ಶ್ರಾವಣಮಾಸವು ಹಿಂದೂಗಳ ಪವಿತ್ರ ಮಾಸವಾಗಿದೆ

ಶ್ರಾವಣಮಾಸವು ಹಿಂದೂಗಳ ಪವಿತ್ರ ಮಾಸವಾಗಿದೆ ಎಂದು ಮೈಸೂರಿನ ಅಪರ ಜಿಲ್ಲಾಧಿಕಾರಿಗಳಾದ ಶ್ರೀಮತಿ ಆರ್. ಐಶ್ವರ್ಯರವರು ಸುತ್ತೂರು ಶ್ರೀಮಠದಲ್ಲಿ ಆಗಸ್ಟ್ 12ರಂದು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರಾವಣ ಮಾಸ ಪ್ರವಚನದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡುತ್ತಾ ತಿಳಿಸಿದರು. ನಾವೆಲ್ಲರೂ ಇಲ್ಲಿ ಭಾಗವಹಿಸಿರುವುದು ಪುಣ್ಯ ವಿಶೇಷ. ಇದು ಅನುಭವ ಮಂಟಪದ ನೆನಪನ್ನು ತರುತ್ತಿದೆ. ಸುತ್ತೂರು ಶ್ರೀಮಠವು ಧಾರ್ಮಿಕ, ಆಧ್ಯಾತ್ಮಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಕ್ಷೇತ್ರಗಳಿಗೆ ಅನನ್ಯ ಕೊಡುಗೆಯನ್ನು ನೀಡುತ್ತಾ ಬಂದಿದೆ. ವಿದ್ಯಾರ್ಥಿಗಳು ನಿರ್ದಿಷ್ಟ ಗುರಿಯನ್ನು ಹೊಂದಿರಬೇಕು ಹಾಗೂ ದೇಶ ಕಟ್ಟುವ ಕೆಲಸದಲ್ಲಿ ಭಾಗವಹಿಸಬೇಕು. ಶ್ರೀಮಠವು ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗೆ ನಿರಂತರವಾಗಿ ಶ್ರಮಿಸುತ್ತಿದೆ ಎಂದರು.

ಮೈಸೂರಿನ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀಮತಿ ಎಂ.ಎಸ್. ಅರ್ಚನರವರು ಕಾರ್ಯಕ್ರಮವನ್ನು ಉದ್ಘಾಟಿಸಿ



ಸುತ್ತೂರು ಶ್ರೀಮಠವು ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜನೆ ಮಾಡುವುದರ ಮೂಲಕ ಭಾರತದ ಸಂಸ್ಕೃತಿ ಮತ್ತು ಪರಂಪರೆಯನ್ನು ಶ್ರೀಮಂತಗೊಳಿಸುತ್ತಿದೆ. ಶ್ರಾವಣ ಮಾಸದ ಸಂದರ್ಭದಲ್ಲಿ ಸದ್ವಿಚಾರಗಳನ್ನು ಕೇಳುವುದರಿಂದ ನಮ್ಮ ಜೀವನವು ಪಾವನವಾಗುತ್ತದೆ ಎಂದು ನುಡಿದರು.

ವಿದ್ವಾನ್ ಡಾ. ಮೈಸೂರು ಮಂಜುನಾಥ್‌ರವರು ಶ್ರಾವಣ ಮಾಸದಿಂದ ಹಿಂದೂ ಹಬ್ಬಗಳು ಪ್ರಾರಂಭವಾಗುತ್ತವೆ. ಈ ಮಾಸದಲ್ಲಿ ಶಿವನ ಕುರಿತು ಪ್ರವಚನಗಳನ್ನು ಆಲಿಸಿದರೆ ಇಷ್ಟಾರ್ಥಗಳು ನೆರವೇರುತ್ತವೆ. ಚಿಕ್ಕಮಕ್ಕಳಿಂದ ಹಿರಿಯರವರೆಗೆ ಪ್ರವಚನವನ್ನು ಕೇಳಬಹುದಾಗಿದೆ. ಇದು ಪ್ರೀತಿ, ವಿಶ್ವಾಸ, ಸಹಬಾಳ್ವೆ ಹಾಗೂ ಭಕ್ತಿಯನ್ನು ಬೆಳಸುತ್ತದೆ ಎಂದು ಹೇಳಿದರು.

ಸಮ್ಮುಖ ವಹಿಸಿದ್ದ ಸರಗೂರು ತಾಲ್ಲೂಕು ಹಂಚಿಪುರ ಶ್ರೀ ಪಟ್ಟದ ಮಠದ ಶ್ರೀ ತೋಂಟದಾರ್ಯ ಸ್ವಾಮಿಗಳು ಸುತ್ತೂರು ಶ್ರೀಮಠವು ಅನೇಕ ದಶಕಗಳಿಂದ ಪ್ರವಚನ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಿದೆ. ಪ್ರವಚನವನ್ನು ಆಲಿಸಿ ಅದನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಬದುಕನ್ನು ಸಾರ್ಥಕಗೊಳಿಸಿಕೊಳ್ಳಬೇಕು ಎಂದರು.

ಲಕ್ಕಣ್ಣ ದಂಡೇಶ ವಿರಚಿತ 'ಶಿವತತ್ತ್ವ ಚಿಂತಾಮಣಿ' ಕೃತಿಯ ಪ್ರವಚನವನ್ನು ಜೆಎಸ್‌ಎಸ್ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಪ್ರೊ. ಹೆಚ್.ಬಿ. ದೇವಣ್ಣನವರು ಆರಂಭಿಸಿದರು. ಕಾರ್ಯಕ್ರಮದಲ್ಲಿ ಗುರುಕುಲದ ಸಾಧಕರು, ಜೆಎಸ್‌ಎಸ್ ಸಂಸ್ಥೆಗಳ ಅಧಿಕಾರಿ ವರ್ಗದವರು ಸುತ್ತೂರು ಹಾಗೂ ಸುತ್ತಮುತ್ತಲ ಗ್ರಾಮಗಳ ಭಕ್ತರು ಭಾಗವಹಿಸಿದ್ದರು. ಶಾಲಾ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಶ್ರೀ ಎಂ.ಜಿ. ಬಸವಣ್ಣ ಸ್ವಾಗತಿಸಿದರು. ಶ್ರೀ ಎಸ್. ಚಂದ್ರಮೌಳೇಶ್ವರರವರು ವಂದಿಸಿದರು. ಶ್ರೀ ಹೆಚ್.ಎಂ. ದಯಾನಂದಸ್ವಾಮಿ ನಿರೂಪಿಸಿದರು.

ಜೀವನದಲ್ಲಿ ಸದ್ಗುಣಗಳನ್ನು ಅಳವಡಿಸಿಕೊಳ್ಳಲು ಶ್ರಾವಣ ಮಾಸ ಅತ್ಯಂತ ಪ್ರಶಸ್ತ

ಜೀವನದಲ್ಲಿ ಸದ್ಗುಣಗಳನ್ನು ಅಳವಡಿಸಿಕೊಳ್ಳಲು ಶ್ರಾವಣ ಮಾಸ ಅತ್ಯಂತ ಪ್ರಶಸ್ತ ವಾದುದು ಎಂದು ಮೈಸೂರು ಉಪ ಪೊಲೀಸ್ ಆಯುಕ್ತರಾದ ಡಾ. ಹರ್ಷ ಪ್ರಿಯಂವದರವರು ಆಗಸ್ಟ್ 13ರಂದು ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರಾವಣ ಮಾಸದ ಪೂಜಾನುಷ್ಠಾನ ಮತ್ತು ಪ್ರವಚನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ ತಿಳಿಸಿದರು. ಶ್ರಾವಣ ಮಾಸ



ಭಾರತೀಯರಿಗೆ ಅತ್ಯಂತ ವಿಶೇಷವಾದ ತಿಂಗಳು. ನನ್ನ ಮೂಲಸ್ಥಳ ಜಾರ್ಖಂಡ್ ದಲ್ಲಿಯೂ ಕೂಡ ಈ ಮಾಸವನ್ನು ಅತ್ಯಂತ ಶ್ರದ್ಧೆ, ಭಕ್ತಿ ಮತ್ತು ಉತ್ಸಾಹಗಳಿಂದ ಆಚರಿಸಲಾಗುತ್ತದೆ. ಭಾರತೀಯರಲ್ಲಿ ಸಂಸ್ಕೃತಿ, ಪರಂಪರೆ ಮತ್ತು ಆಚರಣೆಗಳಲ್ಲಿ ಭಿನ್ನತೆಗಳು ಕಂಡುಬಂದರೂ ಎಲ್ಲರ ಗುರಿ ಒಂದೇ ಆಗಿದೆ. ಅದು ಭಗವಂತನಲ್ಲಿ ಶರಣಾಗತಿಯನ್ನು ಹೊಂದುವುದಾಗಿದೆ. ನಮ್ಮಲ್ಲಿರುವ ಕೆಟ್ಟ ಆಲೋಚನೆಗಳನ್ನು ತೊಡೆದುಹಾಕಿ ಉತ್ತಮ ವಿಚಾರಗಳನ್ನು ಅಳವಡಿಸಿಕೊಳ್ಳಲು ಈ ಮಾಸ ಸಹಾಯಕವಾಗಲಿದೆ ಎಂದು ತಿಳಿಸಿದರು.

ಮೈಸೂರು ಮಹಾನಗರಪಾಲಿಕೆ ಆಯುಕ್ತರಾದ ಶ್ರೀಮತಿ ಎಂ.ಕೆ. ಸವಿತಾರವರು ಮನುಷ್ಯ ಇಂದು ಒತ್ತಡದಲ್ಲಿ ಜೀವಿಸುತ್ತಿದ್ದಾನೆ. ಅದರಿಂದ ಹೊರಬರಲು ಶ್ರಾವಣ ಮಾಸದಲ್ಲಿ ಆಯೋಜಿಸುವ ಪ್ರವಚನಗಳು ಸಹಕಾರಿಯಾಗಲಿವೆ. ಮಠಗಳಲ್ಲಿ ನೆರವೇರುವ ಆಧ್ಯಾತ್ಮಿಕ ಕಾರ್ಯಕ್ರಮಗಳು ಸಮಾಜದ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಧ್ಯಾನ, ಆಧ್ಯಾತ್ಮಿಕತೆ ಹಾಗೂ ಭಕ್ತಿಯ ಭಾವನೆಗಳನ್ನು ದೈನಂದಿನ ಜೀವನದಲ್ಲಿ ಅವಳವಡಿಸಿಕೊಳ್ಳಬೇಕು. ಶ್ರಾವಣ ಮಾಸ ಮುಂದಿನ ಯೋಜನೆಗಳಿಗೆ ಮತ್ತು ಉತ್ತಮ ಸಿದ್ಧಿ ಸಾಧನೆಗೆ ಅತ್ಯಂತ ಪವಿತ್ರವಾದುದಾಗಿದೆ. ಇಂತಹ ಸತ್ಸಂಗಗಳು ನನಗೂ ಸಹ ಸಾಕಷ್ಟು ಮನೋಬಲವನ್ನು ನೀಡಿವೆ. ಧೈರ್ಯದಿಂದ ಕರ್ತವ್ಯವನ್ನು ನಿರ್ವಹಿಸಲು ಅನುಕೂಲವಾಗಿವೆ ಎಂದರು.

ಮೇಲುಕೋಟೆ ಶ್ರೀ ವಂಗೀಪುರ ನಂಬಿ ಮಠದ ಶ್ರೀ ಇಳೈ ಆಳ್ವಾರ್ ಸ್ವಾಮೀಜಿಯವರು ಒಳ್ಳೆಯದನ್ನು ಕೇಳಿದರೆ ಒಳ್ಳೆಯದೇ ಆಗುತ್ತದೆ. ಶ್ರಾವಣ ಮಾಸ ಪೂರ್ತಿ ಇಲ್ಲಿ ಆಲಿಸುವ ಮಾತುಗಳನ್ನು ಮನನ ಮಾಡಬೇಕು ಮತ್ತು ಅವನ್ನು ಜೀವನದಲ್ಲಿ ಅಳವಡಿಸಿಕೊಂಡು ಅದರಂತೆ ನಡೆಯಬೇಕು. ಸುತ್ತೂರು ಶ್ರೀಮಠ ಮಾಡುವ ಇಂತಹ ಕಾರ್ಯಗಳು ಸಾರ್ವಕಾಲಿಕವಾದುವು ಎಂದು ಹೇಳಿದರು.

ಡಾ. ಕೆ. ಅನಂತರಾಮುರವರು ಶ್ರಾವಣಕ್ಕೂ–ಶ್ರವಣಕ್ಕೂ ಅವಿನಾಭಾವ ಸಂಬಂಧವಿದೆ. ಈ ಮಾಸದಲ್ಲಿ ಸದ್ವಿಚಾರಗಳ ಚಿಂತನೆ ಮಾಡಿದರೆ ಸಾಲದು, ಬದುಕಿನಲ್ಲಿ ಅವುಗಳನ್ನು ಅಳವಡಿಸಿಕೊಳ್ಳಬೇಕು. ಸುಸಂಸ್ಕೃತರಾಗಿ ಬೆಳೆಯಲು ಇಂತಹ ಸತ್ಸಂಗಗಳು, ಪ್ರವಚನಗಳು ನಡೆಯುತ್ತಲೇ ಇರಬೇಕು. ಇದರಿಂದ ಚಿತ್ತಶುದ್ಧಿಯಾಗುತ್ತದೆ ಮತ್ತು ಏಕಾಗ್ರತೆ ಹೆಚ್ಚುತ್ತದೆ. ಇಂದು ಪೀಳಿಗೆಯಿಂದ ಪೀಳಿಗೆಗೆ ಬುದ್ಧಿ ಬೆಳೆಯುತ್ತಿದೆ ಆದರೆ ವಿವೇಕ ಬೆಳೆಯುತ್ತಿಲ್ಲ. ಶಾಲಾ–ಕಾಲೇಜುಗಳಲ್ಲಿ ಸರಿಯಾದ ನೈತಿಕ ಶಿಕ್ಷಣ ದೊರೆಯುತ್ತಿಲ್ಲ. ಇಂದಿನ ಮಕ್ಕಳು ಕೇವಲ ಅಂಕದಾಹಕ್ಕೆ ಸಿಲುಕಿದ್ದಾರೆ. ಯುವಜನರು ಇಂತಹ ಪ್ರವಚನ



ಕಾರ್ಯಕ್ರಮಗಳಲ್ಲಿ ಹೆಚ್ಚಾಗಿ ಪಾಲ್ಗೊಳ್ಳಬೇಕು. ಬದುಕು ಉತ್ತಮ ಮೌಲ್ಯಗಳಿಂದ ರೂಪುಗೊಳ್ಳಬೇಕು. ಶ್ರಾವಣ ಮಾಸ ಭಕ್ತಿಯ ಬೀಜಗಳನ್ನು ಬಿತ್ತುವ ಕಾಲ. ಯಾವುದೇ ಕಾರ್ಯವನ್ನು ಶ್ರದ್ಧೆ ಮತ್ತು ಭಕ್ತಿಯಿಂದ ನಿರಂತರವಾಗಿ ಮಾಡುವುದೇ ಅನುಷ್ಠಾನ. ಅಂತಹ ಅನುಷ್ಠಾನ ಶ್ರೀಮಠದಲ್ಲಿ ಹಲವಾರು ವರ್ಷಗಳಿಂದ ನಡೆದುಕೊಂಡು ಬರುತ್ತಿದೆ. ಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಅದಕ್ಕೆ ಸಾವಿರಪಟ್ಟು ವೇಗವನ್ನು ನೀಡಿದ್ದಾರೆ ಎಂದು ಹೇಳಿದರು.

ಪ್ರೊ. ಮೊರಬದ ಮಲ್ಲಿಕಾರ್ಜುನರವರು ಸ್ವಾಗತಿಸಿದರು. ಶ್ರೀ ಎನ್.ಆರ್. ಶಿವಕುಮಾರ್ ವಂದಿಸಿದರು. ಶ್ರೀ ಕುಮಾರಸ್ವಾಮಿ ವಿರಕ್ತಮಠ ಕಾರ್ಯಕ್ರಮ ನಿರೂಪಿಸಿದರು. ಜೆಎಸ್ಎಸ್ ಲಲಿತಕಲಾ ವೃಂದದವರು ಪ್ರಾರ್ಥಿಸಿದರು. ಮೈಸೂರು ಶ್ರೀ ಸುತ್ತೂರು ಮಠದ ಸಿಬ್ಬಂದಿವರ್ಗದವರು ಸೇವಾರ್ಥ ನೆರವೇರಿಸಿದರು.

ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ–ಬಲಿದಾನಗಳನ್ನು ಸದಾ ಸ್ಮರಿಸಬೇಕು

ದೇಶದ ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ–ಬಲಿದಾನಗಳನ್ನು ಸದಾ ಸ್ಮರಿಸುತ್ತಿರಬೇಕು ಎಂದು ರಿಸರ್ವ್ ಬ್ಯಾಂಕ್ ನೋಟು ಪೇಪರ್ ಮಿಲ್‌ನ ನಿವೃತ್ತ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ತಳಿಕೇರಪ್ಪನವರು ಆಗಸ್ಟ್ 15ರಂದು ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ 80ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಧ್ವಜಾರೋಹಣವನ್ನು ನೆರವೇರಿಸಿ ಮಾತನಾಡುತ್ತ ತಿಳಿಸಿದರು. ಇದು ದೇಶದ ಇತಿಹಾಸದಲ್ಲಿ ಅತ್ಯಂತ ಪವಿತ್ರವಾದ ದಿನ. ಅಸಂಖ್ಯಾತ ಸತ್ಯಾಗ್ರಹಿಗಳ ಹೋರಾಟದ ಫಲವಾಗಿ ದೇಶ ಸ್ವಾತಂತ್ರ್ಯವನ್ನು ಗಳಿಸಿತು. ಸ್ವಾತಂತ್ರ್ಯವನ್ನು ಗಳಿಸಿದ ಮೇಲೆ ನಾವು ದೇಶವನ್ನು ಎಷ್ಟು ಉತ್ತಮಗೊಳಿಸಿದ್ದೇವೆ ಎಂಬುದು ಮುಖ್ಯವಾಗುತ್ತದೆ. ಅದನ್ನು ಸಾರ್ಥಕಗೊಳಿಸುವ ಜವಾಬ್ದಾರಿ ಎಲ್ಲರ ಮೇಲಿದೆ. ಜ್ಞಾನ, ಶಿಕ್ಷಣ, ಸೇವೆ, ಆರೋಗ್ಯ, ಸಂಸ್ಕೃತಿ ಮತ್ತು ಗ್ರಾಮೀಣಾಭಿವೃದ್ಧಿಗಳಂತಹ ಸ್ವಾತಂತ್ರ್ಯದ ಧ್ಯೇಯೋದ್ದೇಶಗಳನ್ನು ಅಂದಿನಿಂದಲೂ ಸುತ್ತೂರು ಶ್ರೀಮಠ ನಡೆಸಿಕೊಂಡು ಬರುತ್ತಿರುವುದು ಶ್ಲಾಘನೀಯ. ಮನುಷ್ಯ ಕಲ್ಯಾಣವೇ ಸಮಾಜದ ಕಲ್ಯಾಣ, ಸಮಾಜದ ಕಲ್ಯಾಣವೇ ರಾಷ್ಟ್ರದ ಕಲ್ಯಾಣ ಎಂಬ ಆಶಯವನ್ನು ಶ್ರೀಮಠ ಹೊಂದಿದೆ. ತ್ರಿವಿಧ ದಾಸೋಹಗಳ ಮೂಲಕ ರಾಷ್ಟ್ರ ನಿರ್ಮಾಣದಲ್ಲಿ ಮಹತ್ತರ ಹೆಜ್ಜೆಯನ್ನಿಟ್ಟಿದೆ ಎಂದು ಹೇಳಿದರು.

ಶ್ರೀ ಜಯರಾಜೇಂದ್ರರು, ಶ್ರೀ ಎಸ್.ಪಿ. ಮಂಜುನಾಥ್, ಶ್ರೀ ಎಸ್. ಶಿವಕುಮಾರ ಸ್ವಾಮಿ, ಶ್ರೀ ಅಕ್ಷಯ್ ಮಲ್ಲಪ್ಪ, ಡಾ. ದೇವಿಕಾ ಗುಣಶೀಲಾ, ಡಾ. ರಾಜಶೇಖರ್ ನಾಯಕ್,



ಶ್ರೀ ವಿನಯ್ ಗುರುಕಾರ್, ಶ್ರೀ ವಿ. ಮಲ್ಲಿಕಾರ್ಜುನಸ್ವಾಮಿ ಮೊದಲಾದವರು ಉಪಸ್ಥಿತರಿದ್ದರು. ಶ್ರೀಮಠದ ಗುರುಕುಲ ಸಾಧಕರು, ಸೇವಾ ಸಿಬ್ಬಂದಿವರ್ಗದವರು, ಆರಕ್ಷಕ ಸಿಬ್ಬಂದಿಗಳು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು. ಶ್ರೀಮತಿ ರೂಪ ಗುರುಪ್ರಸಾದ್ ಮತ್ತು ಶ್ರೀಮತಿ ವಿನುತ ದೇಶಭಕ್ತಿಗೀತೆಗಳನ್ನು ಪ್ರಸ್ತುತಪಡಿಸಿದರು. ಶ್ರೀ ಎಸ್. ನಂದೀಶ್ ಸ್ವಾಗತಿಸಿದರು. ಕರೋಹಟ್ಟಿಯ ಶ್ರೀ ಬಸವಲಿಂಗ ದೇಶಿಕೇಂದ್ರ ಸ್ವಾಮಿಗಳು ವಂದಿಸಿದರು. ಶ್ರೀ ಕುಮಾರಸ್ವಾಮಿ ವಿರಕ್ತಮಠ ಕಾರ್ಯಕ್ರಮ ನಿರೂಪಿಸಿದರು.

ಜಗತ್ತಿನ ಶ್ರೇಷ್ಠ ಭಾಷೆಗಳಲ್ಲಿ ಸಂಸ್ಕೃತವೂ ಒಂದು

ಜಗತ್ತಿನ ಶ್ರೇಷ್ಠ ಪ್ರಾಚೀನ ಭಾಷೆಗಳಲ್ಲಿ ಸಂಸ್ಕೃತವೂ ಒಂದು ಎಂದು ಪರಮಪೂಜ್ಯ ಜಗದ್ಗುರುಗಳವರು ಆಗಸ್ಟ್ 19ರಂದು ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಆಯೋಜಿಸಿದ್ದ ಸಂಸ್ಕೃತೋತ್ಸವದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಭಾರತೀಯ ಭಾಷೆಗಳಷ್ಟೇ ಅಲ್ಲದೆ ಅನೇಕ ದೇಶಗಳ ಭಾಷೆಗಳಿಗೂ ಸಂಸ್ಕೃತ ತಾಯಿಬೇರಾಗಿದೆ. ವ್ಯಾಕರಣ ಶುದ್ಧತೆಯನ್ನು ಸಂಸ್ಕೃತ ಭಾಷೆ ಕಲಿಸುತ್ತದೆ. ಬಹಳಷ್ಟು ಪ್ರಾಚೀನ ಗ್ರಂಥಗಳು ಸಂಸ್ಕೃತದಲ್ಲಿ ರಚಿತವಾಗಿವೆ. ತರಗತಿಯಲ್ಲಿ ಮಕ್ಕಳು ಶ್ರದ್ಧೆ ಹಾಗೂ ಆಸಕ್ತಿಯಿಂದ ಸಂಸ್ಕೃತ ಭಾಷೆಯನ್ನು ಕಲಿತು ಶ್ರೇಷ್ಠ ವಿದ್ವಾಂಸರಾಗಲು ಸಾಧ್ಯವಿದೆ ಎಂದು ಹೇಳಿದರು.

ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಸಿ. ಶಿವರಾಜುರವರು ಭಾರತೀಯರ ಜ್ಞಾನದಾಹವನ್ನು ಸಂಸ್ಕೃತ ಭಾಷೆ ನೀಗಿಸಿದೆ. ಇಂದಿನ ತಂತ್ರಜ್ಞಾನ ಯುಗದಲ್ಲಿ ಜೆಎಸ್ಎಸ್ ಸಂಸ್ಥೆ ಸಂಶೋಧನಾ ಕೇಂದ್ರ ತೆರೆದಿರುವುದು ಹೆಮ್ಮೆಯ ಸಂಗತಿ. ಸಂಸ್ಕೃತ ಗ್ರಂಥಭಂಡಾರವನ್ನು ಸಂರಕ್ಷಿಸುವ ಕಾರ್ಯವನ್ನು ಜೆಎಸ್ಎಸ್ ಸಂಸ್ಥೆ ಕೈಗೊಂಡಿರುವುದು ಅಭಿಮಾನದ ಸಂಗತಿ ಎಂದು ತಿಳಿಸಿದರು.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎಸ್. ಅಹಲ್ಯಾರವರು ಶ್ರಾವಣಮಾಸ ಶ್ರೇಷ್ಠವಾಗಿದ್ದು ಈ ಮಾಸದಲ್ಲಿ ಸಂಸ್ಕೃತೋತ್ಸವವನ್ನು ಎಲ್ಲೆಡೆ ಆಚರಿಸಲಾಗುತ್ತಿದೆ. ಸಂಸ್ಕೃತ ಭಾಷೆಯು ವೈಜ್ಞಾನಿಕ ಮಹತ್ವದ ಜೊತೆಗೆ ಶ್ರೇಷ್ಠಮಟ್ಟದ ಸಂಸ್ಕಾರವನ್ನೂ ಕಲಿಸುತ್ತದೆ. ಸಂಸ್ಕೃತ ಜ್ಞಾನದ ಭಾಷೆಯೂ ಹೌದು, ಅನ್ನದ ಭಾಷೆಯೂ ಹೌದು ಎಂದು ಅಭಿಪ್ರಾಯಪಟ್ಟರು.

ಪ್ರೊ. ಕೋಟೆಮನೆ ರಾಮಚಂದ್ರ ಜಿ. ಭಟ್‌ರವರು ಸಂಸ್ಕೃತ ವಿಶ್ವಭಾಷೆಯಾಗಿದೆ. ಜಗತ್ತಿನ ಬಹಳಷ್ಟು ಭಾಷೆಗಳ ಮಾತೃ ಭಾಷೆಯಾಗಿದೆ. ಜಗತ್ತಿನ ಭಾಷೆಗಳಲ್ಲಿ ಸಂಸ್ಕೃತ



ಅಗ್ರಮಾನ್ಯತೆಯನ್ನು ಪಡೆದಿದೆ. ಸಂಸ್ಕೃತ ಸಂಸ್ಕಾರಗುಣಸಂಹಿತೆ ಮತ್ತು ಜ್ಞಾನಭಂಡಾರದ ಸತ್ಯವನ್ನು ಹೊಂದಿದೆ. ಈ ಭಾಷೆಯನ್ನು ಕಲಿಯುವುದರಿಂದ ಸತ್ಯದ ದರ್ಶನವಾಗುತ್ತದೆ ಎಂದು ತಿಳಿಸಿದರು.

ಸಂಶೋಧಕರು ಮತ್ತು ಆಯುರ್ವೇದ ವೈದ್ಯರಾದ ಡಾ. ಬಿ ನಂಜುಂಡಸ್ವಾಮಿಯವರು ಸನ್ಮಾನ ಸ್ವೀಕರಿಸಿ ಮಾತನಾಡುತ್ತಾ ಮೈಸೂರು ಸಂಸ್ಥಾನ ಸಂಸ್ಕೃತ ಭಾಷೆ ಮತ್ತು ಸಾಹಿತ್ಯಕ್ಕೆ ಗುರುತರವಾದ ಕೊಡುಗೆಯನ್ನು ನೀಡಿದೆ ಎಂದು ತಿಳಿಸಿದರು. ವಿಶ್ರಾಂತ ಸಂಸ್ಕೃತ ಪ್ರಾಧ್ಯಾಪಕರಾದ ಡಾ. ಶಿವಕುಮಾರಸ್ವಾಮಿಯವರು ಸನ್ಮಾನ ಸ್ವೀಕರಿಸಿ ಮಾತನಾಡುತ್ತಾ ಸುತ್ತೂರು ಶ್ರೀಮಠವು ಸಂಸ್ಕೃತ ಭಾಷೆ ಮತ್ತು ಸಾಹಿತ್ಯಕ್ಕೆ ವಿಶೇಷ ಕೊಡುಗೆಯನ್ನು ನೀಡಿರುವುದನ್ನು ಸ್ಮರಿಸಿದರು.

ಸಂಸ್ಕೃತೋತ್ಸವದ ನಿಮಿತ್ತ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಲಾಗಿದ್ದ ಭಗವದ್ಗೀತೆ ಕಂಠಪಾಠ ಸ್ಪರ್ಧೆ, ರಸಪ್ರಶ್ನೆ, ಭಾಷಣ ಸ್ಪರ್ಧೆ, ಪದಸ್ಮರಣೆ ಮತ್ತು ಸಂಸ್ಕೃತದಲ್ಲಿ ಜಾಹಿರಾತು ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಸಂಸ್ಕೃತ ವಿಷಯದಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು. ಕಾರ್ಯಕ್ರಮದ ನಂತರ ಶಿಶುಪಾಲವಧಾ ನಾಟಕ ಪ್ರದರ್ಶಿತವಾಯಿತು.

ಕು. ಧಾತ್ರಿ ಮತ್ತು ವೃಂದವರು ಪ್ರಾರ್ಥಿಸಿದರು. ಸಂಸ್ಕೃತೋತ್ಸವ ಸಂಚಾಲಕರಾದ ಡಾ. ಬಿ.ಪಿ. ಷಡಕ್ಷರಿ ಸ್ವಾಗತಿಸಿದರು. ಡಾ. ಸ್ವರ್ಣದತ್ತ ವಂದಿಸಿದರು. ಶ್ರೀ ಎಸ್. ಚಂದ್ರಮೌಳೇಶ್ವರ ಕಾರ್ಯಕ್ರಮ ನಿರೂಪಿಸಿದರು.

ಜ್ಞಾನ ಹಾಗೂ ಆಧ್ಯಾತ್ಮಿಕತೆಯ ತಾಣ ಶ್ರೀ ಸುತ್ತೂರು ಮಠ

ಜ್ಞಾನದ ಜೊತೆಗೆ ಆಧ್ಯಾತ್ಮಿಕತೆಯನ್ನು ಕಲಿಸುವ ತಾಣ ಶ್ರೀ ಸುತ್ತೂರು ಮಠ ಎಂದು ಟಿವಿಎಸ್ ಮೋಟಾರ್ ಕಂಪನಿಯ ಗೌರವ ಅಧ್ಯಕ್ಷರಾದ ಶ್ರೀ ವೇಣು ಶ್ರೀನಿವಾಸನ್‌ರವರು ಆಗಸ್ಟ್ 20 ಗುರುವಾರದಂದು ಸುತ್ತೂರು ಶ್ರೀಕ್ಷೇತ್ರಕ್ಕೆ ಆಗಮಿಸಿದ್ದಾಗ ಪ್ರಾರ್ಥನಾ ಸಭೆಯಲ್ಲಿ ಜೆಎಸ್‌ಎಸ್ ವಸತಿ ಶಾಲೆಯ ಸಹಸ್ರಾರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಾ ತಿಳಿಸಿದರು. ಅತ್ಯಂತ ಪ್ರಾಚೀನ ಮಠಗಳಲ್ಲಿ ಒಂದಾದ ಶ್ರೀ ಸುತ್ತೂರು ಮಠಕ್ಕೆ ಬಂದಿರುವುದು ನನ್ನ ಪುಣ್ಯ, ಶ್ರೀ ಸುತ್ತೂರು ಕ್ಷೇತ್ರದಲ್ಲಿ ಜಾತಿ, ಮತ, ಭೇದವಿಲ್ಲದೆ ವಿವಿಧ ಜಿಲ್ಲೆ, ರಾಜ್ಯಗಳಿಂದ ಬಂದಿರುವಂತಹ ಸಹಸ್ರಾರು ಮಕ್ಕಳಿಗೆ ವಸತಿ, ಶಿಕ್ಷಣವಷ್ಟೆ ಅಲ್ಲದೆ, ಪರಿಪೂರ್ಣ ಜೀವನಕ್ಕೆ ಅತ್ಯಾವಶ್ಯವಾದ ಶಿಸ್ತು, ಸಂಸ್ಕಾರವನ್ನು



ಕೊಟ್ಟು ಸಮಾಜಕ್ಕೆ ಉತ್ತಮ ಪ್ರಜೆಗಳನ್ನಾಗಿ ರೂಪಿಸಲಾಗುತ್ತಿದೆ. ದೇಶ ವಿದೇಶಗಳಲ್ಲಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ, ಗುಣಾತ್ಮಕ ಶಿಕ್ಷಣವನ್ನು ನೀಡುವ ಮೂಲಕ ಶ್ರೀ ಸುತ್ತೂರು ಮಠವು ಸಮಾಜಕ್ಕೆ ಅನನ್ಯ ಕೊಡುಗೆಗಳನ್ನು ನೀಡುತ್ತಿದೆ. ಸತತ ಪರಿಶ್ರಮದಿಂದ ಶಿಕ್ಷಣವನ್ನು ಪಡೆದು ದೇಶಕ್ಕೆ ಏನಾದರೂ ಕೊಡುಗೆ ನೀಡುವಂತ ಪ್ರಜ್ಞಾವಂತ ಪ್ರಜೆಗಳಾಗಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ಪರಮಪೂಜ್ಯ ಜಗದ್ಗುರುಗಳವರು ಆಶೀರ್ವಚನ ನೀಡಿ, ಶ್ರೀ ವೇಣು ಶ್ರೀನಿವಾಸನ್‌ರವರು ಸರಳ ಸಜ್ಜನಿಕೆಯ ವ್ಯಕ್ತಿತ್ವ ಉಳ್ಳವರು. ಜನಸಾಮಾನ್ಯರಂತೆ ವೇಷಭೂಷಣದಲ್ಲಿ ಸರಳವಾಗಿ ಕಂಡರೂ ಜಗತ್ತಿನ ವಿಖ್ಯಾತ ಉದ್ಯಮಿಗಳಲ್ಲಿ ಒಬ್ಬರಾಗಿದ್ದಾರೆ. ಭಾರತ ದೇಶದಲ್ಲಿ ಸುಮಾರು ನೂರು ವರ್ಷಗಳ ಹಿಂದೆ ಅವರ ತಾತನವರಾದ ಟಿ.ವಿ. ಸುಂದರಂ ಅಯ್ಯಂಗಾರ್ ರವರು ಟಿವಿಎಸ್ ಕಂಪನಿಯನ್ನು ಪ್ರಾರಂಭಿಸಿದರು. ಭಾರತ ಅಷ್ಟೆ ಅಲ್ಲದೆ ಇಂಡೋನೇಷಿಯಾ, ಇಂಗ್ಲೆಂಡ್, ಅಮೇರಿಕಾ ಮತ್ತು ಇತರೆ ದೇಶಗಳಲ್ಲಿ ಕಂಪನಿಗಳನ್ನು ಸ್ಥಾಪಿಸಿದ್ದಾರೆ. ದೇಶದ ಹಿತಕ್ಕಾಗಿ ಸಂಕಲ್ಪ ಉಳ್ಳವರಾಗಿದ್ದಾರೆ. ಬೃಹದಾಕಾರವಾಗಿ ಬೆಳೆದು ಪ್ರಪಂಚದ ಪ್ರತಿಷ್ಠಿತ ಕಂಪೆನಿಗಳಲ್ಲಿ ಟಿ.ವಿ.ಎಸ್ ಒಂದಾಗಿದೆ. ಹಲವಾರು ದೇವಸ್ಥಾನಗಳ ಸ್ಥಾಪನೆ ಮತ್ತು ಜೀರ್ಣೋದ್ಧಾರ ಕಾಯಕದಲ್ಲೂ ನಿಸ್ವಾರ್ಥ ಸೇವೆ ಸಲ್ಲಿಸುತ್ತಿದ್ದಾರೆ. ಸದಾ ಸರ್ವರ ಹಿತವನ್ನು ಬಯಸುವವರು 2010ರಲ್ಲಿ ಪದ್ಮಶ್ರೀ, 2020ರಲ್ಲಿ ಪದ್ಮಭೂಷಣ ಪುರಸ್ಕಾರಗಳನ್ನು ಮುಡಿಗೇರಿಸಿ ಕೊಂಡಿದ್ದಾರೆ. ವಿದೇಶಗಳಿಂದಲೂ ಅನೇಕ ಪ್ರಶಸ್ತಿಗಳು ಲಭಿಸಿವೆ ಎಂದರು.

ಕಾರ್ಯಕ್ರಮದಲ್ಲಿ ಮಹಾವಿದ್ಯಾಪೀಠದ ಅಧಿಕಾರಿಗಳು, ಊಟಿ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಧನಪಾಲ್, ಟಿ.ವಿ.ಎಸ್ ಕಂಪನಿಯ ಅಧಿಕಾರಿಗಳಾದ ಶ್ರೀ ಜಯಣ್ಣ, ಶ್ರೀ ಶಾಂತಮಲ್ಲಪ್ಪ, ಶ್ರೀಧರ್, ಬಿಲ್ಡರ್ ಆದ ಶ್ರೀ ಮಂಜುನಾಥ್ ಶ್ರಾಫ್, ಸ್ಥಪತಿಗಳಾದ ಶ್ರೀ ಶಂಕರ್, ಆಗಮಿಕರಾದ ಡಾ. ಮಲ್ಲಣ್ಣ, ಸಂಸ್ಥೆಗಳ ಮುಖ್ಯಸ್ಥರುಗಳು ಹಾಗೂ ಇತರರು ಉಪಸ್ಥಿತರಿದ್ದರು. ಸಹಾಯಕ ಆಡಳಿತಾಧಿಕಾರಿಗಳಾದ ಶ್ರೀ ಜಿ.ಎಲ್. ತ್ರಿಪುರಾಂತಕ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು.

❑



ನೀವು

ಮಲೆಯೂರು ಗುರುಸ್ವಾಮಿ

ನೀವು ಹಿಮಾಚಲ ಅಲ್ಲ !
ನೀಲಿ ಸಾಗರವೂ ಅಲ್ಲ !!
ಇವೆಲ್ಲವನ್ನೂ ಒಳಗೊಂಡ ನೀವು,
ಧರಿತ್ರಿ !!!
ಧರ್ಮದ ಕಕ್ಷೆಯಲ್ಲಿಯೇ
ನಿರಂತರ ಸುತ್ತುತ್ತಾ
ನಮ್ಮನ್ನು ಸ್ವಸ್ಥದೊಳು
ನಿಲ್ಲಿಸಿದ್ದೀರಿ ರಾಜೇಂದ್ರರೆ
ನಮ್ಮ ಬೇರುಗಳಿಗೆ ಫಲವತ್ತು ನೆಲವಾಗಿ,
ರೆಂಬೆ ಕೊಂಬೆಗಳಿಗೆ ಆವರಣವಾಗಿದ್ದಿರಿ,
ಸಾವು ಯಾರಿಗೆ ಬರುವುದಿಲ್ಲ?
ಸೂರ್ಯ, ಚಂದ್ರ, ಭೂಮಿ.....ಬ್ರಹ್ಮಾಂಡಕ್ಕೂ
ಸೂರ್ಯನಿಂದ ಬಿಸುಪು ಪಡೆದದ್ದು
ಚಂದ್ರನಿಂದ ತಂಪು ಕಂಡದ್ದು
ಸುಳ್ಳಾಗಬಹುದೇ ಸಾವಿನಲ್ಲಿ !
ಇಷ್ಟಕ್ಕೂ ನೀವು ಏನಾಗಿದ್ದೀರಿ ?
ನಮ್ಮ ಕಣ್ಣಿಗೆ ಮುಂದಿದ್ದವರು
ಕಣ್ಣೊಳಗೆ ಬಂದಿದ್ದೀರಿ, ಎದೆಯೊಳಗೆ ಇಳಿದಿದ್ದೀರಿ
ಮಾರ್ಗದರ್ಶಕರಾಗಿ ಇದುವರೆಗೆ ಇದ್ದವರು -
ಈಗ ಮಾರ್ಗವೇ ಆಗಿದ್ದೀರಿ !!

ಹಿಂಬದಿ ಪುಟದ ಚಿತ್ರ

ಸುತ್ತೂರು ಶ್ರೀಕ್ಷೇತ್ರಕ್ಕೆ ಟಿವಿಎಸ್ ಮೋಟಾರ್ ಕಂಪನಿಯ ಗೌರವ ಅಧ್ಯಕ್ಷರಾದ ಶ್ರೀ ವೇಣು ಶ್ರೀನಿವಾಸನ್‌ರವರು ಆಗಮಿಸಿದ್ದಾಗ ಪರಮಪೂಜ್ಯ ಜಗದ್ಗುರುಗಳವರ ಆಶೀರ್ವಾದ ಪಡೆದ ಸಂದರ್ಭದಲ್ಲಿ ಸಾಮೂಹಿಕ ಪ್ರಾರ್ಥನಾ ಸಭೆಯಲ್ಲಿ ಜೆಎಸ್‌ಎಸ್ ಉಚಿತ ವಸತಿ ಶಾಲೆಯ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು (20 ಆಗಸ್ಟ್ 2025)



ಸುತ್ತೂರು ಶ್ರೀಕ್ಷೇತ್ರದಲ್ಲಿ ಆಯೋಜಿಸಿದ್ದ ಭಜನಾ ಕಾರ್ಯಾಗಾರವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಡಾ. ಎನ್.ಬಿ. ಪ್ರಕಾಶ್‌ರವರು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು. ಡಾ. ಬಿ.ಇ. ರಂಗಸ್ವಾಮಿ, ಶ್ರೀಮತಿ ಬಿ.ಎನ್. ವೀಣಾ, ಪ್ರೊ. ಕೆ. ಅನಂತರಾಮು, ಶ್ರೀ ಕೆ. ರಘುರಾಮ್ ವಾಜಪೇಯಿರವರು ಹಾಗೂ ಶಿಬಿರಾರ್ಥಿಗಳಿದ್ದಾರೆ (2 ಆಗಸ್ಟ್ 2026)



ಸುತ್ತೂರು ಶ್ರೀಕ್ಷೇತ್ರದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಏರ್ಪಡಿಸಿದ್ದ ಭಜನಾ ಕಾರ್ಯಾಗಾರದ ಸಮಾರೋಪದಲ್ಲಿ ಕನ್ನಡಪ್ರಭ ದಿನಪತ್ರಿಕೆಯ ಸಂಪಾದಕರಾದ ಶ್ರೀ ಗಿರೀಶ್ ರಾವ್ ಹತ್ವಾರ್ (ಜೋಗಿ) ಯವರು ಮಾತನಾಡಿದರು. ಶ್ರೀ ಗುಂಡಪ್ಪಗೌಡ, ಡಾ. ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು, ಹಾಗೂ ಶ್ರೀಮತಿ ಶೈಲಜಾ ಪ್ರಿಯದರ್ಶಿನಿಯವರುಗಳಿದ್ದಾರೆ (6 ಆಗಸ್ಟ್ 2026)



ಮಲೆ ಮಹದೇಶ್ವರ ಬೆಟ್ಟದ ಶ್ರೀ ಸಾಲೂರು ಬೃಹನ್ಮಠದಲ್ಲಿ ಮಠಾಧಿಪತಿಗಳ ಗೋಷ್ಠಿಯಿಂದ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಆಯೋಜಿಸಿದ್ದ ವಿಚಾರ ಸಂಕಿರಣದ ಸಮಾರೋಪದಲ್ಲಿ ಗದಗ ಶ್ರೀ ತೋಂಟದಾರ್ಯಮಠದ ಜಗದ್ಗುರು ಶ್ರೀ ತೋಂಟದ ಸಿದ್ಧರಾಮ ಮಹಾಸ್ವಾಮಿಗಳು ಆಶೀರ್ವದಿಸುತ್ತಿರುವುದು. ಶ್ರೀ ನಂಜುಂಡಸ್ವಾಮಿ, ಶ್ರೀ ಜಿ.ಕೆ. ಮಣಿ, ಸಾಲೂರು ಶ್ರೀಗಳು, ನಿಶ್ಚಲಾನಂದನಾಥ ಶ್ರೀಗಳು, ಹುಬ್ಬಳ್ಳಿ ಜಗದ್ಗುರುಗಳು, ಸಿದ್ಧಗಂಗೆ ಕಿರಿಯ ಶ್ರೀಗಳು, ಕನಕಪುರ ಶ್ರೀಗಳು, ಶ್ರೀ ನಿಶಾಂತ್ ಹಾಗೂ ಶ್ರೀ ಪುರುಷೋತ್ತಮ್‌ರವರುಗಳಿದ್ದಾರೆ (4 ಆಗಸ್ಟ್ 2026)



ಮೈಸೂರಿನಲ್ಲಿ ಕೆ.ಎಸ್. ಮಹದೇವಪ್ರಸಾದ್ ಅಭಿನಂದನಾ ಸಮಾರಂಭವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಗೌ.ನ್ಯಾ. ಟಿ.ಜಿ. ಶಿವಶಂಕರೇಗೌಡರು ಉದ್ಘಾಟಿಸಿದರು. ಗೌ.ನ್ಯಾ. ಶ್ರೀ ಬಿ.ಎಸ್. ಪಾಟೀಲ್, ಸಿದ್ಧಗಂಗಾ ಕಿರಿಯ ಶ್ರೀಗಳು, ಆದಿಚುಂಚನಗಿರಿ ಶಾಖಾಮಠದ ಶ್ರೀಗಳು ಹಾಗೂ ಶ್ರೀ ಕೆ.ಎಸ್. ಮಹದೇವಪ್ರಸಾದ್ ದಂಪತಿಗಳಿದ್ದಾರೆ (16 ಆಗಸ್ಟ್ 2026)



ಸುತ್ತೂರು ಶ್ರೀಕ್ಷೇತ್ರದಲ್ಲಿ ಶ್ರಾವಣಮಾಸದ ಪೂಜಾನುಷ್ಠಾನ ಮತ್ತು ಪ್ರವಚನ ಕಾರ್ಯಕ್ರಮವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರೀಮತಿ ಎಂ.ಎಸ್. ಅರ್ಚನರವರು ಉದ್ಘಾಟಿಸಿದರು. ವಿದ್ವಾನ್ ಡಾ. ಮೈಸೂರು ಮಂಜುನಾಥ್, ಶ್ರೀಮತಿ ಆರ್. ಐಶ್ವರ್ಯ, ಹಂಚೀಪುರದ ಶ್ರೀ ಪಟ್ಟದ ಮಠದ ಶ್ರೀ ತೋಂಟದಾರ್ಯ ಸ್ವಾಮಿಗಳವರಿದ್ದಾರೆ (12 ಆಗಸ್ಟ್ 2026)



ಹೊಳೆನರಸೀಪುರದಲ್ಲಿ ಆಯೋಜಿಸಿದ್ದ ಶ್ರೀ ಚೆನ್ನಮ್ಮ ದೇವೇಗೌಡರ ಶ್ರದ್ಧಾಂಜಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು. ಕೇಂದ್ರ ಸಚಿವರಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿ ಹಾಗೂ ಮಾಜಿ ಪ್ರಧಾನಮಂತ್ರಿಗಳಾದ ಶ್ರೀ ಹೆಚ್.ಡಿ. ದೇವೇಗೌಡರು ಮೊದಲಾದವರಿದ್ದಾರೆ (18 ಜುಲೈ 2026)



ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರಾವಣ ಮಾಸದ ಪೂಜಾನುಷ್ಠಾನ ಮತ್ತು ಪ್ರವಚನ ಕಾರ್ಯಕ್ರಮವನ್ನು ಡಾ. ಹರ್ಷ ಪ್ರಿಯಂವದರವರು ಉದ್ಘಾಟಿಸಿದರು. ಡಾ. ಕೆ. ಅನಂತರಾಮು, ಶ್ರೀಮತಿ ಎಂ.ಕೆ. ಸವಿತಾ, ಶ್ರೀ ಇಳೈ ಆಳ್ವಾರ್ ಸ್ವಾಮೀಜಿಯವರಿದ್ದಾರೆ (13 ಆಗಸ್ಟ್ 2026)



ಮೈಸೂರು ವಿವೇಕ ಸ್ಮಾರಕದಲ್ಲಿ ನಡೆದ ಸ್ಮೃತಿ ಸಂಸ್ಮರಣೆ ಕಾರ್ಯಕ್ರಮದಲ್ಲಿ ಪರಮಪೂಜ್ಯ ಜಗದ್ಗುರುಗಳವರು ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಶ್ರೀ ಡಿ. ನಾಗಭೂಷಣ್, ಡಾ. ಯತೀಂದ್ರ ಸಿದ್ದರಾಮಯ್ಯ, ಶ್ರೀ ಸ್ವಾಮಿ ಮುಕ್ತಿದಾನಂದಜೀ, ಶ್ರೀ ಎಂ.ಪಿ. ಶ್ಯಾಮ್‌ರವರಿದ್ದಾರೆ (13 ಆಗಸ್ಟ್ 2026)



ಮಲೆ ಮಹದೇಶ್ವರ ಬೆಟ್ಟದ ಶ್ರೀ ಸಾಲೂರು ಮಠದಲ್ಲಿ ಮೈಸೂರು–ಚಾಮರಾಜನಗರ ಜಿಲ್ಲಾ ವೀರಶೈವ–ಲಿಂಗಾಯತ ಮಠಾಧಿಪತಿಗಳ ಗೋಷ್ಠಿಯಿಂದ ಆಯೋಜಿಸಿದ್ದ ಶ್ರೀ ಮಲೆ ಮಹದೇಶ್ವರರು ಮತ್ತು ಸಮಕಾಲೀನರು ಕುರಿತ ವಿಚಾರ ಸಂಕಿರಣವನ್ನು ಗೌ.ನ್ಯಾ. ಇ.ಎಸ್. ಇಂದ್ರೇಶ್‌ರವರು ಜ್ಯೋತಿ ಬೆಳಗಿಸಿ ಉದ್ಘಾಟಿಸಿದರು. ಡಾ. ಎಸ್. ದತ್ತೇಶ್ ಕುಮಾರ್, ಸಾಲೂರು ಮಠದ ಶ್ರೀಗಳು, ಶ್ರೀ ಹೆಚ್.ಎಂ. ಗಣೇಶ್‌ಪ್ರಸಾದ್, ಸಿದ್ಧಗಂಗಾ ಮಠದ ಶ್ರೀಗಳು, ಸುತ್ತೂರು ಹಾಗೂ ಹುಬ್ಬಳ್ಳಿ ಜಗದ್ಗುರುಗಳವರು, ಶ್ರೀಮತಿ ಪರಿಮಳಾ ನಾಗಪ್ಪ ಹಾಗೂ ಶ್ರೀ ವೆಂಕಟೇಶ್‌ರವರುಗಳಿದ್ದಾರೆ (2 ಆಗಸ್ಟ್ 2026)



ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ 80ನೇ ಸ್ವಾತಂತ್ರ್ಯ ದಿನಾಚರಣೆಯಂದು ಶ್ರೀ ಎಸ್. ತಳಿಕೇರಪ್ಪನವರು ಧ್ವಜಾರೋಹಣವನ್ನು ನೆರವೇರಿಸಿದರು (15 ಆಗಸ್ಟ್ 2026)



ಮೈಸೂರಿನ ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಸಂಸ್ಕೃತೋತ್ಸವವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಡಾ. ರೇಚಣ್ಣ, ಡಾ. ಬಿ.ಪಿ. ಷಡಕ್ಷರಿ, ಡಾ. ಸಿ. ಶಿವಕುಮಾರಸ್ವಾಮಿ, ಡಾ. ಸಿ. ಶಿವರಾಜು, ಪ್ರೊ. ಕೋಟೆಮನೆ ರಾಮಚಂದ್ರ ಜಿ. ಭಟ್, ಡಾ. ಎಸ್. ಅಹಲ್ಯಾ ಹಾಗೂ ಡಾ. ಬಿ. ನಂಜುಂಡಸ್ವಾಮಿಯವರುಗಳಿದ್ದಾರೆ (19 ಆಗಸ್ಟ್ 2026)



ಮೈಸೂರಿನಲ್ಲಿ ಕುವೆಂಪು ವಿಶ್ವಮಾನವ ಕ್ಷೇಮಾಭಿವೃದ್ಧಿ ಟ್ರಸ್ಟ್‌ನಿಂದ ಆಯೋಜಿಸಿದ್ದ ವಾರ್ಷಿಕೋತ್ಸವವನ್ನು ಪರಮಪೂಜ್ಯ ಜಗದ್ಗುರುಗಳವರು, ಆದಿಚುಂಚನಗಿರಿ ಹಾಗೂ ವಿಶ್ವ ಒಕ್ಕಲಿಗರ ಮಠದ ಜಗದ್ಗುರುಗಳ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಎನ್. ಚಲುವರಾಯಸ್ವಾಮಿ, ಶ್ರೀ ಹೆಚ್.ಎಂ. ಗಣೇಶ್‌ಪ್ರಸಾದ್, ಡಾ. ಯತೀಂದ್ರ ಸಿದ್ದರಾಮಯ್ಯ, ಶ್ರೀ ಸಿದ್ಧರಾಮಯ್ಯ, ಶ್ರೀ ಸೋಮೇಶ್ವರನಾಥ ಸ್ವಾಮಿಗಳು, ಡಾ. ಡಿ. ತಿಮ್ಮಯ್ಯ ಮೊದಲಾದವರಿದ್ದಾರೆ (15 ಆಗಸ್ಟ್ 2026)



ಮಲೆ ಮಹದೇಶ್ವರ ಬೆಟ್ಟದಲ್ಲಿ ಮಠಾಧಿಪತಿಗಳ ಗೋಷ್ಠಿಯಿಂದ ಆಯೋಜಿಸಿದ್ದ ವಿಚಾರ ಸಂಕಿರಣ ಸಂದರ್ಭದಲ್ಲಿ ಶ್ರೀ ಮಹದೇಶ್ವರರು ತಪಗೈದ ತಪಸಾರೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರುಗಳವರು, ಹುಬ್ಬಳ್ಳಿ, ಗದಗ ಜಗದ್ಗುರುಗಳು ಮತ್ತು ಸಿದ್ಧಗಂಗಾ ಕಿರಿಯ ಶ್ರೀಗಳೊಂದಿಗೆ ವಿವಿಧ ಮಠಾಧಿಪತಿಗಳಿದ್ದಾರೆ (5 ಆಗಸ್ಟ್ 2025)

Registered with the Registrar of Newspapers in India Under No. 50622 / 1986
'Prasada' Monthly, Vol. 41 Issue No. 8, August 2026



ISSN 2583-7648

ಬಿಡಿ ಪ್ರತಿ : ರೂ.10/–

e-mail: prasada@jssonline.org * www.jssonline.org